ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪುಟಗಳು : 36

ರೂ. 28/-

ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA


ಸಂಪುಟ-06 • ಸಂಚಿಕೆ-07 • ಡಿಸೆಂಬರ್ 2024











1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ







ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-06 • ಸಂಚಿಕೆ-07 • ಡಿಸೆಂಬರ್ 2024

05 ಗಾಂಧಿ ಮತ್ತು ಪ್ರೇಮಚಂದ್ : ಒಂದೇ ನಾಣ್ಯದ ಎರಡು ಮುಖಗಳು
- ಡಾ.ಎನ್.ದೇವರಾಜ್

10 ಬೆಳಗಾವಿ ಕಾಂಗ್ರೆಸ್ ಅಧಿವೇಶನ - 1924 ಹಿನ್ನೆಲೆ

12 ಗಾಂಧೀಜಿ ಅನುಯಾಯಿಯ ಜೊತೆ
-ಗಿರಿಧರ ಖಾಸನೀಸ

14 ಕವಿಗಳ ಕಣ್ಣಲ್ಲಿ ಗಾಂಧಿ
-ರಘುನಾಥ್ ಕೃಷ್ಣಮಾಚಾರ್

16 ಚಿತ್ರಾವಳಿ

22 ಪೆರಿಯಾರ್: ರಚ್ಚೆ ಹಿಡಿದ ಮಗು
-ಅಗ್ರಹಾರ ಕೃಷ್ಣಮೂರ್ತಿ

26 ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ

29 ಪುಸ್ತಕ ಪರಿಚಯ : ಪ್ರಿಯ ಮೀರಾ

30 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಚಿತ್ರಾವಳಿ

33 ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.
-ನಟರಾಜ್ ಹುಳಿಯಾರ್

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು
ಬಾಪು ಪ್ರಪಂಚದಲ್ಲಿನ ಚಿತ್ರಗಳು ಸಾಂದರ್ಭಿಕವಾಗಿರುತ್ತದೆ

Design : **Ujwal Creations,** Bangalore

ಪತ್ರಗಳು

ಮಾನ್ಯರೆ ,

ನವೆಂಬರ್ ಸಂಚಿಕೆ ಉತ್ತಮವಾಗಿ ಬಂದಿದೆ. ಜಗದೀಶ್ ಕೊಪ್ಪ ಅವರ ಲೇಖನ ಓದಿದೆ, ಬಹಳ ವಿಮರ್ಶಾತ್ಮಕವಾಗಿ ಮೂಡಿ ಬಂದಿದೆ.

– ಡಾ. ಎನ್. ದೇವರಾಜ್, ಬೆಂಗಳೂರು

* * *

ಮಾನ್ಯರೆ ,

ನವಂಬರ್ ತಿಂಗಳ ಬಾಪು ಪ್ರಪಂಚ ಪತ್ರಿಕೆಯ ಮುಖಪುಟದಲ್ಲಿ ಗಾಂಧಿ ನೆಹರು ಸೊಗಸಾಗಿ ಮೂಡಿ ಬಂದಿದೆ. ಒಳಪುಟಗಳಲ್ಲಿ ನೆಹರು ಬಗ್ಗೆ ಹೆಚ್ಚು ಮಾಹಿತಿಗಳಿಲ್ಲ. ಗಾಂಧಿ ಮತ್ತು ನೆಹರು ನಡುವೆ ಇದ್ದ ಪ್ರೀತಿ ವಿಶ್ವಾಸಗಳ ಬಗ್ಗೆ ಮಾಹಿತಿ ನೀಡುವ ಲೇಖನಗಳನ್ನು ಮುಂದಿನ ಸಂಚಿಕೆಗಳಲ್ಲಿ ನೀಡಿ.

ಶಶಿಧರ್, ನೆಹರು ಪ್ರಿಯರು, ತುಮಕೂರು .


* * *

ಮಾನ್ಯರೆ ,

ಮಕ್ಕಳಿಗಾಗಿ ಗಾಂಧಿ ಪುಟವನ್ನು ಬಾಪು ಪ್ರಪಂಚದಲ್ಲಿ ಆರಂಭಿಸಿ . ಗಾಂಧಿ ವಿಚಾರಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕೆಲಸ ಈಗಲಾದರು ಆರಂಭವಾಗ ಬೇಕು .

ಇಡೀ ವಿಶ್ವವೇ ಒಪ್ಪಿಕೊಂಡಿರುವ ಗಾಂಧಿಯ ಸತ್ಯ , ಶಾಂತಿಯ ವಿಚಾರಗಳನ್ನು ನಮ್ಮ ಮಕ್ಕಳ ಮನಸ್ಸಿಗೆ ತಲುಪಿಸದಿದ್ದರೆ ಹೇಗೆ ?

ವಿಜಯ್ ಹನಕೆರೆ, ಮಂಡ್ಯ




ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
https://gandhibhavan.in
ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ಗಾಂಧಿ ಮತ್ತು ಪ್ರೇಮಚಂದ್ : ಒಂದೇ ನಾಣ್ಯದ ಎರಡು ಮುಖಗಳು

– ಡಾ.ಎನ್.ದೇವರಾಜ್

'ದೇ ದೀ ಹಮೆ ಆಜಾದಿ ಬಿನಾ ಖಡ್ಗ ಬಿನಾ ಢಾಲ್,
ಸಾಬರ್‌ಮತಿ ಕೇ ಸಂತ್ ತೂನೇ ಕರ್‌ದಿಯಾ ಕಮಾಲ್!

ಬಾಲ್ಯ ಮತ್ತು ವಿದ್ಯಾಭ್ಯಾಸ

ಮಹಾತ್ಮಾ ಗಾಂಧಿಯವರು ಅಕ್ಟೋಬರ್ 2 ,1869 ರಂದು ಪೋರಬಂದರಿನಲ್ಲಿ ಅವರ ತಂದೆ-ತಾಯಿಗೆ ಐದನೆಯ ಸಂತಾನವಾಗಿ ಜನಿಸಿದರು. ಪ್ರೇಮಚಂದ್ ಅವರು ಜುಲೈ 31 ,1880 ರಂದು ವಾರಣಾಸಿಯ ಸಮೀಪವಿರುವ ಲಮಹೀ ಎಂಬ ಹಳ್ಳಿಯಲ್ಲಿ ಜನಿಸಿದರು. ಗಾಂಧೀಜಿಯವರ ತಂದೆಯವರಾದ ಕರಮಚಂದ ಗಾಂಧಿಯವರು ಕಿರಾಣಿ ಅಂಗಡಿಯ ಮಾಲೀಕರಾದರೆ ಪ್ರೇಮಚಂದ್ ಅವರ ತಂದೆಯವರಾದ ಅಜಾಯಬ್ ರಾಯ್ ಪೋಸ್ಟ್ ಆಫೀಸಿನಲ್ಲಿ ಸಾಧಾರಣ ನೌಕರಿಯಲ್ಲಿದ್ದರು. ಗಾಂಧಿಯವರ ಜೀವನ ಸುಖ-ಸಮೃದ್ಧಿಯಿಂದ ಕೂಡಿದ್ದರೆ ಪ್ರೇಮಚಂದ್ ಅವರ ಜೀವನ ಕಷ್ಟದಲ್ಲೇ ಕಳೆಯಿತು ಎನ್ನಬಹುದು. ಪ್ರೇಮಚಂದ್ ಅವರು ಎಂಟು ವರ್ಷದ ಹುಡುಗನಾಗಿರುವಾಗಲೇ ತಮ್ಮ ತಾಯಿಯನ್ನು ಕಳೆದುಕೊಳ್ಳುತ್ತಾರೆ. ತಂದೆ ಮತ್ತೊಂದು ವಿವಾಹವನ್ನು ಮಾಡಿಕೊಳ್ಳುತ್ತಾರೆ. ಪ್ರೇಮಚಂದ್ ರಿಗೆ ಹದಿನೈದನೆ ವಯಸ್ಸಿಗೆ ತಮಗಿಂತ ಹಿರಿಯಳೊಂದಿಗೆ ವಿವಾಹವಾಗುತ್ತದೆ. ಇದಾದ ಒಂದೇ ವರ್ಷದಲ್ಲಿ ಅವರ ತಂದೆಯವರು ನಿಧನರಾಗುತ್ತಾರೆ. ಹೀಗಾಗಿ ಐದು ಜನರನ್ನು ಸಾಕುವ ಜವಾಬ್ದಾರಿ ಪ್ರೇಮಚಂದ್ ಅವರ ಹೆಗಲ ಮೇಲೆ ಬೀಳುತ್ತದೆ. ಗಾಂಧಿಯವರು ಬ್ಯಾರಿಸ್ಟರ್ ಪದವಿಯನ್ನು ಪಡೆದವರು. ಪ್ರೇಮಚಂದ್ ಕೂಡ ವಕೀಲರಾಗಬೇಕೆಂದು ಬಯಸಿದವರು ಆದರೆ ಅವರ ಜೀವನ ಆರ್ಥಿಕ ಸಂಕಷ್ಟದಿಂದ ಕೂಡಿದುದರಿಂದ ಹಾಗೂ ಬದುಕಿನಲ್ಲಿ ಸಮಸ್ಯೆಗಳ ಸುರಿಮಳೆಗೆ ಸಿಲುಕಿ ನಲುಗುತ್ತಿದ್ದುದರಿಂದ ಅದು ಸಾಧ್ಯವಾಗಲಿಲ್ಲ.

ಒಂದೇ ನಾಣ್ಯದ ಎರಡು ಮುಖಗಳು

ಗಾಂಧಿ ಮತ್ತು ಪ್ರೇಮಚಂದವರನ್ನು ಅವಲೋಕಿಸಿದರೆ ನಮಗೆ ಇವರಿಬ್ಬರ ಗುಣಗಳು ಬೇರೆ-ಬೇರೆ ಎಂದೇನು ಅನಿಸುವುದಿಲ್ಲ. ಇವರು ಒಂದೇ ನಾಣ್ಯದ ಎರಡು ಮಗ್ಗುಲುಗಳು ಇದ್ದ ಹಾಗೆ. ಒಬ್ಬರು ರಾಜಕೀಯ ನಾಯಕರಾದರೆ ಮತ್ತೊಬ್ಬರು ಶ್ರೇಷ್ಠ ಸಾಹಿತಿಗಳು. ಒಬ್ಬರು ರಾಜಕೀಯದ ಉತ್ತುಂಗವನ್ನು ಏರಿದ್ದರೂ ಸರಳ ಜೀವಿಯಾದರೆ ಮತ್ತೊಬ್ಬರು ಸಾಹಿತ್ಯ ಕ್ಷೇತ್ರದ ಉತ್ತುಂಗದಲ್ಲಿದ್ದರು ಸಾಮಾನ್ಯ ಜೀವಿಯಂತೆ ಬದುಕು ಸಾಗಿಸಿದವರು. ಒಂದು ರೀತಿಯಲ್ಲಿ ಇಬ್ಬರೂ ಬರಹಗಾರರೇ. ಜನಸಾಮಾನ್ಯರಿಗೆ ತಿಳಿಯದ ವಿಚಾರವೇನೆಂದರೆ

ಟಾಲ್ ಸ್ಟಾಯ್ ಅವರ ಪ್ರಭಾವ ಗಾಂಧೀಜಿಯವರ ಮೇಲೆ ಬಹಳವೇ ಇತ್ತು. ಗಾಂಧೀಜಿಯವರೂ ಸಹ ಅನೇಕ ಪುಸ್ತಕಗಳನ್ನ ಬರೆದಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ಅವರ ಪತ್ರ ವ್ಯವಹಾರ, ಅದರಲ್ಲಿನ ಪ್ರಬುದ್ಧ ಭಾಷೆಯ ಬಳಕೆ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಹಾಗಾಗಿ ಒಂದುವೇಳೆ ಗಾಂಧೀಜಿ ರಾಜಕೀಯ ಕ್ಷೇತ್ರಕ್ಕೆ ಬಾರದೆ ಇದ್ದಿದ್ದರೆ ಅವರು ಪ್ರಪಂಚದ

ಅತ್ಯುತ್ತಮ ಬರಹಗಾರರಾಗುತ್ತಿದ್ದರು.

ಸಾಹಿತ್ಯ ಸಮಾಜದ ಕನ್ನಡಿ

ಗಾಂಧಿ ದಕ್ಷಿಣ ಆಫ್ರಿಕಾದಿಂದ 1915 ರಲ್ಲಿ ಭಾರತಕ್ಕೆ ಹಿಂದಿರುಗುತ್ತಾರೆ ಮತ್ತು ಬಂದ ಕೂಡಲೇ ರಾಷ್ಟ್ರೀಯ , ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ತಮ್ಮ ಪ್ರಭಾವವನ್ನು ಬೀರಲು ಪ್ರಾರಂಭಿಸುತ್ತಾರೆ. ಭಾರತೀಯ ಸಾಹಿತ್ಯ ಕೂಡ ಇದಕ್ಕಿಂತ ಭಿನ್ನವಾಗಿರಲಿಲ್ಲ. ಹಾಗಾಗಿಯೇ "ಸಾಹಿತ್ಯ ಸಮಾಜದ ಕನ್ನಡಿ' ಎಂದು ಕರೆಯುವುದು. ಗಾಂಧಿಯವರು ಇಡೀ ಭಾರತೀಯ ಸಾಹಿತ್ಯದ ಮೇಲೆ ಪ್ರಭಾವ ಬೀರಿದ್ದರು. ಇದು ಅನೇಕ ರೀತಿಯಲ್ಲಿ ಸಂಭವಿಸಿತ್ತು. ಕಾದಂಬರಿಯ ಪಾತ್ರಗಳು ಗಾಂಧೀಜಿಯವರ ಜೀವನವನ್ನು ಆಧರಿಸಿದಂತವು ಹಾಗೂ ಗಾಂಧೀಜಿಯವರ ಆಲೋಚನೆಗಳು ಮತ್ತು ಜೀವನ ದೃಷ್ಟಿಗೆ ಮಾದರಿಯಾದವು. ಇದಲ್ಲದೆ ಗಾಂಧೀಜಿಯವರ ಜೀವನದಲ್ಲಿ ನಡೆದ ಘಟನೆಗಳನ್ನು ಪ್ರತಿಬಿಂಬಿಸುವಂತಹ ಪಾತ್ರಗಳನ್ನು ಸೃಷ್ಟಿಸಲಾಯಿತು. ಗಾಂಧೀಜಿಯವರು ಪ್ರಚಾರ ಮಾಡಿದ ರಾಷ್ಟ್ರೀಯ ಚಳುವಳಿಗಳನ್ನು ಚಿತ್ರಿಸಲಾಯಿತು. ಗಾಂಧಿಯವರ ಕೆಲವು ತತ್ವಗಳನ್ನು ವಿಶ್ಲೇಷಿಸಲು ಕಥೆಗಳನ್ನು ರಚಿಸಲಾಯಿತು. ಉದಾಹರಣೆಗೆ ಹೃದಯ ಪರಿವರ್ತನೆ, ಅಹಿಂಸಾತ್ಮಕ ವಿರೋಧ, ಸತ್ಯದ ವಿಶ್ಲೇಷಣೆ, ಟ್ರಸ್ಟೀಶಿಪ್‌ನ ಪರಿಕಲ್ಪನೆ, ಕೈಗಾರಿಕಾ ಅಭಿವೃದ್ಧಿಯ ಸಮಯದಲ್ಲಿ ಹೆಚ್ಚುತ್ತಿರುವ ಅನೈತಿಕತೆ, ದಲಿತರು, ತುಳಿತಕೊಳ್ಳಗಾದ, ಬಿದ್ದ, ಶೋಷಿತ ಸಮಾಜದ ಬಗ್ಗೆ ಸಹಾನುಭೂತಿ ಮುಂತಾದವು.

ಈ ದೇಶದಲ್ಲಿ ಗಾಂಧೀಜಿಯವರಷ್ಟು ಅಪಹಾಸ್ಯಕ್ಕೆ ಗುರಿಯಾದ ವ್ಯಕ್ತಿ ಮತ್ತೊಬ್ಬರಿಲ್ಲ ಎಂಬುದು ನನ್ನ ಭಾವನೆ. ಇಲ್ಲಿ ಗಾಂಧೀಜಿಯ ಬ್ರಹ್ಮಚರ್ಯದ ಪರಿಕಲ್ಪನೆಯನ್ನು ಸಹ ಅಪಹಾಸ್ಯ ಮಾಡಲಾಯಿತು. ಇದು ಅಪ್ರಾಯೋಗಿಕವೆಂದು ಪರಿಗಣಿಸಿ ಗಾಂಧಿವಾದವನ್ನು ಪರೀಕ್ಷಿಸಲಾಯಿತು. ಜೀವನದ ಸಂಕೀರ್ಣತೆಯ ಹಿನ್ನೆಲೆಯಲ್ಲಿ ಅವರ ಸರಳತೆ ಮತ್ತು ಪರಿಶುದ್ಧತೆಯನ್ನು ವಿಡಂಬನೆ ಮಾಡಲಾಯಿತು. ಏನೇ ಆಗಲಿ ಗಾಂಧಿಯವರು ತಮ್ಮ ವ್ಯಕ್ತಿತ್ವ ಮತ್ತು ಕೆಲಸ, ತಮ್ಮ ಚಿಂತನೆ ಮತ್ತು ನಮ್ರತೆಯ ಮೂಲಕ ಸಾಹಿತಿಗಳಿಗೆ ಸಾಕಷ್ಟು ವಿಷಯವಸ್ತುಗಳನ್ನು ಒದಗಿಸಿದ್ದಾರೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಪ್ರೇಮಚಂದ್ ಅವರ ಮೇಲೆ ಗಾಂಧಿ ಪ್ರಭಾವ

ಗಾಂಧೀಜಿ ಎಂದರೆ ಅದು ಒಬ್ಬ ವ್ಯಕ್ತಿ ಅಲ್ಲ, ಅವರೊಂದು ಶಕ್ತಿ ಎಂದರೆ ತಪ್ಪಾಗಲಾರದು ಏಕೆಂದರೆ ಅವರಿಂದ ಭಾರತೀಯರು ಮಾತ್ರವಲ್ಲದೆ ಪಾಶ್ಚಾತ್ಯ ವಿದ್ವಾಂಸರೂ, ರಾಜಕೀಯ ನಾಯಕರೂ ಸಹ ಪ್ರಭಾವಿತರಾಗಿದ್ದರು. ಪ್ರೇಮಚಂದ್ ಅವರು ಹಿಂದಿ ಸಾಹಿತ್ಯದಲ್ಲಿ ಕಾದಂಬರಿ ಚಕ್ರವರ್ತಿ ಎಂದು ಕರೆಸಿಕೊಂಡವರು. ಗಾಂಧೀಜಿ ತನ್ನ 'ಅಹಿಂಸೆ', 'ಸತ್ಯಾಗ್ರಹ' ಎಂಬ ಗುರಾಣಿ ಹಿಡಿದು ಬ್ರಿಟಿಶರನ್ನು ಸದೆಬಡಿಯುತ್ತಿದ್ದರೆ ಪ್ರೇಮಚಂದ್ ತನ್ನ ಸಾಹಿತ್ಯದ ಮುಖಾಂತರ ಸಮಾಜದ ರೀತಿ ನೀತಿಗಳನ್ನು, ನೋವು ನಲಿವುಗಳನ್ನು ಅಕ್ಷರ ರೂಪಕ್ಕಿಳಿಸಿ ಓದುಗರ ಮನಸ್ಸನ್ನು ವಿಹ್ವಲಗೊಳಿಸುತ್ತಿದ್ದರು.

ಪ್ರೇಮಚಂದ್ ಅವರ ಸಾಹಿತ್ಯದ ಉತ್ಥಾನದ ಕಾಲವು ಗಾಂಧೀಜಿಯವರು ದೇಶದ ಉದ್ದಗಲಕ್ಕೂ ಓಡಾಡಿ ಬ್ರಿಟೀಷರ ವಿರುದ್ಧ ಇಡೀ ಭಾರತವನ್ನು ಚಳುವಳಿಗೆ (1906-1936) ಸಿದ್ಧಗೊಳಿಸುತ್ತಿದ್ದ ಕಾಲವೇ ಆಗಿತ್ತು ಹಾಗಾಗಿ ಗುಲಾಮಿ ದೇಶದ ಒಬ್ಬ ಸಾಹಿತಿ ತನ್ನ ಯುಗದಲ್ಲಿನ ಮಹಾನ್ ಘಟನೆಗಳನ್ನು ಹೇಗೆ ತಾನೇ ನಿರ್ಲಕ್ಷಿಸಲು ಸಾಧ್ಯ?

ಪ್ರೇಮಚಂದ್ ಅವರ ಸಾಹಿತ್ಯದಲ್ಲಿ ಗಾಂಧೀಜಿಯವರ ಸತ್ಯ, ಅಹಿಂಸೆ, ಹೃದಯ ಪರಿವರ್ತನೆಯ ಜೊತೆಗೆ ಅಸಹಕಾರ ಮತ್ತು ನಾಗರಿಕ ಅಸಹಕಾರ ಚಳುವಳಿಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. 1921 ರಿಂದ ಅವರ ಜೀವನದ ಕೊನೆಯ ಕ್ಷಣದವರೆಗಿನ ಅವರ ಕಥೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಈ ಕಥೆಗಳು ಗಾಂಧಿಯವರ ಹೋರಾಟ ಮತ್ತು ಗಾಂಧೀವಾದದ ಜೀವಂತ ಅನುಭವಗಳನ್ನು ಕಟ್ಟಿಕೊಡುತ್ತವೆ. ಇದನ್ನು ನಾವು ಪ್ರೇಮಚಂದ್ ಅವರ ಗಾಂಧೀವಾದದ ಸಾಹಿತ್ಯಿಕ ಆವೃತ್ತಿ ಎಂದು ಕರೆಯಬಹುದು.

ಪಾಶ್ಚಾತ್ಯ ನಾಗರಿಕತೆ , ಬ್ರಿಟಿಷ್ ಸಾಮ್ರಾಜ್ಯಶಾಹಿ, ಗ್ರಾಮೀಣ ಪ್ರಜ್ಞೆ ಮುಂತಾದವುಗಳಲ್ಲಿ ಪ್ರೇಮಚಂದ್ ಮತ್ತು ಗಾಂಧಿ ಅವರ ನಡುವೆ ಸಾಮ್ಯತೆ ಇರುವುದನ್ನು ಕಾಣಬಹುದು. ಉದಾ: ಗಾಂಧಿಯವರು ಕಾರ್ಖಾನೆಗಳ ಸ್ಥಾಪನೆಯನ್ನು ವಿರೋಧಿಸುತ್ತಿದ್ದರು ಹಾಗೆಯೇ ಪ್ರೇಮಚಂದ್ ಅವರು ಕಾರ್ಖಾನೆಯ ಸ್ಥಾಪನೆಯ ವಿರುದ್ಧ ಸೂರ್‌ದಾಸ್ ಎನ್ನುವ ಪಾತ್ರದ ಮುಖಾಂತರ ಗ್ರಾಮ ಭೂಮಿಯನ್ನು ರಕ್ಷಿಸುವ ಹೋರಾಟವನ್ನು ಚಿತ್ರಿಸಿದ್ದಾರೆ. ಈ ರೀತಿ ಅವರು ಗಾಂಧಿಯ ಧರ್ಮವನ್ನೇ ಅನುಸರಿಸಿದ್ದಾರೆ. ಪ್ರೇಮಚಂದ್ ಅವರ 'ಕರ್ಮಭೂಮಿ' (ಸೆಪ್ಟೆಂಬರ್ 1932) ಯು ಗಾಂಧಿಯವರ ಸ್ವರಾಜ್ಯ ಮತ್ತು ಅದರ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಆದರಿಸಿರುವಂತಹ ಕಾದಂಬರಿ. ಇದರಲ್ಲಿ ಗಾಂಧಿಯವರ ಉಪ್ಪಿನ ಮೇಲಿನ ತೆರಿಗೆಯನ್ನು ವಿರೋಧಿಸುವುದು, ನಾಯಕರುಗಳ ಬಂಧನ, ಗಾಂಧಿ-ಇರ್ವಿನ್ ಒಪ್ಪಂದ, ರೈತರ ಮೇಲಿನ ತೆರಿಗೆಯ ವಿರುದ್ಧದ ಚಳುವಳಿ ಇನ್ನು ಮುಂತಾದ ಘಟನೆಗಳ ನೇರ ಪ್ರಭಾವವನ್ನು ಕಾಣಬಹುದು.

ಗಾಂಧೀಜಿಯವರು ತಮ್ಮ ಸ್ವರಾಜ್ಯ ಚಳುವಳಿಗಳ ಮೂಲಕ ಜನರಲ್ಲಿ ಸ್ವಾತಂತ್ರ್ಯ ಮತ್ತು ರಾಮರಾಜ್ಯದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುತ್ತಿದ್ದರು . ಅದೇ ಸಂದರ್ಭದಲ್ಲಿ ಪ್ರೇಮಚಂದ್ ಅವರು ನೈಜ ಅನುಭವಗಳನ್ನು ತಮ್ಮ ಸೂಕ್ಷ್ಮತೆ ತುಂಬಿದ ಕಥೆಗಳಿಂದ ಓದುಗರನ್ನು ಈ ಮಹಾಯುದ್ಧಕ್ಕೆ ಅಣಿಗೊಳಿಸುತ್ತಿದ್ದರು. ಗಾಂಧಿ ಮತ್ತು ಪ್ರೇಮಚಂದ್ ಅವರು ಒಟ್ಟಿಗೆ ಸೇರಿದಾಗ 'ರಂಗಭೂಮಿ', 'ಕರ್ಮಭೂಮಿ', 'ಗೋದಾನ್ ನಂತಹ ಕಾದಂಬರಿಗಳು ಮತ್ತು 'ಲಾಲ್‌ಫೀತಾ', 'ಸುಹಾಗ್ ಕೀ ಸಾಡಿ', 'ಸ್ವತ್ವ-ರಕ್ಷಾ'. 'ಮಂದಿರ ಮತ್ತು ಮಸೀದಿ', 'ರಾಜೀನಾಮೆ', 'ಮೆರವಣಿಗೆ', 'ಸಮರ ಯಾತ್ರೆ', 'ಜೈಲು', 'ಕೊನೆಯ ವಜ್ರ' 'ಕೊಲೆಗಡುಕ', 'ರಹಸ್ಯ' ದಂತಹ ಕಥೆಗಳು ಓದುಗನ ಮನಸ್ಸಿನಲ್ಲಿ ಗುಲಾಮಗಿರಿಯ ಸಂಕೋಲೆಯನ್ನು ಕಿತ್ತೆಸೆದು ಸ್ವಾತಂತ್ರ್ಯವನ್ನು ಪಡೆಯುವ ಭಾವನೆಯನ್ನು ಮೂಡಿಸುತ್ತವೆ.

ಪ್ರೇಮಚಂದ್ ಹಾಗೂ ಗಾಂಧಿ ಮೊದಲ ಭೇಟಿ ಮತ್ತು ಸರ್ಕಾರಿ ಕೆಲಸಕ್ಕೆ ರಾಜೀನಾಮೆ

ಗಾಂಧಿಯವರು ಕೇವಲ ಭಾರತೀಯರು ಮಾತ್ರವಲ್ಲದೆ ವಿಶ್ವದ ಖ್ಯಾತ ನಾಯಕರ ಮೇಲೂ ಪ್ರಭಾವ ಬೀರಿದ್ದರು . ಅವರಲ್ಲಿ ಪ್ರಮುಖವಾಗಿ ರವೀಂದ್ರನಾಥ ಟ್ಯಾಗೋರ್, ಬರ್ನಾಡ್ ಶಾ, ಆಲ್ಬರ್ಟ್ ಐನ್‌ಸ್ಟಿನ್ ಪ್ರಮುಖರು. ಆ ಸಮಯದಲ್ಲಿ ಬ್ರಿಟಿಷರ ಗುಲಾಮಗಿರಿಯ ವಿರುದ್ಧ ಎಲ್ಲೆಡೆ ಸ್ವಾತಂತ್ರ್ಯದ ಕಹಳೆಯು ಜನಮಾನಸದಲ್ಲಿ ಜಾಗೃತಿಯನ್ನು ಮೂಡಿಸುತ್ತಿತ್ತು. ಇದರಿಂದ ಸಾಹಿತಿಗಳೂ ಕೂಡ ಪ್ರಭಾವಿತರಾಗಿದ್ದರು. ಪ್ರೇಮ್‌ಚಂದ್ ಅವರ ಕಥಾ ಸಂಕಲನ

'ಸೋಜೇವತನ್' (1908) ನಲ್ಲಿ ಈ ದೇಶಪ್ರೇಮದ ಪ್ರತಿಧ್ವನಿ ಕೇಳಿಸುತ್ತದೆ. 1915 ರಲ್ಲಿ ಗಾಂಧೀಜಿಯವರು ಭಾರತಕ್ಕೆ ಬಂದ ನಂತರ 1916 ರಲ್ಲಿ ಪ್ರಕಟಗೊಂಡ 'ಕರ್ಮವೀರ ಗಾಂಧಿ' ಪುಸ್ತಕದ ಮುನ್ನುಡಿಯಲ್ಲಿ ಗಾಂಧಿಯವರನ್ನು ಅಭಿನಂದಿಸುತ್ತಾ ಪ್ರೇಮಚಂದ್ ಅವರು 'ಭಾರತದಲ್ಲಿ ಮಹಾತ್ಮ ಗಾಂಧಿಯವರ ಶಾಶ್ವತ ಆಗಮನದೊಂದಿಗೆ ನಮ್ಮ ರಾಷ್ಟ್ರೀಯ ಜೀವನದಲ್ಲಿ ಅದ್ಭುತ ಚೈತನ್ಯ, ಜೀವಂತಿಕೆ ಮತ್ತು ಪ್ರಾಯೋಗಿಕ ಉದ್ಯಮವು ಅಭಿವೃದ್ಧಿಗೊಂಡಿದೆ ಎಂದು ಅವರು ಬರೆಯುತ್ತಾರೆ. ಫೆಬ್ರವರಿ 8, 1921 ರಂದು ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಗೋರಖ್‌ಪುರದ ಗಾಜಿ ಮಿಯಾನ್ ಮೈದಾನದಲ್ಲಿ ಮೊಟ್ಟ ಮೊದಲ ಬಾರಿ ಅವರು ಗಾಂಧಿಯವರನ್ನು ನೋಡುತ್ತಾರೆ. ಅವರಿಂದ ಪ್ರಭಾವಿತರಾಗುತ್ತಾರೆ. ಅಲ್ಲಿ ನೆರೆದಿದ್ದ ಲಕ್ಷಾಂತರ ಜನರನ್ನು ಉದ್ದೇಶಿಸಿ ಗಾಂಧಿಯವರು ಸರ್ಕಾರಿ ಉದ್ಯೋಗಗಳನ್ನು, ಕಾಲೇಜುಗಳನ್ನು, ವಿಶ್ವವಿದ್ಯಾಲಯಗಳನ್ನು ತೊರೆಯಲು ಕರೆ ನೀಡುತ್ತಾರೆ. ಆಗ ಪ್ರೇಮಚಂದ್ ಅವರು ಮನೆಗೆ ಬಂದು ತಮ್ಮ ಪತ್ನಿಯ ಒಪ್ಪಿಗೆ ಪಡೆದು ಫೆಬ್ರವರಿ 15, 1921 ರಂದು ರಾಜೀನಾಮೆ ನೀಡಿ ತಮ್ಮ ಹುಟ್ಟೂರು ಲಮಹಿಗೆ ತೆರಳುತ್ತಾರೆ. ಆದರೆ ಗಾಂಧಿ ಮತ್ತು ಪ್ರೇಮಚಂದ್ ಅವರ ಸಂಬಂಧ ಕೊನೆಯವರೆಗೂ ಇರುತ್ತದೆ.

ಪ್ರೇಮಚಂದ್ ಅವರ ಮಾತಿನಲ್ಲಿ ಗಾಂಧಿ

ಪ್ರೇಮಚಂದ್ ಅವರು ತಮ್ಮ ಕೃತಿಗಳಲ್ಲಿ ಭಾರತೀಯ ಜನಜೀವನದ ನಾಡಿ ಮಿಡಿತವನ್ನು ವ್ಯಕ್ತಪಡಿಸುತ್ತಿದ್ದರು. ಸತ್ಯ, ಅಹಿಂಸೆ ಮತ್ತು ಪ್ರೀತಿಯ ಮೂಲ ತತ್ವಗಳ ಜೊತೆಗೆ ಸಮಾಜ ಸುಧಾರಣೆಯ ಮನೋಭಾವ, ರಾಜಕೀಯದಲ್ಲಿ ಬದಲಾವಣೆ, ಪರಿಶಿಷ್ಟ ಜಾತಿ–ವರ್ಗದ ಜನರ ಯೋಗಕ್ಷೇಮ, ಗ್ರಾಮೀಣ ಸುಧಾರಣಾ ಯೋಜನೆ, ಆರ್ಥಿಕ ಅಸಮಾನತೆಯ ಸಮಸ್ಯೆ, ಮಹಿಳಾ ವಿಮೋಚನೆ ಇನ್ನೂ ಮುಂತಾದ ಗಾಂಧಿಯವರ ತತ್ವಶಾಸ್ತ್ರದ ಸೃಜನಾತ್ಮಕ ತತ್ವಗಳಿಗೆ ತಮ್ಮ ಕಾದಂಬರಿಗಳಲ್ಲಿ ಸ್ಥಾನ ನೀಡಿದರು.

ಪ್ರೇಮಚಂದ್ ಅವರು ಗಾಂಧಿಯವರನ್ನು ಎಷ್ಟು ಇಷ್ಟ ಪಡುತ್ತಿದ್ದರೆಂದರೆ ಅವರ ಈ ಹೇಳಿಕೆಯನ್ನು ಗಮನಿಸಿ.



"ನಾನು ಗಾಂಧೀಜಿಯವರ ಸಹಜ ಶಿಷ್ಯ. ಈ ಅರ್ಥದಲ್ಲಿ ನಾನು ಗಾಂಧಿಯವರನ್ನು ಶ್ರೇಷ್ಠ ವ್ಯಕ್ತಿ ಎಂದು ನಂಬುತ್ತೇನೆ. ಅವರ ಗುರಿ ಕೂಡ ಕಾರ್ಮಿಕರು ಮತ್ತು ರೈತರನ್ನು ಸಂತೋಷದಿಂದ ಬದುಕಲು ಅನುವು ಮಾಡಿಕೊಡುವುದು. ಈ ಜನರ ಬದುಕಿಗಾಗಿ ಅವರು ಚಳುವಳಿಗಳನ್ನ ನಡೆಸುತ್ತಿದ್ದಾರೆ. ನಾನು ನನ್ನ ಸಾಹಿತ್ಯದ ಮೂಲಕ ಅವರನ್ನು ಪ್ರೋತ್ಸಾಹಿಸುತ್ತಿದ್ದೇನೆ. ಗಾಂಧಿಯವರು ಹಿಂದೂ–ಮುಸಲ್ಮಾನರಲ್ಲಿ ಐಕ್ಯತೆಯನ್ನು ಬಯಸುತ್ತಾರೆ. ನಾನು ಹಿಂದಿ–ಉರ್ದುವನ್ನು ಒಂದಾಗಿಸಿ ಹಿಂದೂಸ್ತಾನಿಯನ್ನು ತರಲು ಬಯಸುತ್ತಿದ್ದೇನೆ". ಎಂದು ಹೇಳುತ್ತಾರೆ.

ಪ್ರೇಮಚಂದ್ ಪೂರ್ವದ ಕಾದಂಬರಿ ಲೋಕ

ಪ್ರೇಮಚಂದ್ ಅವರಿಗಿಂತಲೂ ಮೊದಲಿನ ಕಾಲದಲ್ಲಿ ಕೇವಲ ಕಲ್ಪನಾಲೋಕದಲ್ಲಿ ವಿಹರಿಸುವ, ಲೋಲುಪತೆಯಲ್ಲಿ ಮುಳುಗಿರುವ, ವಿಸ್ಮಯಗಳನ್ನು ಸೃಷ್ಟಿಸುವ ಕಾದಂಬರಿಗಳೇ ಹೆಚ್ಚಾಗಿದ್ದವು. ಆದರೆ ಪ್ರೇಮಚಂದ್ ಆ ಪರಂಪರೆಗೆ ತಿಲಾಂಜಲಿಯನ್ನು ನೀಡಿದರು.

ಪ್ರೇಮಚಂದ್ ಅವರು ಗಾಂಧಿ ಪ್ರಭಾವಕ್ಕೆ ಒಳಗಾದ ಕಾರಣ ತಮ್ಮ ಕಾದಂಬರಿಗಳಲ್ಲಿ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ, ಕೌಟುಂಬಿಕ ಮುಂತಾದ ಸಮಸ್ಯೆಗಳನ್ನು ವ್ಯಕ್ತಪಡಿಸುತ್ತಾ ಅಲ್ಲಿಯವರೆಗಿನ ಕಾದಂಬರಿಗಳಲ್ಲಿ ಇದ್ದ ವರ್ಣರಂಜಿತ ಲೋಕದ ಏಕಸ್ವಾಮ್ಯತೆಯನ್ನು ಬದಿಗೊತ್ತಿ ಸಮಾಜದ ನೆಲಮೂಲ ಸಂಸ್ಕೃತಿಯ ವ್ಯಕ್ತಿಯೆಡೆಗೆ ತಂದು ನಿಲ್ಲಿಸಿದ್ದು ಪ್ರೇಮಚಂದ್ ಅವರ ಶ್ಲಾಘನೀಯ ಕಾರ್ಯವೆಂದು ಹೇಳಬಹುದು.

ಪ್ರೇಮಚಂದ್ ಅವರ ಮಾತುಗಳಲ್ಲಿ ಕಾದಂಬರಿ ಎಂದರೆ – "ಕಾದಂಬರಿಯನ್ನು ನಾನು ಕೇವಲ ಮಾನವನ ಚರಿತ್ರೆಯ ಚಿತ್ರ – ಎಂದಷ್ಟೇ ಪರಿಗಣಿಸುತ್ತೇನೆ. ಮಾನವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವುದು ಮತ್ತು ಅದರಿಂದ ಅನೇಕ ರಹಸ್ಯಗಳನ್ನು ಹೊರಗೆಳೆಯುವುದೇ ಕಾದಂಬರಿಯ ಮೂಲ ತತ್ವ ಎಂದು ಹೇಳುತ್ತಾರೆ", ಹಾಗಾಗಿ ಅವರು ಕಾದಂಬರಿಯನ್ನು ಲೋಲುಪತೆಯ ಐಷಾರಾಮಿ ವಸ್ತು ಎಂದು ಭಾವಿಸಲಿಲ್ಲ.

ಪ್ರೇಮಚಂದ್ ಅವರ ಕಾದಂಬರಿಗಳಲ್ಲಿ ಗಾಂಧಿ ತತ್ವ

'ಗೋದಾನ' ಕ್ಕಿಂತ ಮೊದಲು ರಚಿಸಿದ ಪ್ರೇಮಚಂದ್ ಅವರ ಕೃತಿಗಳಲ್ಲಿ ಗಾಂಧಿಯವರ ಪ್ರಭಾವ ಎದ್ದು ಕಾಣುತ್ತದೆ. 'ಪ್ರೇಮಾಶ್ರಮ', 'ರಂಗಭೂಮಿ' , 'ಕಾಯಕಲ್ಪ', 'ಕರ್ಮಭೂಮಿ' ಈ ಕಾದಂಬರಿಗಳಲ್ಲಿ ಗಾಂಧಿಯವರ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. 'ನಿರ್ಮಲಾ' ಮತ್ತು 'ಗಬನ್' ಕಾದಂಬರಿಯಲ್ಲೂ ಸಹ ಗಾಂಧಿ ಪ್ರಭಾವವನ್ನು ನೋಡಬಹುದಾಗಿದೆ .

ಪ್ರೇಮಚಂದ್ ಅವರ ಮೊದಲ ಗಮನಾರ್ಹ ಹಾಗೂ ಹಿಂದಿ ಭಾಷೆಯಲ್ಲಿ ಅವರ ಮೊದಲ ಅನುವಾದಿಸಿದ ಕಾದಂಬರಿ 'ಪ್ರೇಮ' ಅಥವಾ 'ಪ್ರತಿಜ್ಞಾ'. ಈ ಕಾದಂಬರಿಯು ಗಾಂಧಿ ಯುಗದ ಪೂರ್ವದಲ್ಲೇ ರಚನೆಗೊಂಡಿದ್ದರೂ ಸಹ ಅದರ ಪ್ರಸ್ತುತ ರೂಪ ಗಾಂಧಿ ಯುಗದ ಕೊಡುಗೆ ಎಂದು ಹೇಳಬಹುದು. ಇದೊಂದು ಸಮಾಜ ಸುಧಾರಣಾ ವಿಷಯ ವಸ್ತು ಇರುವಂತಹ ಕಾದಂಬರಿಯಾಗಿದೆ.

ಮತ್ತೊಂದು ಮಹತ್ವಪೂರ್ಣವಾದ ಕಾದಂಬರಿ ಎಂದರೆ 'ಸೇವಾಸದನ್'. ಇದು ವೇಶ್ಯೆಯ ಸಮಸ್ಯೆಯನ್ನು ಆದರಿಸಿದಂತಹ ಕಾದಂಬರಿ. ಸುಮನ ಅವರ ಕೌಟುಂಬಿಕ ಹಿನ್ನೆಲೆಯನ್ನು ನೀಡುತ್ತಾ, ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬದ ಹೆಣ್ಣುಮಕ್ಕಳ ಮದುವೆಯಿಂದಾಗುವ ದುಷ್ಪರಿಣಾಮಗಳು ಮತ್ತು ಅದಕ್ಕೆ ಸಂಬಂಧಿಸಿದ ವರದಕ್ಷಿಣೆ ಎಂಬ ಅನಿಷ್ಟ ಪದ್ಧತಿಯ ದುಷ್ಪರಿಣಾಮಗಳನ್ನು ಈ ಕಾದಂಬರಿಯಲ್ಲಿ ತೋರಿಸಲು ಪ್ರಯತ್ನಿಸಿದ್ದಾರೆ. ಈ ಕಾದಂಬರಿಯಲ್ಲಿ ಪ್ರೇಮಚಂದ್ ಅವರ ಬುದ್ಧಿವಂತಿಕೆ ಮತ್ತು ಭಾರತದ ಜಾತಿ ಮತ್ತು ಕೋಮು ಸಮಸ್ಯೆಗಳ ಬಗ್ಗೆ ಅವರ ತತ್ವ ಚಿಂತನೆಯು ಅನನ್ಯವಾಗಿರುವುದನ್ನು ಕಾಣಬಹುದು.

ಪ್ರೇಮಚಂದ್ ಅವರ ಕಾದಂಬರಿಗಳಲ್ಲಿ



ರಾಷ್ಟ್ರೀಯ ವಾತಾವರಣದ ಪ್ರಭಾವವು ಆ ಸಮಯದಲ್ಲಿದ್ದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳಿಂದಲೇ ಎಂದು ಹೇಳಬಹುದು. ಪ್ರೇಮಚಂದ್ ಅವರ ಮೊದಲ ಕಥಾ ಸಂಕಲನ 'ಸೋಜೇವತನ್' (1908) ನ ಉಗ್ರತೆಯನ್ನು ನೋಡಿ ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಂಡಿತು. ಗಾಂಧಿಯುಗದಲ್ಲಿ ಪ್ರೇಮಚಂದ್ ಅವರ ರಾಷ್ಟ್ರೀಯ ಪ್ರೀತಿ ಮತ್ತು ಪ್ರಜ್ಞೆಯು ಮತ್ತಷ್ಟು ಬಲಗೊಳ್ಳುತ್ತದೆ.

'ಪ್ರೇಮಾಶ್ರಮ' ಪ್ರೇಮಚಂದ್ ಅವರ ಮತ್ತೊಂದು ಪ್ರಮುಖ ಕಾದಂಬರಿ. ಈ ಕಾದಂಬರಿಯು ಭೂಮಾಲೀಕ ರೈತನ ಹೋರಾಟವನ್ನು ಗುರುತಿಸುವುದರೊಂದಿಗೆ ಆ ಕಾಲದ ಸಂಪೂರ್ಣ ಸಾಮಾಜಿಕ ಬದುಕನ್ನ ಚಿತ್ರಿಸುತ್ತದೆ. ಈ ದೃಷ್ಟಿಯಿಂದ 'ಪ್ರೇಮಾಶ್ರಮ' ಒಬ್ಬ ವ್ಯಕ್ತಿಯ ಬದುಕಿನ ಕಾವ್ಯವಾಗದೆ ಇಡೀ ಸಾಮಾಜಿಕ ಬದುಕಿನ ಮಹಾಕಾವ್ಯವಾಗಿದೆ. ಮಹಾತ್ಮ ಗಾಂಧಿಯವರು ಆಯೋಜಿಸಿದ್ದಂತಹ ಅಸಹಕಾರ ಚಳುವಳಿಯು ಈ ಕಾದಂಬರಿಯ ರಚನೆಗೆ ಸ್ಫೂರ್ತಿಯಾಗಿದೆ. ಈ ದಿಸೆಯಲ್ಲಿ ಸ್ವತಃ ಪ್ರೇಮಚಂದ್ ಅವರೆ ತಮ್ಮ ಪತ್ನಿ ಶಿವರಾನಿ ದೇವಿಗೆ ಹೀಗೆ ಹೇಳಿದ್ದಾರೆ . “ಗಾಂಧೀಜಿಯವರು ರಾಜಕೀಯ ಕ್ಷೇತ್ರದ ಮೂಲಕ ಭಾರತದ ರೈತರು ಮತ್ತು ಕಾರ್ಮಿಕರ ಸಂತೋಷಕ್ಕಾಗಿ ಮಾಡುತ್ತಿರುವ ಹೋರಾಟ ಮತ್ತು ಪ್ರಯತ್ನಗಳೆಲ್ಲವು 'ಪ್ರೇಮಾಶ್ರಮದ' ಸಾಹಿತ್ಯದ ಆವೃತ್ತಿಯಾಗಿವೆ.

ಇಲ್ಲಿ ರೈತರು ಮತ್ತು ಜಮೀನ್ದಾರರ ನಡುವಿನ ಪರಸ್ಪರ ಸಂಬಂಧಗಳನ್ನು ಮತ್ತು ಅವರ ವರ್ಗಗಳ ಗುಣಲಕ್ಷಣಗಳನ್ನು ಪ್ರೇಮಚಂದ್ ನೈಜವಾಗಿ ಚಿತ್ರಿಸಿದ್ದಾರೆ. ಗಾಂಧಿಯವರಂತೆ ಪ್ರೇಮಚಂದ್ ಕೂಡ ರೈತರು ಮತ್ತು ಜಮೀನ್ದಾರರ ನಡುವಿನ ಸಂಬಂಧಗಳು ಪ್ರೀತಿ ಮತ್ತು ಸಹಕಾರದಿಂದ ಇರಬಹುದೆಂಬ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರೇಮಶಂಕರ್ ಮತ್ತು ಮಾಯಾಶಂಕರ್ ರಂತಹ ಜಮೀನ್ದಾರರು ತಮ್ಮ ಜೀವನವನ್ನು ಸಂಪೂರ್ಣವಾಗಿ ರೈತರ ಸೇವೆಗೆ ಮುಡುಪಾಗಿಡಬಹುದು ಎಂಬುದನ್ನು ತೋರಿಸಿದ್ದಾರೆ. ಅಲ್ಲದೆ ಕೃಷಿ ಮಾಡುವವರಿಗೆ ಭೂಮಿ ಸೇರುತ್ತದೆ ಎಂಬುದು ಪ್ರೇಮಶಂಕರ್ ಅವರ ನಂಬಿಕೆಯೂ ಆಗಿದೆ. ಮಾಯಾಶಂಕರ್ ಕೂಡ 'ಈ ಎಲ್ಲಾ ಭೂಮಿ ಗೋಪಾಲಕನಿಗೆ ಸೇರಿದ್ದು' ಎಂದು ಒಪ್ಪಿಕೊಳ್ಳುತ್ತಾನೆ ಮತ್ತು ರೈತ ಮತ್ತು ಸರ್ಕಾರದ ನಡುವೆ ಬೇರೆ ವರ್ಗದ ಜನರ ಅಥವಾ ಶ್ರೇಣಿಯ ಶಕ್ತಿಯ ಪ್ರಯೋಗವನ್ನು ಪ್ರಸ್ತುತ ಸಮಾಜದ ಕಳಂಕವೆಂದು ಪರಿಗಣಿಸುತ್ತಾನೆ.

ಇದರ ನಂತರ ಪ್ರೇಮಚಂದ್ 'ಪ್ರೇಮಾಶ್ರಮ' (ತಾವು ಸ್ಥಾಪಿಸಿದ ಆಶ್ರಮ, ಅಥವಾ ಅವರ ಮನೆ) ದಲ್ಲಿ ಲಖನ್ ಪುರ್ ಗ್ರಾಮದಲ್ಲಿ ಒಂದು ಆದರ್ಶ ರಾಜ್ಯ (ಗ್ರಾಮ) ವನ್ನು ಸ್ಥಾಪಿಸುತ್ತಾರೆ. ಅಲ್ಲಿ ಸೇವೆ, ಪ್ರೀತಿ, ಸತ್ಯ, ಅಹಿಂಸೆ, ತ್ಯಾಗ, ದೈಹಿಕ ಶ್ರಮ ಇತ್ಯಾದಿಗಳಿಂದಾಗುವ ಗೌರವವನ್ನು ತೋರಿಸಲಾಗಿದೆ. ಅಲ್ಲದೆ ಹೃದಯ ಪರಿವರ್ತನೆಯ ಸಿದ್ಧಾಂತವನ್ನು ಸಹ ಸ್ವೀಕರಿಸುತ್ತಾರೆ.

ಈ ಪ್ರೇಮಾಶ್ರಮ ಗಾಂಧಿಯವರು ಭಾರತದ ಐದು ಪ್ರದೇಶಗಳಾದ ಗುಜರಾತ್, ಮುಂಬೈ, ಮಹಾರಾಷ್ಟ್ರ , ದೆಹಲಿ ಮತ್ತು ಅಹಮದಾಬಾದ್ ನಲ್ಲಿ ಸ್ಥಾಪಿಸಿದ ಆಶ್ರಮವಿದ್ದಂತೆಯೇ ಇತ್ತು. ಇದರ ಅರ್ಥ ಗಾಂಧಿಯವರ ಪ್ರಭಾವ ಪ್ರೇಮಚಂದ್ ಅವರ ಮೇಲೆ ಆದಂತೆಯೇ ಪ್ರೇಮಚಂದ್ ಅವರ ಪ್ರಭಾವವು ಗಾಂಧಿಯವರ ಮೇಲೂ ಬೀರಿತ್ತು ಎನ್ನಬಹುದು.

'ರಂಗಭೂಮಿ' ಪ್ರೇಮಚಂದ್ ಅವರ ಬಹು ಚರ್ಚಿತ ಕಾದಂಬರಿ. ಈ ಕಾದಂಬರಿಯು ಓದುಗರಿಂದ ಬಹಳ ಮೆಚ್ಚುಗೆಗೆ ಪಾತ್ರವಾಯಿತು ಅಷ್ಟು ಮಾತ್ರವಲ್ಲದೇ ಸ್ವತಃ ಪ್ರೇಮಚಂದ್ ಅವರೇ ಇದನ್ನು ತಮ್ಮ ಅತ್ಯುತ್ತಮ ಕಾದಂಬರಿ ಎಂದು ಪರಿಗಣಿಸಿದ್ದಾರೆ. ಈ ಕಾದಂಬರಿಯು ಭಾರತೀಯ ಗ್ರಾಮೀಣ ಜೀವನ ಮತ್ತು ನಾಗರೀಕ ಜೀವನ ಎರಡರ ದೃಷ್ಟಿಯಿಂದಲೂ ಬಹಳ ಯಶಸ್ವಿ ಕಾದಂಬರಿಯಾಗಿದೆ. 'ರಂಗಭೂಮಿ' ಗಾಂಧಿಯುಗದ ಪರಾಕಾಷ್ಠೆಯಲ್ಲಿ ಬರೆದ ಕಾದಂಬರಿ. ಇದರಲ್ಲಿ ಬರುವ ಸೂರದಾಸ ಪಾತ್ರದಾರಿಯ ಸತ್ಯಾಗ್ರಹವು ಮಹಾತ್ಮಗಾಂಧಿಯವರ ಸತ್ಯಾಗ್ರಹದ ಆದರ್ಶರೂಪ ಆಗಿದೆ. ಸತ್ಯ, ನ್ಯಾಯ ಮತ್ತು ಧರ್ಮದ ಹೆಸರಿನಲ್ಲಿ ಹೋರಾಡುವ ಸೂರದಾಸರ ಪರಿಕಲ್ಪನೆಯು ಹಿಂದಿ ಸಾಹಿತ್ಯದ ಮಹತ್ವದ ಸಾಧನೆಯಾಗಿದೆ.

ಕಾದಂಬರಿಯಲ್ಲಿನ ನಾಯಕನ ನೈತಿಕ ಚಿಂತನೆಗಳು, ಅವನ ಸಂಯಮ, ಶತ್ರುಗಳಿಗೂ ಸಹ ಅವನು ತೋರುವ ಮುಗ್ಧ ವಾತ್ಸಲ್ಯ, ಬಲವಾದ ಆಶಾವಾದ, ಸಾವಿನ ಬಗ್ಗೆ ನಿರ್ಭಯತೆ, ಶುದ್ಧ ಹಾಸ್ಯ, ತಮಾಷೆಯ ಮಾತುಗಳು, ದಾನ, ತನ್ನ ಭೂಮಿಯಲ್ಲಿ ಹಳ್ಳಿಯ ದನಗಳನ್ನು ಮೇಯಿಸಲು ಹೇಳುವ ಟ್ರಸ್ಟಿಯ ಮನಃಸ್ಥಿತಿ, ಉನ್ನತ ಅಧಿಕಾರಿಗಳ ಮುಂದೆ ನಿರ್ಭಯವಾಗಿ ಮಾತನಾಡುವ ಸಾಮರ್ಥ್ಯ, ಅಗಾಧವಾದ ಆತ್ಮಸ್ಥೈರ್ಯ ಇತ್ಯಾದಿ ಗುಣಗಳಿಗೆ ಪ್ರೇಮಚಂದ್ ಉತ್ತಮ ರೂಪ ನೀಡಿದ್ದಾರೆ. ಇಷ್ಟು ಮಾತ್ರವಲ್ಲದೆ ಸತ್ಯ, ಅಹಿಂಸೆ, ನ್ಯಾಯ, ದೈವಭಕ್ತಿ, ಸತ್ಯಾಗ್ರಹ, ಇತ್ಯಾದಿ ತತ್ವಗಳನ್ನು ಈ ಕಾದಂಬರಿಯಲ್ಲಿ ಸುಂದರವಾಗಿ ತಿಳಿಸಲಾಗಿದೆ. ಹಾಗೆಯೇ ಗಾಂಧಿಯವರ ಸ್ವರಾಜ್ಯ ಮತ್ತು ಅದರ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಆಧರಿಸಿದ ಕಾದಂಬರಿಯಾಗಿದೆ. ಇದರಲ್ಲಿ ಗಾಂಧಿ-ಇರ್ವಿನ್ ಒಪ್ಪಂದ, ರೈತರ ತೆರಿಗೆ ನಿರಾಕರಣೆಯ ಚಳುವಳಿ ಮುಂತಾದ ಘಟನೆಗಳ ನೇರ ಪರಣಾಮವನ್ನು ಕಾಣಬಹುದಾಗಿದೆ. ಈ ಕಾರಣದಿಂದಲೇ ಈ ಕಾದಂಬರಿಯನ್ನು 'ಗಾಂಧೀವಾದಿ ಕಾದಂಬರಿ' ಅಥವಾ 'ರಾಜಕೀಯ ಕಾದಂಬರಿ' ಎಂದು ಕರೆಯಲಾಗುತ್ತದೆ. ಈ

ಕಾದಂಬರಿಯನ್ನು 1932 ರಲ್ಲಿ ಬರೆಯಲಾಯಿತು.

ಯಂತ್ರಗಳಿಂದ ದೂರವಿರಿ

ಗಾಂಧಿಯವರು ಯಂತ್ರಗಳಿಂದ ದೂರ ಉಳಿಯಬೇಕೆಂದು ಹೇಳುತ್ತಿದ್ದರು. ಯಂತ್ರಗಳನ್ನು ವಿರೋಧಿಸುತ್ತಿದ್ದರು, ಏಕೆಂದರೆ ಯಂತ್ರಗಳು ಒಮ್ಮಲೆ ಸಾವಿರಾರು ಉತ್ಪನ್ನಗಳನ್ನು ಉತ್ಪಾದಿಸಿ ಮಾರುಕಟ್ಟೆಗೆ ಲಗ್ಗೆ ಇಡುವುದರಿಂದ ರೈತರ ಆರ್ಥಿಕ ಮತ್ತು ಸಾಮಾಜಿಕ ಬದುಕಿಗೆ ಪೆಟ್ಟು ಬೀಳುತ್ತದೆ. ಅಲ್ಲದೆ ಯಂತ್ರಗಳಿಂದ ಗ್ರಾಮದ ಪರಿಕಲ್ಪನೆಗೆ ಪೆಟ್ಟುಬೀಳುತ್ತದೆ. ರೈತರು ಆತ್ಮನಿರ್ಭರರಾಗಲು ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದರು.

ಗಾಂಧೀಜಿಯ ನೈತಿಕ ವಿಚಾರಧಾರೆಗಳು ಮತ್ತು ಪ್ರೇಮಚಂದರ "ಕಾಯಾಕಲ್ಪ" ಕಾದಂಬರಿಯು ವಿಶ್ವ ಸಾಹಿತ್ಯದಲ್ಲಿ ಗುರುತಿಸ ಬಹುದಾದ ಕಾದಂಬರಿಯಾಗಿದೆ ಹಾಗೂ ಶಾಶ್ವತ ಮತ್ತು ಭವ್ಯವಾದ ಪ್ರೀತಿಯ ಮಹಾನ್ ಗಾಥೆಯಾಗಿದೆ ಎಂದು ಗುರುತಿಸಿರುವುದರಿಂದಲೇ ಈ ಕಾದಂಬರಿಯ ಮಹತ್ವ ಎಷ್ಟು ಎಂಬುದು ತಿಳಿಯುತ್ತದೆ. ಇದನ್ನು ಪ್ರೇಮಚಂದ್‌ರವರು ತಮ್ಮ ಅದ್ಭುತ ಪ್ರತಿಭೆಯಿಂದ ಜನರ ಜೀವನದೊಂದಿಗೆ ಬೆಸೆದಿದ್ದಾರೆ.

'ರಂಗಭೂಮಿ' ಮತ್ತು 'ಗೋದಾನ' ದಂತಹ ಕಾದಂಬರಿಯ ನಂತರ 'ಕಾಯಾಕಲ್ಪ' ಅವರ ಅತ್ಯುತ್ತಮ ಕಾದಂಬರಿ ಎಂದು ಗುರುತಿಸಿಕೊಂಡಿದೆ. ಇದರಲ್ಲಿ ಕಾದಂಬರಿಕಾರರು ಗಾಂಧಿಯವರ ಆಧ್ಯಾತ್ಮಿಕ ಮತ್ತು ನೈತಿಕ ವಿಚಾರಧಾರೆಯನ್ನು ಮುಂದಿಟ್ಟಿದ್ದಾರೆ. ಇದರ ಜೊತೆಗೆ ಅಪರಿಗ್ರಹ (ಯಾವುದೇ ವಸ್ತುವಿನ ಮೇಲೆ ಮೋಹವನ್ನು ಹೊಂದದೇ ಇರುವುದು), ಅಸ್ತೇಯ(ಕಳುವು ಮಾಡದೇ ಇರುವುದು) ಮತ್ತು ಸಂಯಮ ಮುಂತಾದವುಗಳ ಮಹತ್ವವನ್ನು ಎತ್ತಿ ತೋರಿಸಿದ್ದಾರೆ.

ಗಾಂಧಿಯವರ ಮದ್ಯ ನಿಷೇದ, ಹರಿಜನೋದ್ಧಾರ ಮತ್ತು ಪ್ರೇಮಚಂದರ 'ಕರ್ಮಭೂಮಿ'

'ಕರ್ಮಭೂಮಿ' ಯ ಪ್ರಸ್ತಾವನೆಯಲ್ಲಿ ಗಾಂಧಿಯವರ 1930 ರ ಅಸಹಕಾರ ಚಳುವಳಿಯ ಝಲಕ್ ಅನ್ನು ನೋಡಬಹುದಾಗಿದೆ. ಈ ಕಾದಂಬರಿಯಲ್ಲಿ ಗಾಂಧಿಯವರ ಪ್ರಾಯೋಗಿಕ ಕಾರ್ಯಕ್ರಮಗಳ ಪ್ರಚಾರವನ್ನು ಹಳ್ಳಿಗಳಲ್ಲಿ ಮಾಡಿ ತೋರಿಸಲಾಗಿದೆ. ನೂಲು-ತೆಗೆಯುವುದು, ನೇಯುವುದು, ಹರಿಜನೋದ್ಧಾರ, ಮದ್ಯ ನಿಷೇಧ, ಸತ್ತ ಪ್ರಾಣಿಗಳ ಮಾಂಸ ತಿನ್ನದಿರುವುದು, ವಿವಿಧ ಜಾತಿಗಳ ನಡುವೆ ಆಹಾರದ ವ್ಯವಹಾರ, ಮಂದಿರ ಪ್ರವೇಶದ ಚಳುವಳಿ ಇತ್ಯಾದಿಗಳ ಬಗ್ಗೆ ಓದುವಾಗ ಗಾಂಧೀ ಕಾಲದ ವಾತಾವರಣ ನೈಜವೆಂದು ಭಾಸವಾಗುತ್ತದೆ. ಸರ್ಕಾರಿ ನೌಕರ ಸಲೀಂ ಮತ್ತು ಹಣದ ದುರಾಸೆಯ ಸೇಠ್ ಅಮರಕಾಂತ್ ಅವರ ಹೃದಯ ಪರಿವರ್ತನೆಯಾಗಿ ಅವರು ತಮ್ಮ ಸಂಪತ್ತನ್ನೆಲ್ಲಾ ದಾನ ಮಾಡುವುದು ಹಾಗೂ ಸುಖದ ಸುಪ್ಪತ್ತಿಗೆಯ ತನ್ನ ಐಶಾರಾಮಿ ಜೀವನವನ್ನು ತೊರೆದು ಸೇವಾ ಮಾರ್ಗವನ್ನು ಅಳವಡಿಸಿಕೊಳ್ಳುವುದು, ವೃದ್ಧೆ ಪಠಾಣಿನ್, ನೈನಾ ಮುಂತಾದ ಮಹಿಳೆಯರ ಮನಸ್ಸನ್ನು ಬದಲಾಯಿಸಿ ಅವರನ್ನು ದೇಶ ಸೇವೆಗೆ ಸಿದ್ಧಗೊಳಿಸುವುದು ಗಾಂಧಿ ಕಾಲದ ಪ್ರಭಾವವನ್ನು ವ್ಯಕ್ತಪಡಿಸುತ್ತದೆ.

ಈ ಕಾದಂಬರಿಯು ಮನಃಪರಿವರ್ತನೆಗೆ ಹೆಚ್ಚು ಮಹತ್ವವನ್ನು ಕೊಡುತ್ತದೆ. ಗಾಂಧಿಯವರು ಭಾರತದ ಸುಖ-ಶಾಂತಿಗಾಗಿ ಹಿಂದು-ಮುಸಲ್ಮಾನರ ನಡುವೆ ಐಕ್ಯತೆಯು ಆವಶ್ಯಕ ಎಂದು ಭಾವಿಸಿದ್ದರು ಹಾಗಾಗಿ ಕಾದಂಬರಿಕಾರರು ಈ ಕಾದಂಬರಿಯಲ್ಲಿ ಅಮರ್‌ಕಾಂತ್ ಮತ್ತು ಸಲೀಮ್‌ನ ನಡುವೆ ಸ್ನೇಹ ಮತ್ತು ಏಕತೆಯನ್ನು ಸಾರಿದ್ದಾರೆ.

ಗಾಂಧಿಯವರು ಅಸ್ಪೃಶ್ಯತೆಯ ನಿವಾರಣೆಗಾಗಿ ಚಳುವಳಿಗಳನ್ನು ನಡೆಸಿದ್ದರು ಹಾಗೂ ಅವರ ಬಸ್ತಿಗಳಿಗೆ ಹೋಗಿ ಅಲ್ಲಿಯೇ ಇದ್ದು ಅವರ ಕೆಲಸಗಳನ್ನು ಮಾಡಿ ಅವರನ್ನು ಸಾಮಾಜಿಕವಾಗಿ ಮೇಲೆತ್ತುವ ಕೆಲಸವನ್ನು ಮಾಡಿದ್ದರು. ಈ ಕಾದಂಬರಿಯಲ್ಲಿಯೂ ದಲಿತೋದ್ಧಾರಕ್ಕಾಗಿ ಸುಖದಾ ಮತ್ತು ಶಾಂತಕುಮಾರ್ ದಲಿತರ ಮಂದಿರ ಪ್ರವೇಶಕ್ಕಾಗಿ ಚಳುವಳಿ ನಡೆಸುವುದನ್ನು ಕಾಣಬಹುದಾಗಿದೆ.

ಈ ಕಾದಂಬರಿಯು ರಾಷ್ಟ್ರೀಯ ಚೇತನವನ್ನು ಮೂಡಿಸುವ ಕಾದಂಬರಿಯಾಗಿದೆ.

ಎಲ್ಲಿಯೂ ನಿಲ್ಲದಿರು ಮನೆಯನೆಂದು ಕಟ್ಟದಿರು

ಗಾಂಧಿ ದಕ್ಷಿಣ ಆಫ್ರಿಕಾದಿಂದ ಬಂದ ನಂತರ ಎಂದೂ ಮನೆ ಮಾಡಿಕೊಂಡು ನೆಲೆ ನಿಲ್ಲಲಿಲ್ಲ. ಮಕ್ಕಳನ್ನು ಅವರ ಪಾಡಿಗೆ ಬಿಟ್ಟು ಬಿಟ್ಟರು. ಹೆಂಡತಿಯೊಂದಿಗೆ ಸಾಬರಮತಿ, ಸೇವಾಗ್ರಾಮ ದಂತಹ ಆಶ್ರಮಗಳಲ್ಲೇ ಸರಳವಾಗಿ ಬದುಕು ಸಾಗಿಸಿದರು

ಒಂದು ಕಡೆ ಸ್ವಾತಂತ್ರ್ಯ ಹೋರಾಟ ಮಾಡುತ್ತಿದ್ದರು, ಮತ್ತೊಂದು ಕಡೆ ನಮ್ಮ ಜೀವನ ಸರಳವಾಗಿರಬೇಕು ನಾವು ಆತ್ಮನಿರ್ಭರರಾಗಿರಬೇಕು, ನಮ್ಮಲ್ಲಿ ಬಡತನ ಇದೆ, ಬಟ್ಟೆ ಇಲ್ಲ, ಈ ಕಾರಣದಿಂದಲೇ ಅವರು ಖಾದಿಯನ್ನು ಪ್ರಾರಂಭಿಸಿದರು. ಮಕ್ಕಳಿಗೆ ಶಿಕ್ಷಣ ಬೇಕು ಎಂದು ವಿದ್ಯಾಲಯಗಳನ್ನು ಪ್ರಾರಂಭಿಸಿದರು. ವ್ಯವಸಾಯ, ಗೃಹ ಕೈಗಾರಿಕೆಗಳನ್ನು ಪ್ರಾರಂಭಿಸಿದರು. ಗೃಹ ಕೈಗಾರಿಕೆಗಳಿಗೆ ಪ್ರೇರಣೆಯಾದರು. 'ಹಳ್ಳಿಗಳೇ ದೇಶದ ಜೀವಾಳ, ಹಳ್ಳಿಗಳು ಉದ್ಧಾರವಾಗದ ಹೊರತು ದೇಶ ಉದ್ಧಾರವಾಗುವುದಿಲ್ಲ, ಅದನ್ನೇ 'ಗ್ರಾಮ ಸ್ವರಾಜ್' ಎಂದು ಕರೆದರು. ಎಲ್ಲರೂ ಉದ್ಧಾರವಾಗದ ಹೊರತು ದೇಶ ಉದ್ಧಾರವಾಗುವುದಿಲ್ಲ, ಅದೇ 'ಸರ್ವೋದಯ'ವಾಯಿತು. ಇದೊಂದು ದೊಡ್ಡಪರಿಕಲ್ಪನೆ . ಗಾಂಧಿಯ ತತ್ವಗಳು (ಸತ್ಯ, ಅಹಿಂಸೆ, ಪ್ರೇಮ, ಸದ್ಭಾವ) ಎಂದರೆ ಇವು. ಇವುಗಳನ್ನು ಗಾಂಧಿ ಕೇವಲ ಭಾಷಣ ಮಾಡಲಿಲ್ಲ ಬದುಕಿ ತೋರಿಸಿದರು.

ಹೀಗೆ ಗಾಂಧಿ ಕೇವಲ ಪ್ರೇಮಚಂದ್ ಮಾತ್ರವಲ್ಲದೇ ಆ ಕಾಲದ ಬರಹಗಾರರಾದ ಮೈಥಿಲೀಶರಣ್ ಗುಪ್ತ್, ಜೈನೇಂದ್ರ, ಸಿಯಾರಾಮ್ ಶರಣ್ ಗುಪ್ತ್, ರವೀಂದ್ರನಾಥ ಠಾಗೋರ್ ಮತ್ತು ಅನೇಕ ದಾರ್ಶನಿಕರು, ಸಮಾಜ ಸುಧಾರಕರ ಮೇಲೆ ಪ್ರಭಾವ ಬೀರಿದವರಾಗಿದ್ದರು. ಈ ರೀತಿಯಲ್ಲಿ ಒಟ್ಟಾರೆಯಾಗಿ ಗಮನಿಸುವುದಾದರೆ ಗ್ರಾಮೋದ್ಧಾರ, ಅಹಿಂಸೆ, ಸತ್ಯಾಗ್ರಹ, ದಲಿತೋದ್ಧಾರ, ಆತ್ಮನಿರ್ಭರತೆ, ಸರಳ ಬದುಕು, ಯಂತ್ರಗಳ ವಿರುದ್ಧದ ಹೋರಾಟ, ಬಂಡವಾಳಶಾಹಿಗಳ ವಿರುದ್ಧದ ಹೋರಾಟ, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ವಿಚಾರದಲ್ಲಿ ಗಾಂಧಿಯವರ ಪ್ರಭಾವ ಪ್ರೇಮಚಂದ್ ಅವರ ಮೇಲೆ ಸ್ವಲ್ಪ ಹೆಚ್ಚೇ ಇರುವುದನ್ನು ನಾವು ಕಾಣುತ್ತೇವೆ.

(ದಿನಾಂಕ 23.10.2014 ರಂದು ಶೇಷಾದ್ರಿಪುರಂ ಕಾಲೇಜು ಇಲ್ಲಿ ನೀಡಿದ ವಿಶೇಷ ವ್ಯಾಖ್ಯಾನದ ಆಯ್ದ ಭಾಗ) ■



ಬೆಳಗಾವಿ ಕಾಂಗ್ರೆಸ್ ಅಧಿವೇಶನ -1924 ಹಿನ್ನೆಲೆ

ಆಂದ್ರಪ್ರದೇಶದ ಕಾಕಿನಾಡದಲ್ಲಿ ಕಾಂಗ್ರೆಸ್ ನಡೆದಾಗ, ಅಲ್ಲಿಗೆ ಕರ್ನಾಟಕದ ಪ್ರತಿನಿಧಿಗಳು ಬಹಳ ಜನ ಹೋಗಿದ್ದರು. ಆಗ ಗಾಂಧೀಜಿ ಯರವಡಾ ಸೆರೆಮನೆಯಲ್ಲಿದ್ದರು. ಕಾಕಿನಾಡದ ಕಾಂಗ್ರೆಸ್ ಅಧಿವೇಶನದಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನ (1924ರಲ್ಲಿ) ಕರ್ನಾಟಕದಲ್ಲಿ ನಡೆಯಬೇಕು ಎಂದು ಗೊತ್ತಾಗಿತ್ತು. ಕರ್ನಾಟಕದಿಂದ ಅಷ್ಟು ಜನ ಪ್ರತಿನಿಧಿಗಳು ಕಾಂಗ್ರೆಸಿಗೆ ಬಂದಿದ್ದಕ್ಕೂ ಅದೇ ಕಾರಣ. ಮೊಟ್ಟಮೊದಲ ಬಾರಿಗೆ ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿ ಕನ್ನಡದಲ್ಲಿ ಭಾಷಣ ಆಯಿತು. ಆ ಭಾಗ್ಯ ಶ್ರೀ ದೇಶಪಾಂಡೆ ಗಂಗಾಧರ ರಾಯರದು. 15-20 ನಿಮಿಷ ಮಾತನಾಡಿ, ಕಾಂಗ್ರೆಸ್ ಅಧಿವೇಶನ ಮುಂದಿನದು ಕರ್ನಾಟಕದಲ್ಲಿ ಆಗಲಿ ಎಂದು ಕರ್ನಾಟಕದ ಪರವಾಗಿ ಅವರು ಆಹ್ವಾನ ಇತ್ತರು.

ಮೌಲಾನಾ ಮಹಮ್ಮದಲಿ ಕಾಕಿನಾಡ ಕಾಂಗ್ರೆಸ್ಸಿನ ಅಧ್ಯಕ್ಷರು. ಕಾಂಗ್ರೆಸ್ಸಿಗೆ ಯಾರು ಒಳಗೊಳ್ಳಬಹುದು ಎಂದು ಸೂಚಿಸುವುದು ಅಧ್ಯಕ್ಷರ ಕೆಲಸ. ಮೌಲಾನಾ ಸಾಹೇಬರು ಮೂರು ಹೆಸರನ್ನು ಸೂಚಿಸಿದರು. ಪಂಡಿತ ನೆಹರು, ಡಾ। ಕಿಚಲು, ದೇಶಪಾಂಡೆ ಗಂಗಾಧರರಾಯರು. ಒಂದು ಉತ್ತರ ಪ್ರದೇಶದ್ದು, ಒಂದು ಪಂಜಾಬಿನದು, ಒಂದು ಕರ್ನಾಟಕದ್ದು. ಕಾಂಗ್ರೆಸ್ ಸರ್ವಾನುಮತಿಯಿಂದ ಮೂರೂ ಹೆಸರನ್ನು ಒಪ್ಪಿಕೊ0ಡಿತು.

ಕರ್ನಾಟಕದಲ್ಲಿ ಮುಂದಿನ ವರ್ಷದ ಕಾಂಗ್ರೆಸ್ ನಡೆಯಬೇಕು ಎಂಬ ಆಮಂತ್ರಣ ಬಂದಾಗ ಸ್ವಯಂ ಮಹಮ್ಮದಲಿಯೇ ಅದನ್ನು ಪುಷ್ಟೀಕರಿಸಿದರು. ಅಧ್ಯಕ್ಷರೇ ಸಮರ್ಥಿಸಿದ ಮೇಲೆ ಉಳಿದ ಎಲ್ಲ ಆಮಂತ್ರಣಗಳು ಹಿಂದಕ್ಕೆ ಹೋದವು. ಕರ್ನಾಟಕದ ಆಮಂತ್ರಣಕ್ಕೆ ಸರ್ವಾನುಮತಿ ದೊರೆಯಿತು. ಬಿಜಾಪುರದ ಕಾಂಗ್ರೆಸ್ ಮುಖಂಡರಾದ ಶ್ರೀ ಕೌಜಲಗಿ ಶ್ರೀನಿವಾಸರಾಯರು ಆ ಆಮಂತ್ರಣದ ಸೂಚನೆಯನ್ನು ಮಂಡಿಸಿದರು. ಅದು ಮಾನ್ಯವಾಯಿತು.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಬೇಕು - ಆದರೆ ಎಲ್ಲಿ ? ಈ ಪ್ರಶ್ನೆಯನ್ನು ಕಾಂಗ್ರೆಸ್ ತೀರ್ಮಾನಿಸಲಿಲ್ಲ. ಪ್ರಾಂತೀಯ ಕಾಂಗ್ರೆಸ್ ಸಮಿತಿಗೇ ಬಿಟ್ಟುಬಿಟ್ಟರು. ಇದು ಅಷ್ಟು ಸುಲಭವಾಗಿ ಇತ್ಯರ್ಥವಾಗುವ ಮಾತು ಅಲ್ಲ. ಸುಲಭವಾಗಿ ಸಮರಸ ಆಗಿ ತೀರ್ಮಾನ ಆಗಲೂ ಇಲ್ಲ. ಬಿಜಾಪುರದವರಿಗೆ ಬಿಜಾಪುರದಲ್ಲಿ ಅಧಿವೇಶನ ನಡೆಸಬೇಕು ಎಂಬ ಆಶೆ. ಮಂಗಳೂರಿನಲ್ಲಿ ಆಗಬೇಕು ಎಂದು ಮಂಗಳೂರಿನವರಿಗೆ. ಧಾರವಾಡದಲ್ಲಿ ಆಗಬೇಕು ಎಂದು ಧಾರವಾಡದವರಿಗೆ. ಗಂಗಾಧರರಾಯರಿಗೆ ಬೆಳಗಾಂನಲ್ಲಿ ನಡೆಸಬೇಕು ಎಂಬ ಬಯಕೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ ಹುಬ್ಬಳ್ಳಿಯಲ್ಲಿ ನಡೆಯಿತು. ಆಗ ಕರ್ನಾಟಕದಲ್ಲಿ ಇದ್ದದ್ದು ಎರಡೇ ದೊಡ್ಡ ಪಟ್ಟಣ: ಒಂದು ಬೆಂಗಳೂರು, ಒಂದು ಹುಬ್ಬಳ್ಳಿ.

ಆಗ ಬೆಂಗಳೂರು ಮೈಸೂರು ಸಂಸ್ಥಾನಕ್ಕೆ ಸೇರಿದ್ದಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರು ದೇಶೀ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಚಳವಳಿ ನಡೆಸುವುದು ಇಷ್ಟವಿರಲಿಲ್ಲ. ಆದ್ದರಿಂದ ಬೆಂಗಳೂರಲ್ಲಿ ಕಾಂಗ್ರೆಸ್ ನಡೆಸುವ ಮಾತೇ ಇರಲಿಲ್ಲ. ಉಳಿದದ್ದು ಹುಬ್ಬಳ್ಳಿ.

ಹುಬ್ಬಳ್ಳಿಯೇನೋ ವ್ಯಾಪಾರ ಸ್ಥಳವೇ. ಅಲ್ಲಿ ಹತ್ತಿ ವ್ಯಾಪಾರ ಹೆಚ್ಚೇ. ಆದರೆ ಅಲ್ಲಿನ ಜನರಿಗೆ ಕಾಂಗ್ರೆಸ್ ನಡೆಸುವ ಮನಸ್ಸು ಇರಲಿಲ್ಲ. ಮನಸ್ಸು ಮಾಡಿದ್ದರೆ ಕಾಂಗ್ರೆಸ್ ನಡೆಸುವುದು

ಅವರಿಗೆ ಕಷ್ಟ ಆಗುತ್ತಿರಲಿಲ್ಲ. ಬಳ್ಳಾರಿ, ಕಾರವಾರ ಜಿಲ್ಲೆಗಳಲ್ಲಿ ಜನರಿಗೆ ಉತ್ಸಾಹ ಕಡಿಮೆ ಇತ್ತು ತಮ್ಮಿಂದ ಸಾಧ್ಯ ಇಲ್ಲ - ಎಂದು ಅಲ್ಲಿನ ಜನ ಹೇಳಿಬಿಟ್ಟರು.

ಧಾರವಾಡದಲ್ಲಿ ಮಾಡಬೇಕು ಎಂದು ಕೆಲವರಿಗೆ ಭಾರಿ ಹುರುಪು. ಮಂಗಳೂರಿನಲ್ಲಿ ಮಾಡೋಣ ಎನ್ನುವ ಉತ್ಸಾಹ ಕಾರ್ನಾಡ ಸದಾಶಿವರಾಯರಿಗೆ ಇತ್ತು. ಕಾಂಗ್ರೆಸ್ಸನ್ನು ನಡೆಸಲು ಪ್ರಾರಂಭದ ವೆಚ್ಚವೆ ಕೆಲವು ಸಾವಿರ ಆಗುತ್ತದೆ. ಕಡೇ ಪಕ್ಷ 50 ಸಾವಿರ ಆದರೂ ಬೇಕು.ಗಂಗಾಧರರಾಯರು ಶಹಪುರದ ವರ್ತಕರನ್ನು ಕೇಳಿ,30,000 ಸಾವಿರ ರೂಪಾಯಿನ ವಾಗ್ದಾನ ಪಡೆದಿದ್ದರು. ಆ ವರ್ತಕರು ತಮ್ಮ ವಾಗ್ದಾನವನ್ನು ಲಿಖಿತ ರೂಪದಲ್ಲಿ ಬರೆದೇ ಕೊಟ್ಟಿದ್ದರು.ಕೆಲ ವರ್ತಕರು ಕಾಂಗ್ರೆಸ್ ಸುಸಂಧಿಯನ್ನು ಕಳೆದುಕೊಳ್ಳಬಾರದು ಎಂದು ತಮ್ಮ ಆಮಂತ್ರಣವನ್ನು ಒತ್ತಾಯಿಸಲು ಪ್ರಾಂತೀಯ ಸಮಿತಿಯ ಸಭೆಗೇ ಬಂದಿದ್ದರು.

ಪ್ರಾಂತೀಯ ಸಮಿತಿ ಸಭೆಯಲ್ಲಿ ನಿರ್ಣಯ

ಪ್ರಾಂತೀಯ ಸಮಿತಿಯ ಸಭೆಗೆ ಬಿಜಾಪುರ, ಮಂಗಳೂರು. ಕಾರವಾರ ಜಿಲ್ಲೆಗಳ ಜನರು ಎಲ್ಲರೂ ಬಂದಿದ್ದರು. ತಮ್ಮ ತಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ನಡೆಯಬೇಕೆಂದು ಎಲ್ಲರದೂ ಬಾರಿ ಪ್ರಯತ್ನ. ಮಂಗಳೂರಿನ ಪರ ಶ್ರೀ ಕಾರ್ನಾಡ ಸದಾಶಿವರಾಯರೂ, ಬಿಜಾಪುರದ ಪರ ಶ್ರೀ ಶಾಟು ಶ್ರೀನಿವಾಸರಾಯರೂ ಬಹಳ ಗಟ್ಟಿಯಾಗಿ ವಾದಿಸಿದರು.

ಎರಡೂ ಊರಿನದೂ ಸ್ವಲ್ಪ ಹೆಚ್ಚುಗಾರಿಕೆ ಇತ್ತು. ಬಿಜಾಪುರ ಹಿಂದಿನ ವೈಭವದ ಅವಶೇಷ, ಮಂಗಳೂರು ಸಕಲ ಸೃಷ್ಟಿಯ ಸೌಂದರ್ಯದ ಗಣಿ. ಬೆಳಗಾಂವಿಯಲ್ಲಿ ಈ ಎರಡೂ ಇಲ್ಲ. ಹೀಗಿದ್ದೂ ಆ ಸಭೆಯಲ್ಲಿ ಕರ್ನಾಟಕದ ಈ ಕಾಂಗ್ರೆಸ್ಸನ್ನು ಬೆಳಗಾಂವಿಯಲ್ಲೇ ನಡೆಸಬೇಕು ಎಂದು ತೀರ್ಮಾನ ಆಯಿತು. ಅದರಂತೆ ಬೆಳಗಾಂವಿಯಲ್ಲಿ ಸರ್ವಸಿದ್ಧತೆಗಳೂ ಆಗತೊಡಗಿದವು.

ಈ ಸಂದರ್ಭದಲ್ಲಿ ಅಂದಿನ ರಾಜಕೀಯ ವಿಶೇಷವಾಗಿ ಕಾಂಗ್ರೆಸಿನ ಪರಿಸ್ಥಿತಿಯು ಹೇಗಿತ್ತು ಎಂಬುದನ್ನು ಸ್ವಲ್ಪ ನೋಡೋಣ.

ಅಂದಿನ ರಾಜಕೀಯ ಪರಿಸ್ಥಿತಿ

ಗಾಂಧೀಜಿ ಜೈಲಿಗೆ ಹೋದ ನಂತರ ಹೊರಗೆ ದೇಶದಲ್ಲಿ ಅಸಹಕಾರದ ಆಂದೋಲನದ ಕಸುವು ಕುಗ್ಗುತ್ತ ಬಂದಿತ್ತು. ಅಲ್ಲಲ್ಲಿ ಜಾತೀಯ ದಂಗೆಗಳು ಮತ್ತೆ ತಲೆ ಎತ್ತಿದವು. ಸಿ.ಆರ್.ದಾಸ್ ಮತ್ತು ನೆಹರು ಮೊದಲಾದ ನಿಸ್ಸೀಮ ದೇಶಭಕ್ತರು ಕೌನ್ಸಿಲ್ ಪ್ರವೇಶಮಾಡಿ ಅಲ್ಲಿಯೇ ಅಸಹಕಾರ ಪ್ರಾರಂಭಿಸಬೇಕೆಂಬ ನಿರ್ಧಾರಕ್ಕೆ ಬಂದರು. 1922ರಲ್ಲಿ ಗಯಾದಲ್ಲಿ ಸಿ.ಆರ್.ದಾಸರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಸಿ.ಆರ್. ದಾಸರು ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೆ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸ್ವರಾಜ್ಯ ಪಕ್ಷ ಸ್ಥಾಪಿಸಿದರು. ಮುಂದೆ ಬರಬರುತ್ತ ದೇಶದಲ್ಲಿ ವಿಚಾರವಂತ ಜನರಿಂದ ಈ ಪಕ್ಷಕ್ಕೆ ಬೆಂಬಲ ದೊರೆಯತೊಡಗಿತು . 1923ರಲ್ಲಿ ಕಾಕಿನಾಡಾದಲ್ಲಿ ಸೇರಿದ ಕಾಂಗ್ರೆಸಿನ ಅಧ್ಯಕ್ಷತೆಯನ್ನು ಮಹಮ್ಮದಲಿ ಅವರು ವಹಿಸಿದರು. ಈ ಕಾಲಕ್ಕೆ ಕೌನ್ಸಿಲ್ ಪ್ರವೇಶದ ಬಗೆಗೆ ತೀವ್ರ ಭಿನ್ನಾಭಿಪ್ರಾಯಗಳಾಗಿ ಕಾಂಗೆಸಿನಲ್ಲಿ ಎರಡು ಗುಂಪುಗಳಾದವು . ಒಂದು ಪರಿವರ್ತನ ಪಕ್ಷ (ಪ್ರೋ ಚೇಂಜರ್ಸ್), ಇನ್ನೊಂದು ಅಪರಿವರ್ತನ ಪಕ್ಷ (ನೋ ಚೇಂಜರ್ಸ್). ಪರಿವರ್ತನ ಪಕ್ಷದಲ್ಲಿ ಸಿ.ಆರ್. ದಾಸ್ ಮತ್ತು ಮೋತಿಲಾಲ್ ನೆಹರು ಮೊದಲಾದವರೂ, ಅಪರಿವರ್ತನ ಪಕ್ಷದಲ್ಲಿ ಬಾಬುರಾಜೇಂದ್ರ ಪ್ರಸಾದ, ರಾಜಗೋಪಾಲಾಚಾರಿ , ವಲ್ಲಭಭಾಯಿ ಪಟೇಲ್, ಗಂಗಾಧರರಾವ್ ದೇಶಪಾಂಡೆ ಮೊದಲಾದವರೂ ಇದ್ದರು.

ಇವರೆಲ್ಲರೂ ನಖಶಿಖಾಂತ ದೇಶಭಕ್ತರೇ ಆಗಿದ್ದರು. ಇದರಿಂದಾಗಿ ಜನರು ಯಾರನ್ನು ಹಿಂಬಾಲಿಸಬೇಕು ಎಂಬುದು ತಿಳಿಯದೆ ಗೊಂದಲದಲ್ಲಿ ಬಿದ್ದಿದ್ದರು. ಇಷ್ಟೆ ಅಲ್ಲ, ಕಾಂಗ್ರೆಸ್ಸೇ ಎಲ್ಲಿ ಒಡೆದು ಹೋಗುವದೋ ಎಂಬ ಭೀತಿಯೂ ತಲೆದೋರಿತು. ಬಹು ಜನರ ಬೆಂಬಲ ಕೌನ್ಸಿಲ್ ಪ್ರವೇಶದ ಪರವಾಗಿಯೇ ಬೆಳೆಯತೊಡಗಿತು. ಇಷ್ಟೇ ಅಲ್ಲ, 1924ರ ಪ್ರಾರಂಭದ ಹೊತ್ತಿಗೆ ಅಸಹಕಾರದ ಆಂದೋಲನಕ್ಕೂ ಗಾಂಧೀವಾದಕ್ಕೂ ತಿಲಾಂಜಲಿ ಕೊಟ್ಟಂತಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ದೇಶಕ್ಕೆ ಒಳ್ಳೆಯದು ಮಾಡಲೋ ಏನೋ ಎಂಬಂತೆ ಸೆರೆಮನೆಯಿಂದ ಗಾಂದೀಜಿಯ ಬಿಡುಗಡೆ ಆಯಿತು. ಯಾವುದೇ ಮಹತ್ವದ ಕಾರ್ಯವನ್ನು ದೊಡ್ಡವರೇ ಆರಂಭಿಸಬಲ್ಲರು ಮತ್ತು ಅದರಲ್ಲಿ ಬರುವ ಅಡೆತಡೆಗಳನ್ನು ಅವರೇ ನಿವಾರಿಸಬಲ್ಲರು. ಆಗ ಕಾಂಗ್ರೆಸ್ಸಿನಲ್ಲಿ ಉದ್ಭವಿಸಿದ ಮತ ಭೇದವನ್ನು ಗಾಂಧೀಜಿ ಬಿಟ್ಟರೆ ಮತ್ತಾರು ನಿವಾರಿಸಬಹುದಿತ್ತು ? ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿ ಅಂಥವರೇ ಕಾಂಗ್ರೆಸಿನ ಅಧ್ಯಕ್ಷರಾಗುವ ಅವಶ್ಯಕತೆ ಇತ್ತು. ಮತ್ತು ಆ ಮೇರೆಗೆ ಗಾಂಧೀಜಿಯೇ 1924ರಲ್ಲಿ ಬೆಳಗಾಂವ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಈ ದೃಷ್ಟಿಯಿಂದ, ಬೆಳಗಾಂವ ಕಾಂಗ್ರೆಸ್ಸು ಅಸಹಕಾರದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಘಟ್ಟವಾಗಿದೆ .


(ಗಾಂಧೀ ಮತ್ತು ಕರ್ನಾಟಕ ಕೃತಿಯಿಂದ ಆಯ್ದ ಅಧ್ಯಾಯ) ■

ಮಹಾತ್ಮ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಅಂದಿನ ಬೆಳಗಾಂನಲ್ಲಿ 1924 ರಲ್ಲಿ ಡಿಸೆಂಬರ್ 26 ಮತ್ತು 27 ರಂದು ನಡೆಯಿತು. ಇದರ ನೂರು ವರ್ಷಗಳ ಸವಿ ನೆನಪಿಗಾಗಿ 2024ರ ಡಿಸೆಂಬರ್ 26 ಮತ್ತು 27 ರಂದು ಎರಡು ದಿನ ಬೆಳಗಾವಿಯಲ್ಲಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗುತ್ತಿದೆ. ಇದರ ಮುಂದುವರಿದ ಭಾಗವಾಗಿ ಅಕ್ಟೋಬರ್ 2025 ರವರೆಗೆ ವರ್ಷಪೂರ್ತಿ "ಗಾಂಧಿ ಭಾರತ" ಹೆಸರಿನಲ್ಲಿ ಹಲವಾರು ಗಾಂಧಿ ವಿಚಾರಗಳ ಕಾರ್ಯಕ್ರಮ ಕರ್ನಾಟಕದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದ ಲೋಗೋ ಬೆಳಗಾವಿಯಲ್ಲಿ ಬಿಡುಗಡೆಯಾಗಿದೆ. ಖ್ಯಾತ ಕಲಾವಿದ ರಾ. ಸೂರಿ ಈ ಲೋಗೋವನ್ನು ರಚಿಸಿದ್ದಾರೆ.

ಗಾಂಧೀಜಿ ಅನುಯಾಯಿಯ ಜೊತೆ

ಒಂದು ಸಣ್ಣ ಕಥೆ

–ಗಿರಿಧರ ಖಾಸನೀಸ



ಬೊಚ್ಚು ಬಾಯಿ, ಬಿಳಿ ಮೀಸೆ, ದುಂಡು ಕನ್ನಡಕ *

ರೈಲು ಡಬ್ಬಿಯಲ್ಲಿ ಕುಳಿತಿದ್ದ ಹಿರಿಯರು ಗಾಂಧೀಜಿಯನ್ನು ಹೋಲುತ್ತಿದ್ದರು. ಅಟೆನ್–ಬರೋ ಇವರನ್ನೇ ಹಾಕಿಕೊಂಡು ಸಿನಿಮಾ ಮಾಡಬಹುದಿತ್ತು ಎಂದೆನಿಸಿ ನಗು ಬಂತು.

ನನ್ನನ್ನು ಗಮನಿಸಿದ ಅವರು, 'ಸಿನಿಮಾ ಏನೋ ಚೆನ್ನಾಗಿತ್ತು. ಆದರೆ ಮೂರು ಗಂಟೆಯಲ್ಲಿ ಒಂದು ಜೀವಿತಾವಧಿಯನ್ನು ಚಿತ್ರಿಸಲು ಸಾಧ್ಯವೇ?' ಅಂದರು.

ಅರೆ, ನನ್ನ ಮನದ ಮಾತು ಅವರಿಗೆ ಹೇಗೆ ತಲುಪಿತು ಅಂತ ಆಶ್ಚರ್ಯವಾಯಿತು.

ಬೇರೆ ಪ್ರಯಾಣಿಕರು ಡಬ್ಬಿಯೊಳಗೆ ಬರಲು ಶುರು ಮಾಡಿದ್ದರು.

'ನಮಸ್ಕಾರ ಸರ್. ಶಿವಮೊಗ್ಗದ ಕಡೆಗೇನು ಪಯಣ?' ಅಂತ ಒಣಹರಟೆಗಿಳಿದೆ.

'ಇಲ್ಲಪ್ಪ. ಇಲ್ಲೇ ತಿಪಟೂರಿನಲ್ಲಿ ಇಳೀತೀನಿ. ಮೊಮ್ಮೊಗಳು ಮೊನ್ನೆ ಪಿಯುಸಿ ಪರೀಕ್ಷೆಯಲ್ಲಿ ತೊಂಬತ್ತೈದು ಪರ್ಸೆಂಟ್ ತಗೊಂಡು ಪಾಸಾಗಿದ್ದಾಳೆ. ಅವಳನ್ನು ನೋಡಿ ಅಭಿನಂದಿಸಿ ಆಶೀರ್ವಾದ ಮಾಡಿ ಬರೋಣ ಅಂತ ಹೊರಟೆ.'

'ಸರ್ ತಪ್ಪು ತಿಳೀಬೇಡಿ. ನಿಮ್ಮನ್ನು ನೋಡಿದ ತಕ್ಷಣ ಗಾಂಧೀಜಿ ನೆನಪಾದರು.'

'ಅದರಲ್ಲಿ ತಪ್ಪೇನಿದೆ, ಮಗು? ನಾನು ಸ್ವಾತಂತ್ರ್ಯ ಹೋರಾಟಗಾರ. ಗಾಂಧೀಜಿಯವರ ಅನುಯಾಯಿ. ಅವರನ್ನು ನಾಲ್ಕು ಬಾರಿ ನೋಡಿದ ಭಾಗ್ಯಶಾಲಿ.'

ರೈಲು ನಿಧಾನವಾಗಿ ಚಲಿಸತೊಡಗಿತು.

ಕೋಚ್‌ನಲ್ಲಿ ಸಾಕಷ್ಟು ಪ್ರಯಾಣಿಕರು ಬಂದು ಕುಳಿತಿದ್ದರು.

'ಬೆಂಗಳೂರಿನಲ್ಲಿ ನಿಮ್ಮ ಮನೆ ಎಲ್ಲಿದೆ ತಾತ?'

'ನಲವತ್ತು ವರ್ಷಗಳಿಂದ ಕತ್ರಿಗುಪ್ಪೆಯ ಮೂಲೆಯಲ್ಲಿ ಒಂದು ಪುಟ್ಟ ರೂಮಿನಲ್ಲಿದ್ದೇನೆ.'

'ತಾತ, ನಿಮ್ಮನ್ನು ಗಮನಿಸುತ್ತಾ ಇದ್ದೀನಿ. ನಿಮ್ಮ ಬೆರಳಲ್ಲಿರುವ ಉಂಗುರವನ್ನು ಪದೇ ಪದೇ ಮುಟ್ಟಿ ನೋಡಿಕೊಳ್ಳುತ್ತಿದ್ದೀರಿ. ಒಂದೆರಡು ಬಾರಿ ಕಣ್ಣಿಗೂ ಒತ್ತಿಕೊಂಡಿರಿ. ಏನು ವಿಷಯ?'

'ಓಹ್! ಇದಾ? ನನ್ನ ಹತ್ತಿರ ಯಾವುದೇ ಆಸ್ತಿ ಪಾಸ್ತಿ ಇಲ್ಲ. ನನ್ನದೂ ಅಂತ ಇರೋದು ಈ ಒಂದು ಚಿನ್ನದ ಉಂಗುರ. ನನ್ನಮ್ಮ ಮಾಡಿಸಿ ಕೊಟ್ಟಿದ್ದು. ಯಾವತ್ತೂ ತೆಗೀಬಾರದು, ಮಾರಬಾರದು ಅಂತ ಹೇಳಿದ್ದಳು. ಇಷ್ಟು ವರ್ಷ ಅನುಸರಿಸಿದ್ದೇನೆ. ಈಗ ಅದನ್ನು ತೆಗೆಯುವ ಸಮಯ ಬಂದಿದೆ.'

'ಯಾಕೆ ತಾತ? ಅಂತಹ ಸನ್ನಿವೇಶ ಏನು?'

'ಹಾಗೇನು ಇಲ್ಲ ಮರಿ. ನನಗೂ ವಯಸ್ಸಾಯಿತು. ಈ ಉಂಗುರವನ್ನು ನನ್ನ ಮೊಮ್ಮೊಗಳಿಗೆ ಕೊಟ್ಟುಬಿಟ್ಟರೆ ನಿರಾಳವಾಗಿ ಕಣ್ಣು ಮುಚ್ಚಬಹುದು ಅನಿಸಿದೆ.'

'ಕಣ್ಣು ಮುಚ್ಚುವ ಯೋಚನೆ ಬಿಡಿ ಸರ್. ಅದಿರಲಿ. ನೀವು ಸ್ವಾತಂತ್ರ್ಯ ಹೋರಾಟಗಾರು ನಿಮಗೆ ರೈಲಿನಲ್ಲಿ ಉಚಿತ ಪ್ರಯಾಣ ಅಲ್ಲವೇ ಸರ್?'

'ಉಚಿತ ಪ್ರಯಾಣ, ಪೆನ್ಷನ್, ಮುಂತಾದ ಸರಕಾರೀ ಸೌಲಭ್ಯಗಳಿವೆಯಂತೆ. ನಾನು ಯಾವುದೇ ಸವಲತ್ತುಗಳನ್ನು ಸ್ವೀಕರಿಸಿಲ್ಲ. ಗಾಂಧೀಜಿ ಹೇಳುತ್ತಿದ್ದರು ಎಂದಿಗೂ ಯಾರಿಗೂ ಕೈಚಾಚಬಾರದು ಅಂತ. ಇಲ್ಲಿಯವರೆಗೆ ಅದನ್ನು ಕಾದುಕೊಂಡು ಬಂದಿದ್ದೇನೆ. ಜೈಲಿನಲ್ಲಿದ್ದಾಗ ಪೊಲೀಸರು ಕೊಟ್ಟ ಕಾಟ ಅಷ್ಟಿಷ್ಟಲ್ಲ. ಆದರೂ ಎರಡು ಹನಿ ನೀರಿಗೂ ಕೈಚಾಚಲಿಲ್ಲ. ಸರಳ ಜೀವನ ರೂಢಿಯಾಗಿದೆ. ಎರಡು ಹೊತ್ತಿನ ಊಟಕ್ಕೆ ಮೋಸವಿಲ್ಲ. ಸಾಕು.'

'ನಿಮಗೆ ಎಷ್ಟು ಮಕ್ಕಳು, ಅಜ್ಜ?'

'ಮದುವೆಯೇ ಆಗಲಿಲ್ಲ ಅಂದ ಮೇಲೆ ಹೇಗೆ ಇರಲು ಸಾಧ್ಯ. ತಿಪಟೂರಿನ ಹುಡುಗಿಯೂ ನನ್ನ ಸ್ವಂತ ಮಗಳಲ್ಲ. ಜೈಲಿನಲ್ಲಿ ಸಂಗಾತಿಯಾದ ಸದಾಶಿವನ ಮಗಳು. ಸದಾಶಿವ ಅತ್ಯಂತ ಪ್ರಭುದ್ದ ಹಾಗೂ ಪ್ರಚಂಡ ಹೋರಾಟಗಾರ. ಹೋರಾಟದಲ್ಲೇ ಹೋಗಿಬಿಟ್ಟ. ಚಿಕ್ಕ ವಯಸ್ಸಿನಲ್ಲೇ ತಬ್ಬಲಿಯಾದ ಅವನ ಮಗಳನ್ನು ನಾನು ಬೆಳೆಸಿದೆ. ಸೀತೆ ಒಳ್ಳೆಯ ಹುಡುಗಿ. ಒಳ್ಳೆಯ ಸಂಬಂಧವೂ ಸಿಕ್ಕಿತು. ಸೀತೆಯ ಮಗಳು ಭೂಮಿ. ಅವಳನ್ನೇ ನಾನು ಮೊಮ್ಮೊಗಳು ಅಂದಿದ್ದು. ಎಲ್ಲ ಹಳೆ ಕಥೆ ಬಿಡು. ನಿನಗೆ ಬೋರ್ ಆಗುತ್ತಿರಬೇಕು.'

'ಇಲ್ಲ, ತಾತ. ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಪಠ್ಯ ಪುಸ್ತಕಗಳಲ್ಲಿ ಓದಿರುವೆ. ಯಾವ ಹೋರಾಟಗಾರನನ್ನೂ ಇಷ್ಟು ಹತ್ತಿರದಿಂದ ನಾನು ನೋಡೇ ಇಲ್ಲ.'

'ಹೇಗೆ ನೋಡ್ತಿ ಮಗು? ನನ್ನ ಪೀಳಿಗೆ ಮುಗಿದು ಹೋಯಿತು. ನಾವು ಬದುಕಿರೋರು ಬೆರಳೆಣಿಕೆಯಷ್ಟು ಜನರು ಮಾತ್ರ. ನನ್ನ ಬುಲಾವು ಎಂದು ಬರುತ್ತದೋ, ಯಾರಿಗೆ ಗೊತ್ತು? ನಾನಂತೂ ರೆಡಿ.'

ರೈಲು ವೇಗವಾಗಿ ಚಲಿಸುತ್ತಿತ್ತು. ಟಿಸಿ ಬಂದ. ನನ್ನ ಟಿಕೆಟ್ ತೋರಿಸಿದೆ. ಓಕೆ ಎನ್ನುತ್ತಾ ಗೀಚಿ ವಾಪಸ್ ಕೊಟ್ಟ. 'ಸರ್ ನಿಮ್ಮ ಟಿಕೆಟ್' ಅಂತ ಹಿರಿಯರನ್ನು ಕೇಳಿದ. ಚೀಲಕ್ಕೆ ಕೈಹಾಕಿ ಹುಡುಕಿದರು. ಸಿಗಲಿಲ್ಲ. ಇಲ್ಲೇ ಇಟ್ಟಿದ್ನಲ್ಲ ಅಂತ ಸಂದಿಗೊಂದಿಗಳಲ್ಲಿ ಕೈ ಆಡಿಸಿದರು. ಉಹುಂ. ಸಿಗಲಿಲ್ಲ.

ಟಿಸಿ ಚಡಪಡಿಸಿದ. ಸರ್, ಇಷ್ಟು ಹೊತ್ತು ಮಾಡಿದರೆ ಹೇಗೆ? ನಾನು ಇನ್ನೂ ಎರಡು ಡಬ್ಬಿಗಳನ್ನು ಚೆಕ್ ಮಾಡಬೇಕು ಅಂದ.

'ಸ್ವಲ್ಪ ತಡಿಯಪ್ಪ. ನಾನು ಟಿಕೆಟ್ ಕೊಂಡಿದ್ದೇನೆ. ಬಿಟ್ಟಿ ಓಡಾಡುವಷ್ಟು ಕೇವಲ ಮನುಷ್ಯನಲ್ಲ ... ಕಿಸೆಯಲ್ಲೇ ಇಟ್ಟ ನೆನೆಪು '

'ನೋಡಿ ಸರ್. ಟಿಕೆಟ್ ಸಿಗದಿದ್ದರೆ ಮುಂದಿನ ಸ್ಟೇಷನ್-ನಲ್ಲಿ ಇಳಿದು ಬಿಡಿ. ಆಯ್ತಾ?'

ನನಗೆ ಕೋಪ ಬಂತು. 'ಛೆ ಛೆ ಟಿಸಿ ಸರ್, ನೀವು ಏನು ಮಾತನಾಡುತ್ತಿದ್ದೀರಿ? ಅವರನ್ನು ನೋಡಿ. ಅವರ ವಯಸ್ಸನ್ನು ನೋಡಿ. ಸ್ವಾತಂತ್ರ್ಯ ಹೋರಾಟಗಾರರು. ನೀವು ಅವರನ್ನು ಹೇಗೆ ಕೆಳಗಿಳಿಸುತ್ತೀರಿ? ಸ್ವಲ್ಪ ಮರ್ಯಾದೆ ಬೇಡವೇ?'

ಟಿಸಿ ಹೇಳಿದ. 'ಸರ್, ನಾನೇನೂ ಕುರುಡನಲ್ಲ. ಅವರನ್ನು ನೋಡಿದರೆ ನನ್ನ ನನಗೆ ಅಜ್ಜನ ನೆನಪಾಗತ್ತೆ. ಆದರೆ ನಾನೇನು ಮಾಡಲಿ. ಅಯ್ ಆಮ್ ಜಸ್ಟ್ ಡುಯಿಂಗ್ ಮೈ ಡ್ಯೂಟಿ.'

ನಾನು: 'ಆಯಿತು ಸಾಹೇಬರೇ. ನಾನು ಟಿಕೆಟ್ ಹಣ ಕೊಡ್ತೀನಿ. ಟಿಕೆಟ್ ಜೊತೆಗೆ ಪೆನಾಲ್ಟಿ ಇದ್ದರೆ ಅದನ್ನೂ ಕೊಡಲು ನಾನು ರೆಡಿ. ಎಷ್ಟು ಹೇಳಿ?'

ನನ್ನ ಮಾತು ವೃದ್ಧರ ಕಿವಿಗೆ ಬಿದ್ದ ತಕ್ಷಣ ಕೋಪದಿಂದ ಕೆಂಪಾದರು.

'ಅದು ಯಾಕೆ? ನೀವು ಏಕೆ ನನ್ನ ಟಿಕೆಟ್ ಹಣ ಕೊಡಬೇಕು? ನಾನೇನು ಭಿಕ್ಷುಕನೇ? ಈ ತೊಂಬತ್ತು ವರ್ಷಗಳಲ್ಲಿ ನಾನು ಯಾರಿಗೂ ಕೈ ಚಾಚಿದವನಲ್ಲ. ಗಾಂಧೀಜಿ ಏನು ಹೇಳುತ್ತಿದ್ದರು ಗೊತ್ತಾ ... ಅದು ಹೋಗಲಿ ಬಿಡಿ. ಆಯಿತು ಟಿಸಿ ಸಾಹೇಬರೇ ಮುಂದಿನ ನಿಲ್ದಾಣದಲ್ಲಿ ಇಳಿಯುತ್ತೇನೆ. ಟಿಕೆಟ್ ಇಲ್ಲದೆ ಪ್ರಯಾಣ ಮಾಡೋದು ತಪ್ಪು ನನಗೆ ಗೊತ್ತು. ಅದು ರೈಲ್ವೇಗೆ ಮಾತ್ರವಲ್ಲ ರಾಷ್ಟ್ರಕ್ಕೂ ಮಾಡುವ ದ್ರೋಹ. ನಾನು ಅದನ್ನು ಎಂದಿಗೂ ಮಾಡಲಾರೆ.'

ಟಿಸಿ ತಲೆ ಬಿಸಿಯಾಯಿತು.

'ಸರ್, ನಾನು ಬೇರೆ ಸೀಟುಗಳನ್ನು ಚೆಕ್ ಮಾಡಿ ಬರ್ತೀನಿ. ಅಷ್ಟರಲ್ಲಿ ನೀವು ಮತ್ತೊಮ್ಮೆ ಹುಡುಕಿ. ಟಿಕೆಟ್ ಸಿಗಬಹುದು. ಸಿಗದಿದ್ದರೆ ಆಮೇಲೆ ನೋಡೋಣ.'

ಟಿಸಿ ಮುಂದೆ ಹೋದ.

ವೃದ್ಧರು ಮತ್ತೆ ಹುಡುಕಿದರೂ ಟಿಕೆಟ್ ಸಿಗಲಿಲ್ಲ. ಗಾಡಿ ತುಮಕೂರಿನ ನಿಲ್ದಾಣಕ್ಕೆ ಬಂದು ನಿಂತಿತು. ನಾನು ಎಷ್ಟು ಕೇಳಿಕೊಂಡರೂ ಎದ್ದು ನಿಂತು ರೈಲಿನಿಂದ ಇಳಿಯಲು ಸಿದ್ದರಾದರು. ಏನೋ ನೆನಪಿಸಿಕೊಂಡರು. ಬೆರಳಿನಿಂದ ಉಂಗುರ ಕಳಚಿ ನನ್ನ ಕೈಯಲ್ಲಿಟ್ಟರು.

'ನೋಡು ಮಗು, ನೀನು ಒಳ್ಳೆಯವನು. ನಾನು ಕೇಳದಿದ್ದರೂ ನನ್ನ ಸಹಾಯಕ್ಕೆ ನಿಂತವನು. ನನಗೆ ಇನ್ನೊಂದು ಸಹಾಯ ಮಾಡಿಬಿಡು. ಈ ಉಂಗುರವನ್ನು ನನ್ನ ಮಗಳಿಗೆ ತಲುಪಿಸಿಬಿಡು. ತಿಪಟೂರಿನ ರೈಲ್ವೆ ಸ್ಟೇಷನ್ ಹತ್ತಿರವೇ ಅವಳ ಮನೆ. ಶ್ರೀನಿವಾಸ ಕಾಂಡಿಮೆಂಟ್ಸ್ ಅಂತ ಕೇಳಿದರೆ ಯಾರು ಬೇಕಾದರೂ ತೋರಿಸುತ್ತಾರೆ. ಅದರ ಪಕ್ಕದ ಮನೆ. ಅವಳ ಹೆಸರು ಸೀತಾ ಅಂತ. ಮೊಮ್ಮೊಗಳ ಹೆಸರು ಭೂಮಿ ಅಂತ. ಈವತ್ತೇ ಕೊಡಬೇಕು ಅಂತ ಏನೂ ಇಲ್ಲ. ನಿನಗೆ ಟೈಮ್ ಸಿಕ್ಕಿದಾಗ ತಲುಪಿಸಿಬಿಡು.'

ನಿಂತ ಗಾಡಿ ನಿಧಾನವಾಗಿ ಚಲಿಸತೊಡಗಿತು. ಸರ್ ಸರ್ ಬೇಡ ಸರ್ ಅಂತ ನಾನು ಅವರ ಹಿಂದೆ ಓಡಿದೆ. ಅವರು ಇಳಿದೇ ಬಿಟ್ಟರು. ಜೋಲಿ ತಪ್ಪಿತು. ಪ್ಲಾಟ್-ಫಾರ್ಮಿನ ಮೇಲೆ ಕುಸಿದು ಕುಳಿತರು. ಸಧ್ಯ, ಪೆಟ್ಟಾದ ಹಾಗೆ ಕಾಣಲಿಲ್ಲ. ಗಡಿಬಿಡಿಯಲ್ಲಿ ತಲೆಯಿಂದ ಟೋಪಿ ಮುಗುಚಿಬಿದ್ದಿತು. ಅದರಲ್ಲಿದ್ದ ಅಜ್ಜನ ಟಿಕೆಟ್ ಹೊರಗೆ ಹಾರಿತು.

ಸೀಟಿಗೆ ಮರಳಿದ ನಾನು ಉಂಗುರವನ್ನು ನೋಡುತ್ತಾ ಕೂತೆ. ದೂರದಲ್ಲಿ ರೈಲಿನ ಕರ್ಕಶ ಸೀಟಿ.

■

ಕವಿಗಳ ಕಣ್ಣಲ್ಲಿ ಗಾಂಧಿ



–ರಘುನಾಥ್ ಕೃಷ್ಣಮಾಚಾರ್

ಬೇಂದ್ರೆ ಮತ್ತು ಅಡಿಗರ ನೆನಪು:

ಮೋಹನದಾಸನ ಉಸಿರಿಗೆ ಬೀಸಿದ
ಬಿರುಗಾಳಿಯಾಗ ಸುಟ್ಟುರೆ ತಂದವು
ಒಣ –ಎಲೆ, ಹುಡಿ – ಮಣ್ಣು ಸೊಪ್ಪು – ಸವದಿಗಳೆಲ್ಲ
ಮೋಡಗಳಾಗುವ ಎಡೆ ಕಂಡವು

ಹುಡುಗರು ಹುಚ್ಚಾಗಿ ತರುಣರು ಮೆಚ್ಚಾಗಿ
ಮುದುಕರು ಪೆಚ್ಚಾಗಿ ನೋಡಿದರು
ಹಲಕೆಲವರು ತಾವೆ ಪುಕ್ಕ–ಹಕ್ಕಿಗಳಂತೆ
ದಿಕ್ಕಾಪಾಲಾಗುತ ಓಡಿದರು

(ದ.ರಾ.ಬೇಂದ್ರೆ)

ಬೇಂದ್ರೆಯವರ ಸಖಿಗೀತದಲ್ಲಿ ಮೋಹನ ದಾಸನ ವ್ಯಕ್ತಿತ್ವವನ್ನು ಸುಟ್ಟುರೆ ಬಿರುಗಾಳಿಗೆ ಹೋಲಿಸಿ,ಅದರ ಪರಿಣಾಮ ವಿವಿಧ ವಯೋಮಾನದ ಜನರ ಮೇಲೆ ವಿವಿಧ ಬಗೆಗಳಲ್ಲಿ ಆದುದನ್ನು ಚಿತ್ರಿಸಿದ್ದಾರೆ. ಕೆಲವರು ತರೆಗೆಲೆಗಳಾದರೆ, ಕೆಲವರು ಮೋಡಗಳಾಗಿ ಮಳೆಗರೆಯುತ್ತಾರೆ, ಮತ್ತೆ ಕೆಲವರು 'ಪುಕ್ಕ ಹಕ್ಕಿ ಗಳ ಹಾಗೆ ದಿಕ್ಕಾಪಾಲಾಗುತ ಓಡಿದರು'

ಮನ ಯಮುನಾತೀರದಲ್ಲಿ
ಕುಣಿದು ಬರೆ ಸಮೀರನು,
ನೆಳಲಿನಿಂದಲೆದ್ದು ಬರಲು
ಗೋಪಗೋಪಿಕೆಯರು,
ಒಡೆದು ಬಿದ್ದ ಕೊಳಲ ಕೊಳಲು
ಬರುವನೊಬ್ಬ ಧೀರನು,
ಅಲ್ಲಿವರೆಗೆ ಮೃಣ್ಮಯ,
ಬಳಿಕ ನಾನು ಚಿನ್ಮಯ!

ಈ ಬಚ್ಚಲ ಕಗ್ಗವಿಯಲಿ
ತಮದ ಸಂತೆ ಗದ್ದಲದಲಿ
ಬಂತೆಲ್ಲಿಂದೆಂತು ಹೇಳು
ಈ ಅಮೂಲ್ಯ ಮಾಲು

(ಎಂ ಗೋಪಾಲಕೃಷ್ಣ ಅಡಿಗ)

ಗಾಂಧಿಯನ್ನು ಕುರಿತ ಅಡಿಗರ ಕವಿತೆಗಳು ಹೀಗೆ ಪರಿಣಾಮ ಬೀರಬಲ್ಲ ಗಾಂಧೀ ವ್ಯಕ್ತಿತ್ವದ ಶೋಧವನ್ನು ಕೈಗೊಳ್ಳುತ್ತದೆ. ಮೊದಲ ಭಾಗದಲ್ಲಿ, ಇಡಿ ನೆಲವೆ ಹೇಗೆ ಅಂತಹ ಧೀರ ವ್ಯಕ್ತಿತ್ವಕ್ಕಾಗಿ ಕಾಯುತ್ತಾ ಇದ್ದ ಚಿತ್ರವಿದೆ. ಇಲ್ಲಿಯು ಯಮುನಾ ನದಿಯ ತೀರವಿದೆ. ಅಲ್ಲಿ ಕೃಷ್ಣನಿಲ್ಲ ನೆಳಲ ಗೋಪ ,ಗೋಪಿಯರು ಮಾತ್ರ.. ಕೃಷ್ಣ ಕೈಬಿಟ್ಟು ಹೋದ ಕೊಳಲು ಒಡೆದು ಹೋಗಿ ಆ ಮಣ್ಣಿನ ಮೇಲೆ ಬಿದ್ದಿದೆ. ಮೃಣ್ಮಯವಾದ ಅದು ತನ್ನನ್ನು ಚಿನ್ಮಯಗೊಳಿಸಬಲ್ಲ ಧೀರ ವ್ಯಕ್ತಿಯ ಬರವಿಗಾಗಿ ಕಾಯುತ್ತಿದೆ.

ಆ ಧೀರ ವ್ಯಕ್ತಿತ್ವವಾದರೂ ಎಂತಹದು.ಅದೊಂದು ಕತ್ತಲೆಯ ಸಂತೆ .ಅಲ್ಲಿ ಎಲ್ಲವನ್ನೂ ಕೊಳ್ಳಲು ಮಾರಲು ಕಾಯುವವರು ಇದ್ದಾರೆ. ಆದರೆ ಅಲ್ಲೊಂದು' ಅಮೂಲ್ಯ' ಮಾಲು' ಇದೆ. ಅದನ್ನು ಕೊಳ್ಳಲಾಗಲಿ , ಮಾರಲಾಗಲಿ ಸಾಧ್ಯವಿಲ್ಲ. ಏಕೆಂದರೆ ಅದು ಬಿಕರಿಗೆ ಇಲ್ಲದ ಅಮೂಲ್ಯ ಮಾಲು' . " ಈ ತಮದ ಸಂತೆಯ ಗದ್ದಲದಲ್ಲಿ ಈ ಅಮೂಲ್ಯ ಮಾಲು ಎಲ್ಲಿಂದ ಬಂತು? ಹೇಗೆ ಎಂದು ಕವಿಗೆ ಆಶ್ಚರ್ಯ. ನಮಗೆ ಕೂಡ ಇಂದಿಗೂ.

(ಮೇಲಿನ ಬೇಂದ್ರೆ ಮತ್ತು ಅಡಿಗರ ಕಾವ್ಯಭಾಗಗಳನ್ನು ಕಳಿಸಿ ಚಿಂತನೆಯನ್ನು ಉದ್ದೀಪಿಸಿದ ಶ್ರೀಪಾದ ಹೆಗಡೆ ಯವರಿಗೆ ಮತ್ತು ಪಟ್ಟಾಭಿರಾಮ ಸೋಮಯಾಜಿಯವರಿಗೆ ಕೃತಜ್ಞತೆ)

■



ಲಾರೆನ್ಸ್ ಬೇಕರ್

'ಪಶ್ಚಿಮದಲ್ಲಿ ಹುಟ್ಟಿ ಬೆಳೆದು, ಶಿಕ್ಷಣ ಕಲಿತು, ಪದವಿ ಸಂಪಾದಿಸಿದವನಾಗಿ, ನಾನು ಮೊದಮೊದಲು ಗಾಂಧಿಯವರ ಆದರ್ಶ ಅತಿಯಾಯಿತು ಎಂದು ಭಾವಿಸಿದ್ದೆ, ಈಗ ಎಪ್ಪತ್ತರ ಹರೆಯದಲ್ಲಿ, ನಲವತ್ತು ವರ್ಷದ ಅನುಭವದ ಮೇಲೆ ನಾನು ತೀರ್ಮಾನಕ್ಕೆ ಬಂದಿದ್ದೇನೆ, ಅವರೇ ಸರಿ, ಅಕ್ಷರಶಃ ಪದಕ್ಕೆ ಪದ ಅವರು ಸರಿ.'

ಹೀಗೆ ತನ್ನ ಆತ್ಮಕಥೆಯಲ್ಲಿ ಬರೆದದ್ದು ಬ್ರಿಟಿಷ್ ವಾಸ್ತುಶಿಲ್ಪಜ್ಞ (architect) ಲಾರೆನ್ಸ್ ವಿಲ್ಫೆಡ್ ಬೇಕರ್.

ಬೇಕರ್ ಅವರು 1937 ರಲ್ಲಿ ಮುಂಬಯಿಯಲ್ಲಿ ಗಾಂಧೀಜಿಯನ್ನು ಭೇಟಿಯಾದಾಗಿನ ಸಂದರ್ಭವನ್ನು ಹೀಗೆ ಬರೆದಿದ್ದಾರೆ : 'ಭಾರತ ಮತ್ತು ಚೀನಾಗಳ ಜನಜೀವನದ ಬಗ್ಗೆ ಗಾಂಧೀಜಿಯವರೊಂದಿಗೆ ಮಾತನಾಡುವುದು ಒಂದು ರೋಚಕ ಅನುಭವ. ಅವರ ಆಶೀರ್ವಾದ ನನಗೆ ದೊರಕಿತು. ಅವರಿಂದ ಪ್ರಭಾವಿತನಾದ ಬ್ರಿಟಿಷನಾದ ನಾನು ಭಾರತಕ್ಕೆ ಬಂದು ಕೆಲಸ ಮಾಡುವ ನನ್ನ ಮನಸ್ಸಿನ ಇಚ್ಛೆಯನ್ನು ವ್ಯಕ್ತಪಡಿಸಿದೆ. ಅವರು ಆಶೀರ್ವದಿಸಿ ಬಾ ಎಂದು ಪ್ರೋತ್ಸಾಹಿಸಿದರು.'

ಲಾರೆನ್ಸ್ ಬೇಕರ್ 1945 ರಲ್ಲಿ ವಾಪಸ್ಸು ಭಾರತಕ್ಕೆ ಬಂದರು. ಮೊದಲು ಉತ್ತರಾಖಂಡದ ಪಿತೋರಘರ್ ನಲ್ಲಿ ಕುಷ್ಠರೋಗದ ಆಸ್ಪತ್ರೆಗಳನ್ನು ಕಟ್ಟಿಸುತ್ತ ಹದಿನಾರು ವರ್ಷ ದುಡಿದರು. ಆ ನಂತರ ಕೇರಳದ ಗುಡ್ಡುಗಾಡು ಜನರ ಕೆಲಸ ಮಾಡಲು ಪೀರುಮೇಡುಗೆ ಹೋದರು. 1970 ರಲ್ಲಿ ತಿರುವನಂತಪುರಕ್ಕೆ ಹೋದರು. 1984 ರಲ್ಲಿ ಗ್ರಾಮ ಪುನರುದ್ಧಾರಕ್ಕೆ ಕಡಿಮೆ ಖರ್ಚಿನ ಗೃಹನಿರ್ಮಾಣಕ್ಕಾಗಿ ವಿಜ್ಞಾನ-ತಂತ್ರಜ್ಞಾನಗಳ ಕೇಂದ್ರವನ್ನು ಸ್ಥಾಪಿಸಿದರು. ಅವರು ತಮ್ಮ ತೊಂಭತ್ತನೆ ವಯಸ್ಸಿನಲ್ಲಿ ಎಪ್ರಿಲ್ 1, 2007 ರಂದು ನಿಧನರಾದರು.

ಇವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಮಣ್ಣಿನ ಗೋಡೆ, ಸಗಣಿ, ಲ್ಯಾಟರೈಟ್ ಕಲ್ಲು, ಬೊಂಬು ಬಳಸಿ ಕಡಿಮೆ ಖರ್ಚಿನ ಕಟ್ಟಡಗಳನ್ನು ಕಟ್ಟಿದರು. ಇವರ ಕಟ್ಟಡಗಳ ಶೈಲಿಗೆ 'ಸಾವಯವ' ವಾಸ್ತುಶಿಲ್ಪ ಶೈಲಿ ಎಂಬ ಹೆಸರಿದೆ. ಇವರನ್ನು 'ಭಾರತದ ವಾಸ್ತುಶಿಲ್ಪದ ಆತ್ಮಸಾಧಕ' ಎಂದು ಪ್ರಶಂಸಿಸಲಾಗಿದೆ. ದುರದೃಷ್ಟವೆಂದರೆ ಇವರ ಯಾವ ಕಟ್ಟಡವನ್ನು ನೋಡಲೂ ಗಾಂಧೀಜಿ ಇರಲಿಲ್ಲ. ಇದ್ದರೆ ತುಂಬ ಖುಷಿಪಡುತ್ತುದ್ದರು.

ಲಾರೆನ್ಸ್ ಬೇಕರ್ ಒತ್ತಿ ಹೇಳಿದರು, "ನಮ್ಮ ದೇಶದ ಕಟ್ಟಡಗಳ ಅಗತ್ಯಗಳ ಬಗ್ಗೆ ಲೋಕಜ್ಞಾನದಿಂದ ಮಾತನಾಡಿದ ನಾಯಕ ಗಾಂಧೀಯೊಬ್ಬರೇ ಎಂದು ನನ್ನ ನಂಬಿಕೆ. ಅವು ಹೇಳಿದ ಮಾತುಗಳಲ್ಲಿ ನನ್ನ ಮೇಲೆ ಇತರರಿಗಿಂತಲೂ ಹೆಚ್ಚು ಪ್ರಭಾವ ಬೀರಿದ ಮಾತೆಂದರೆ, ಆದರ್ಶ ಗ್ರಾಮದಲ್ಲಿ ಆದರ್ಶ ಮನೆ ಕಟ್ಟಬೇಕಾದರೆ, ಅದು ಮೈಲಿ ಫಾಸಲೆಯಲ್ಲಿ ಸಿಗುವ ವಸ್ತುಗಳಿಂದ ಆಗಿರಬೇಕು. ಕಟ್ಟಡ ರಚನಾತಂತ್ರದ ಬಗ್ಗೆ ಗಾಂಧೀಯವರಿಗಿಂತ ಸ್ಪಷ್ಟ ವಿವರಣೆ ಇನ್ನಾವುದುಂಟು? ನಾನು ಒಪ್ಪಿಕೊಳ್ಳುತ್ತೇನೆ, ತರುಣ ವಾಸ್ತುಶಿಲ್ಪಜ್ಞನಾಗಿದ್ದ, ಪಶ್ಚಿಮದಲ್ಲಿ ಹುಟ್ಟಿ ಬೆಳೆದು, ಶಿಕ್ಷಣ ಕಲಿತು, ಪದವಿ ಸಂಪಾದಿಸಿದ್ದ ನಾನು ಮೊದಮೊದಲು ಗಾಂಧೀಜಿಯವರ ಆದರ್ಶ ಅತೀಯಾಯಿತು ಎಂದು ಭಾವಿಸಿದ್ದೆ. ಈಗ ನನ್ನ ಎಪ್ಪತ್ತರ ಹರೆಯದಲ್ಲಿ, ನಲವತ್ತು ವರ್ಷ ಅನುಭವದ ಮೇಲ, ನಾನು ತೀರ್ಮಾನಕ್ಕೆ ಬಂದಿದ್ದೇನೆ, ಅವರೇ ಸರಿ. ಅಕ್ಷರಶಃ ಶಬ್ಧಕ್ಕೆ ಶಬ್ಧ ಸರಿ........

(ಸೌಜನ್ಯ : ನಜರತ್ ಅಲೆನ್ ಪಾಸ್ಕಲ್ ಅವರ ಅಮೋಘನಾಯಕ ಗಾಂಧಿ ಪುಸ್ತಕ)



"ಗಾಂಧೀವಾದ ಅಥವಾ ತತ್ವ ಎಂಬುದಿಲ್ಲ. ನಾನು ಯಾವ ಹೊಸ ಸಿದ್ಧಾಂತವನ್ನು ಕಂಡುಹಿಡಿದಿಲ್ಲ. ನಾನು ಶಾಶ್ವತವಾದ ಸತ್ಯವನ್ನು ನಮ್ಮ ದೈನಂದಿನ ಜೀವನದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅನುಸರಿಸುತ್ತಿರುವೆ ಅಷ್ಟೇ. ನಾನು ತಾಳಿದ ಅಭಿಪ್ರಾಯಗಳು ಹಾಗೂ ನಿರ್ಣಯಗಳು ಕೊನೆಯವೂ ಹಾಗೂ ಶಾಶ್ವತವಾದವೂ ಅಲ್ಲ, ಅವು ನಾಳೆ ಬದಲಾಗಬಹುದು. ನಾನು ಜಗತ್ತಿಗೆ ಕಲಿಸುವುದೇನಿಲ್ಲ. ಸತ್ಯ, ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು . ಇವುಗಳ ವಿಚಾರದಲ್ಲಿ ನಾನು ಕೆಲವು ಪ್ರಯೋಗಗಳನ್ನು ಮಾಡಿರುವೆನು. ಇವುಗಳನ್ನು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ವ್ಯಾಪಕವಾಗಿ ಪ್ರಯೋಗಿಸಲು ಪ್ರಯತ್ನಿಸಿದ್ದೇನೆ. ನಾನು ಕೆಲವು ಸಾರಿ ತಪ್ಪಿದ್ದೇನೆ, ನಾನು ತಪ್ಪಿನಿಂದ ಕಲಿತಿದ್ದೇನೆ. ಇದನ್ನು ಗಾಂಧೀವಾದ ಎಂದು ಕರೆಯಬೇಡಿ".

– ಎಂ.ಕೆ.ಗಾಂಧಿ

ಚಿ|ತ್ರಾ|ವ|ಳಿ





ಕರ್ನಾಟಕ ಸರ್ಕಾರದ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರಾದ ಗಾಂಧಿ ಭವನದ ನಿರ್ದೇಶಕ ಪ್ರೊ ಜಿ ಬಿ ಶಿವರಾಜ್ ಮತ್ತು ಅವರ ಪತ್ನಿ ಮಣಿ ಅವರಿಗೆ ತುರುವೇಕೆರೆ ಸರ್ಕಾರೀ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಯುವಜನರಿಗೆ ಗಾಂಧಿ ಪ್ರಸ್ತುತತೆ ವಿಚಾರ ಸಂಕಿರಣದಲ್ಲಿ ಗೌರವಿಸಲಾಯಿತು .





ಗಂಗಾವತಿ ಭಾಗ್ಯವಾಗ ಗ್ರಾಮೀಣ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತರ ಕೇಂದ್ರ ಹೂವಿನಡಗಲಿ,
ಸಂಯುಕ್ತ ಆಶ್ರಯದಲ್ಲಿ ರಾಜ್ಯಮಟ್ಟದ ಒಂದು ದಿನದ ರಾಷ್ಟ್ರೀಯ ಸೇವಾ ಯೋಜನೆಯ ವಿಚಾರ ಸಂಕಿರಣ ನಡೆಯಿತು.
'ಯೋಜನೆಗಳ ಸದೃಢತೆಗೆ ಪ್ರೇರಣೆಯಾದ ಗಾಂಧೀಜಿಯ ತಾತ್ವಿಕತೆ 'ವಿಷಯ ಆಧಾರಿತ ಕಾರ್ಯಕ್ರಮವನ್ನು
ಬಳ್ಳಾರಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊಫೆಸರ್ ಎನ್ ಮುನಿರಾಜು ಅವರು ಉದ್ಘಾಟಿಸಿದವರು.
ಶ್ರೀ ಆಲಂ ಗುರುಬಸವರಾಜ್, ಅಧ್ಯಕ್ಷರು ವೀರಶೈವ ವಿದ್ಯಾವರ್ಧಕ ಸಂಘ ಬಳ್ಳಾರಿ ಹಾಗೂ ಗಾಂಧಿ ಭವನ ಸದಸ್ಯರಾದ
ಅಬೀನಾ ಬೇಗಂ ಹಾಗೂ ಇನ್ನಿತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.





ಅರಸೀಕೆರೆಯ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನ ಆಶ್ರಮದ ಮಕ್ಕಳಿಗೆ ಚರಕ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು .
ಸಂಸ್ಥೆಯ ಪ್ರತಿನಿಧಿಯಾದ ಪ್ರೊ. ಸಾವಿತ್ರಿ ಹೊಸ ಮನಿ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಆರ್ ಅನಂತ್ ಕುಮಾರ್ ಹಾಗೂ
ಶ್ರೀ ಕಾಂತ್ ನವಲಗುಂದ್, ಮಟ್ಟನವಿಲೆ ಎಜುಕೇರ್ ಶಾಲೆಯ ಮೋಹನ್ ಹಾಗೂ
ಮಕ್ಕಳು ಭಾಗವಹಿಸಿದ್ದರು. ಮೈಸೂರಿನ ಸಚ್ಚಿದಾನಂದ ಅವರು ಮಕ್ಕಳಿಗೆ ಚರಕದಲ್ಲಿ ನೂಲುವ ತರಬೇತಿಯನ್ನು ನೀಡುತ್ತಿದ್ದಾರೆ .



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು,ಹಾಗೂ ಗ್ರಾಮ ಭಾರತಿ ವಿದ್ಯಾಸಂಸ್ಥೆ, ಕೃಷ್ಣರಾಜಪೇಟೆ ಸಂಯುಕ್ತಾಶ್ರಯದಲ್ಲಿ
ತಾಲ್ಲೂಕಿನ ಕಾಲೇಜು ಮಕ್ಕಳಿಗೆ ಆಯೋಜಿಸಿರುವ " ಮಹಾತ್ಮ ಗಾಂಧೀಜಿರವರ–ಬದುಕು ಮತ್ತು ಹೋರಾಟ "
ಎರಡು ದಿವಸದ ವಿಚಾರ ಸಂಕಿರಣವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಪ್ರೊ ಎಸ್ ಜಿ ಸಿದ್ಧರಾಮಯ್ಯ ಉದ್ಘಾಟಿಸಿದರು.
ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಹಾಗೂ ಮಹಿಳಾ ಚಿಂತಕಿ ಡಾ ಎಚ್ ಎಸ್ ಅನುಪಮಾ ಮತ್ತು
ಗಾಂಧಿ ಭವನದ ನಿರ್ದೇಶಕರಾದ ಪ್ರೊ ಜಿ ಬಿ ಶಿವರಾಜ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.



ಬೆಳಗಾವಿ ಕಾಂಗ್ರೆಸ್ ಅಧಿವೇಶನ 1924 ಕ್ಕೆ ನೂರು ವರ್ಷ ತುಂಬುತ್ತಿರುವ ಸಂಸ್ಮರಣೆಗಾಗಿ ಡಿಸೆಂಬರ್ 26 ಮತ್ತು 27 ರಂದು ಬೆಳಗಾವಿಯಲ್ಲಿ
ಎರಡು ದಿನಗಳ ಸಮಾವೇಶವನ್ನು ನಡೆಸಲಾಗುತ್ತಿದೆ. ಇದರ ಜೊತೆಗೆ ವರ್ಷಪೂರ್ತಿ 'ಗಾಂಧಿ ಭಾರತ'ದ
ಹೆಸರಿನಲ್ಲಿ ಗಾಂಧಿ ವಿಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು . ಇದರ ಪೂರ್ವಭಾವಿ ಸಭೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಗಾಂಧಿ ಭವನದಲ್ಲಿ ಮಕ್ಕಳ ದಿನಾಚರಣೆ

ನವಂಬರ್ 14 . ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಹಾತ್ಮ ಗಾಂಧೀಜಿಯ ನೆಚ್ಚಿನ ಶಿಷ್ಯರಾಗಿದ್ದ ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ಅವರ ಜನ್ಮ ದಿನ . ಮಕ್ಕಳೆಂದರೆ ನೆಹರೂ ಅವರಿಗೆ ಅಪಾರ ಪ್ರೀತಿ . ಅವರೇ ನಮ್ಮ ಭವಿಷ್ಯದ ಕುಡಿಗಳು . ಅವರನ್ನು ನಾವು ಪ್ರೀತಿಸ ಬೇಕು. ನಮ್ಮ ಪ್ರೀತಿ ವಿಶ್ವಾಸಗಳೇ ಅವರನ್ನು ಒಳ್ಳೆಯ ಪ್ರಜೆಗಳನ್ನಾಗಿ ರೂಪಿಸುತ್ತವೆ ಎಂದು ಅವರು ನಂಬಿದ್ದರು. ಅದಕ್ಕಾಗಿಯೇ ತಮ್ಮ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವಂತೆ ಅವರು ವಿನಂತಿಸಿಕೊಂಡರು . ಅಂತೆಯೇ ನೆಹರು ಅವರ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಪ್ರತೀ ವರ್ಷ ಆಚರಿಸಿ ಕೊಂಡು ಬರಲಾಗುತ್ತಿದೆ .

ಈ ವರ್ಷ ಗಾಂಧಿ ಸ್ಮಾರಕ ನಿಧಿ ಮಕ್ಕಳ ದಿನಾಚರಣೆಗಾಗಿ ಶೇಷಾದ್ರಿ ಪುರಂ ಶಾಲೆ , ಭಾರತ ಸೇವಾದಳದ ಶಾಲೆ ಮತ್ತು ಮಲ್ಲೇಶ್ವರದ ಭಾರತ್ ಶಿಕ್ಷಣ ಸಂಸ್ಥೆಯ ಶಾಲೆಯ ಮಕ್ಕಳನ್ನು ಗಾಂಧಿ ಭವನಕ್ಕೆ ಕರೆಸಿ ಅವರಿಗೆ ಗಾಂಧಿ , ನೆಹರು , ಭಗತ್ ಸಿಂಗ್ , ರಾಣಿ ಚನ್ನಮ್ಮ , ಒನಕೆ ಓಬವ್ವ , ಮದರ್ ಥೆರೆಸಾ , ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ,ಸ್ವಾಮಿ ವಿವೇಕಾನಂದ , ಇಂದಿರಾಗಾಂಧಿ ,ಅಂಬೇಡ್ಕರ್ ಇತ್ಯಾದಿ ದೇಶಭಕ್ತರ ವೇಷ ಭೂಷಣ ಸ್ಪರ್ಧೆಯನ್ನು ಏರ್ಪಡಿಸಿತ್ತು . ಮಕ್ಕಳು ತಮಗೆ ಇಷ್ಟವಾದ ದೇಶಭಕ್ತರ ವೇಷ ಧರಿಸಿ ಬಂದು ವೇದಿಕೆಯೇರಿ ತಮ್ಮ ಪ್ರತಿಭೆ ಪ್ರದರ್ಶನ ಮಾಡಿದರು . ಈ ಸ್ಪರ್ಧೆಯ ನಂತರ ಇವೇ ದೇಶಭಕ್ತರ ಬಗ್ಗೆ ಆಶು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು . ಈ ದೇಶ ಭಕ್ತರ ಬಗ್ಗೆ ಮಕ್ಕಳು ತಮ್ಮ ಗ್ರಹಿಕೆಯನ್ನು ಸೊಗಸಾಗಿ ವ್ಯಕ್ತ ಪಡಿಸಿದರು . ವೇದಿಕೆಯೇರಿ ಮಾತಾಡುವ ಮತ್ತು ಮಕ್ಕಳಲ್ಲಿ ಸಭಾ ಕಂಪನವನ್ನು ಕಡಿಮೆ ಮಾಡುವುದು ನಮ್ಮ ಉದ್ದೇಶವಾಗಿತ್ತು . ಬಹುತೇಕ ಮಕ್ಕಳು ಸುಲಲಿತವಾಗಿ ಮಾತಾಡಿ ತಮ್ಮ ಮಾತಿನ ಪ್ರತಿಭೆಯನ್ನು ಪ್ರದರ್ಶಿಸಿದರು .



ಭಾರತದ ಪ್ರಥಮ ಪ್ರಧಾನಮಂತ್ರಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಪಂಡಿತ್ ಜವಾಹರ ಲಾಲ್ ನೆಹರು ಅವರ ಜನ್ಮದಿನದ ಅಂಗವಾಗಿ ನವಂಬರ್ 14 ರಂದು ಗಾಂಧಿ ಭವನದಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಯಿತು. ಶಾಲೆಯ ಮಕ್ಕಳಿಗೆ ವೇಷಭೂಷಣ ಸ್ಪರ್ಧೆ ಮತ್ತು ಆಶುಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು . ಚಾಮರಾಜಪೇಟೆ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ . ಪ್ರತಿಮಾ , ಭಾರತ ಸೇವಾದಳದ ದಳಪತಿ ಕಾಶಿನಾಥ್ , ವಾರ್ತಾ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕರಾದ ಎ .ಆರ್ ಪ್ರಕಾಶ್ ಅತಿಥಿಗಳಾಗಿ ಆಗಮಿಸಿದ್ದರು .








ಗ್ರಂಥಾಲಯದ ಪಿತಾಮಹ ರಂಗನಾಥ್ ಅವರ ಸ್ಮರಣೆಯಲ್ಲಿ ಗಾಂಧಿಭವನದಲ್ಲಿ ಗ್ರಂಥಾಲಯ ಸಪ್ತಾಹ ಆಚರಿಸಲಾಯಿತು.

ಪೆರಿಯಾರ್: ರಚ್ಚೆ ಹಿಡಿದ ಮಗು



–ಅಗ್ರಹಾರ ಕೃಷ್ಣಮೂರ್ತಿ

ತಮಿಳುಕುಲ ಪೆರಿಯಾರ್ ಅವರನ್ನು 'ತಂದೈ ಪರಿಯಾರ್' ಎಂದು ಕರೆಯುತ್ತದೆ. ಅವರ ಮಾದರಿಯ ವಿಚಾರವಾದವನ್ನು ಒಪ್ಪುವ ಹಾಗೂ ಅವರ ಅಭಿಮಾನಿಗಳ ಕಣ್ಣಲ್ಲಿ ಅವರೊಬ್ಬ ಪ್ರವಾದಿ. ನಾಸ್ತಿಕಾವಧೂತ, ತಮ್ಮ ಬಿಡುಗಡೆಯ ಹರಿಕಾರ, ಇಡೀ ತಮಿಳುನಾಡಿನ ವೈದಿಕೇತರ ಜನಸಮುದಾಯ ಒಂದಲ್ಲ ಒಂದು ರೀತಿಯಲ್ಲಿ ಈ ಪ್ರವಾದಿಯ ಪ್ರಭಾವಕ್ಕೆ ಒಳಗಾಗಿರುವುದು ಸತ್ಯ. ದೈವ, ಧರ್ಮ, ಆಚಾರವಿಚಾರಗಳನ್ನು ಅಲ್ಪಸ್ವಲ್ಪ ಮಟ್ಟಿಗೆ ಅಪ್ಪಿಕೊಂಡಿರುವಂತವರೂ ಈ ಪ್ರವಾದಿ ಬೋಧಿಸಿದ ಇತರ ಸಾಮಾಜಿಕ ಸುಧಾರಣೆಗಳನ್ನು ನಂಬಿ ಪಾಲಿಸುತ್ತಾರೆ.

ತಮಿಳುನಾಡಿನ ಜೀವನಾಡಿಯನ್ನು ಚೆನ್ನಾಗಿ ಬಲ್ಲವರಾಗಿದ್ದ ಜನಪ್ರಿಯ ನಾಯಕ ಅಣ್ಣಾದೊರೈ– ಅವರನ್ನು ತಮಿಳರ್ ಅರಿಜ್ಞರ್ ಅಣ್ಣಾ (ಜ್ಞಾನಿ ಅಣ್ಣಾ) ಎನ್ನುತ್ತಾರೆ. ಪೆರಿಯಾರ್ ಬಗ್ಗೆ ಹೀಗೆ ಹೇಳುತ್ತಾರೆ. "ಇತರ ದೇಶಗಳ ಕ್ರಾಂತಿಕಾರಿಗಳು, ಸಮಾಜ ಸುಧಾರಕರು ಶತಮಾನಗಳನ್ನು ಸವೆಸಿ ಪಡೆದಂಥ ಯಶಸ್ಸನ್ನು ಪೆರಿಯಾರ್ ಕೇವಲ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಸಾಧಿಸಿದರು. ನೂರಿನ್ನೂರು ವರ್ಷಗಳ ಸಾಧನೆಯನ್ನು ಕೇವಲ ಇಪ್ಪತ್ತು ಮೂವತ್ತು ವರ್ಷಗಳಿಗೆ ಸಂಕುಚನಗೊಳಿಸಿ ಅದರ ಎಲ್ಲ ಫಲಗಳನ್ನು ನಮ್ಮ ಸಮಾಜಕ್ಕೆ ಧಾರೆಯೆರೆದಿದ್ದಾರೆ. ತಮ್ಮೆಲ್ಲ ಸಮಯ ಮತ್ತು ಶಕ್ತಿಯನ್ನು ಜನಸಾಮಾನ್ಯರಲ್ಲಿ ಆತ್ಮಗೌರವವನ್ನು ಮೂಡಿಸಲು ಹಾಗೂ ಸಾಮಾಜಿಕ ಅನಿಷ್ಟಗಳನ್ನು ತೊಡೆಯಲು ಉಗ್ರವಾಗಿ ಹೋರಾಡುವುದಕ್ಕಾಗಿ ಮುಡುಪಾಗಿಟ್ಟರು... ಅವರ ಪ್ರಭಾವ ನಮ್ಮ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಆಳವಾಗಿ ಬೇರೂರಿರುವುದರಿಂದ ನಾವು ನೆಮ್ಮದಿಯಿಂದಿರಬಹುದು". ಇಂಥ ನೆಮ್ಮದಿಯನ್ನು, ಭರವಸೆಯನ್ನು ಮೂಡಿಸಿದ ಪೆರಿಯಾರರನ್ನು ಕಂಡರೆ, ಇದೇ ಸಮಾಜದ ಮತ್ತೊಂದು ವರ್ಗಕ್ಕೆ ಎಲ್ಲಿಲ್ಲದ ಭಯ ಮತ್ತು ನಮ್ಮ ಪಾಡಿಗೆ ನಾವಿದ್ದುಬಿಡೋಣ ಎನ್ನುವ ಭಾವನೆ. ಆ ವರ್ಗವೆ ಬ್ರಾಹ್ಮಣ ಸಮುದಾಯ, ಬ್ರಾಹ್ಮಣರಿಗೆ ಪೆರಿಯಾರ್ ಓರ್ವ ರಾಕ್ಷಸ, ಉಗ್ರ ಬ್ರಾಹ್ಮಣ ವಿರೋಧಿ, ಬ್ರಾಹ್ಮಣೇತರರನ್ನು ಒಟ್ಟು ಮಾಡಿ ಬ್ರಾಹ್ಮಣರ ವಿರುದ್ಧ ಹಲ್ಲೆಗಿಳಿಯುವ ಗೂಂಡಾ ಎಂದು ಒಳಗೊಳಗೆ ಜರಿಯತೊಡಗಿದರು. ಬಹಿರಂಗವಾಗಿ ದೊಡ್ಡ ದನಿಯೆತ್ತಲಾರದೆ ತಮ್ಮ ಸಣ್ಣ ಪುಟ್ಟ ಪ್ರತಿಭಟನೆಗಳಲ್ಲಿ ಸಮಾಧಾನ ಕಂಡುಕೊಳ್ಳತೊಡಗಿದರು. ಇವರ ಪ್ರತಿಭಟನೆಯನ್ನು ಪೆರಿಯಾರ್ ತಮ್ಮ ಅಂತಿಮ ದಿನಗಳವರೆಗೆ ಎದುರಿಸುತ್ತಲೇ ಇದ್ದರು.

ಪೆರಿಯಾರ್ ಹುಟ್ಟುಹಾಕಿದ ಸ್ವಮರ್ಯಾದಾ ಚಳವಳಿ ಉಗ್ರಸ್ವರೂಪ ತಳೆದದ್ದು ನಿಜ. ಅದಕ್ಕೆ ಪೆರಿಯಾರರೇ ಎಷ್ಟರಮಟ್ಟಿಗೆ ಕಾರಣವೋ ಅಷ್ಟೆ ಸಾವಿರಾರು ವರ್ಷಗಳ ವರ್ಣಾಶ್ರಮ ವ್ಯವಸ್ಥೆಯೂ ಕಾರಣವೆಂದು ಹೇಳಬೇಕು. ಈ ವರ್ಣಾಶ್ರಮ ಧರ್ಮ, ಜಾತಿ ವ್ಯವಸ್ಥೆಯೆಂಬ ಶೋಷಣೆಯ ಅಶ್ವಕ್ಕೆ ಪೆರಿಯಾರೆಂಬ ಕಡಿವಾಣದ ಅಗತ್ಯ ತಮಿಳುನಾಡಿಗಂತೂ ಜರೂರಾಗಿ ಬೇಕಾಗಿತ್ತು. ಸುಧಾರಣೆಯ ಚಳವಳಿಗಳು ದೀರ್ಘಾವಧಿಯ ಕಾಲ ತೆಗೆದುಕೊಳ್ಳುತ್ತವೆ. ಅಣ್ಣಾದೊರೈಯವರ ಮಾತುಗಳನ್ನು ಗಮನಿಸಿದಾಗ ಪೆರಿಯಾರ್ ತೆಗೆದುಕೊಂಡ ಅಲ್ಪಾವಧಿಯ ಕಾಲಘಟ್ಟದಲ್ಲಿ ಹಲವು ಏರುಪೇರುಗಳು, ಹಿಂಸೆ, ಪ್ರತಿಭಟನೆಗಳು ಉಗ್ರ ಸ್ವರೂಪ ಪಡೆದುಬಿಟ್ಟಿವೆ. ಬ್ರಾಹ್ಮಣರ ವಿರುದ್ಧ ಹಿಂಸೆಗೆ ಪ್ರಚೋದಿಸಿದರೆಂಬ ಆಪಾದನೆಯ ಮೇಲೆ ಪೆರಿಯಾರ್ ಅವರಿಗೆ ಆರು ತಿಂಗಳ ಜೈಲುಶಿಕ್ಷೆಯಾಯಿತು. ಆ ಸಂದರ್ಭದಲ್ಲಿ 1958ರ ಜನವರಿ ತಿಂಗಳಲ್ಲಿ ರಾಮಮನೋಹರ ಲೋಹಿಯಾ ಅವರು ಮದರಾಸಿಗೆ ಬಂದು ಪೆರಿಯಾರರನ್ನು ಭೆಟ್ಟಿಯಾಗುತ್ತಾರೆ. ಆಗ ಪೆರಿಯಾರರಿಗೆ ಎಂಭತ್ತರ ಗಡಿಮುಟ್ಟುವ ವಯಸ್ಸು. "ನಿಮ್ಮ ವಯಸ್ಸಿನ ವ್ಯಕ್ತಿ ಜೈಲಿನಲ್ಲಿರಕೂಡದು" ಎನ್ನುತ್ತಾರೆ ಲೋಹಿಯಾ, "ನಾನು ಹಿಂಸೆಯನ್ನು ಪ್ರಚೋದಿಸುವ ವ್ಯಕ್ತಿಯಲ್ಲ. ಶಾಂತರೀತಿಯಲ್ಲಿ ಬ್ರಾಹ್ಮಣತ್ವವನ್ನು ನಿರ್ಮೂಲನಗೊಳಿಸದಿದ್ದಲ್ಲಿ ಜನ ಹಿಂಸೆಗಿಳಿದರೆ ಆಶ್ಚರ್ಯ ಪಡಬೇಕಿಲ್ಲವೆಂಬ ಮಾತನ್ನಷ್ಟೆ ನಾನು ಹೇಳಿದ್ದು..." ಎನ್ನುತ್ತಾರೆ ಪೆರಿಯಾರ್.

ಈ ಸಂದರ್ಭದಲ್ಲಿ ಪೆರಿಯಾರ್ ಕೈಗೊಂಡಿರುವ ಜಾತಿಪದ್ಧತಿಯ ನಿರ್ಮೂಲನ ಆಂದೋಲನವನ್ನು ಮೆಚ್ಚುವ ಲೋಹಿಯಾ ಇದು ವ್ಯಕ್ತಿಗತವಾಗಿ ಬ್ರಾಹ್ಮಣರ ವಿರುದ್ಧ ಇರಬಾರದೆಂದು ತಿಳಿಸುತ್ತಾರೆ. ಪೆರಿಯಾರ್, ಇದು ಮದ್ರಾಸಿನ ಬ್ರಾಹ್ಮಣರ ಕೈಯಲ್ಲಿರುವ ಪತ್ರಿಕೋದ್ಯಮ ತನ್ನ ಮೇಲೆ ಮಾಡುತ್ತಿರುವ ತೇಜೋವಧೆ ಎಂಬುದನ್ನು ಲೋಹಿಯಾರಿಗೆ ಮನವರಿಕೆ ಮಾಡಿಕೊಡುತ್ತಾರೆ. ಇದೇ ಸಂದರ್ಭದಲ್ಲಿ ಲೋಹಿಯಾ ಪೆರಿಯಾರರ ಗಾಂಧಿ ವಿರೋಧಿ ನಿಲುವು, ಹಿಂದಿ ವಿರೋಧಿ ನಿಲುವು, ಪ್ರತ್ಯೇಕ ದ್ರಾವಿಡ ಸ್ಥಾನದ ಬೇಡಿಕೆಗಳನ್ನು ಕುರಿತು ಚರ್ಚಿಸುತ್ತಾರೆ. ಅದಕ್ಕೆ ಪೆರಿಯಾರ್, "ಇವ್ಯಾವವೂ ಮಹತ್ವದವಲ್ಲ. ಮುಖ್ಯವಾಗಿ ನಮ್ಮ ಹೋರಾಟ ಜಾತಿ ಪದ್ಧತಿಯ ವಿರುದ್ಧ ಮಾತ್ರ. ಬ್ರಾಹ್ಮಣರ ವಿರುದ್ಧ ವ್ಯಕ್ತಿಗತ ಹಿಂಸೆಯನ್ನು ಎಂದೂ ಪ್ರಚೋದಿಸುವುದಿಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ. ನಮ್ಮ ಪಕ್ಷದ ಮುಖವಾಣಿ 'ವಿಡುದಲೈ, ಪತ್ರಿಕೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಎಂದೂ ಹಿಂಸೆಯ ಪ್ರಸ್ತಾಪ ಮಾಡಿಲ್ಲ" ಎಂದು ಲೋಹಿಯಾರಿಗೆ ತಿಳಿಸುತ್ತಾರೆ.

ಪೆರಿಯಾರರ ಕ್ರಿಯಾಶಕ್ತಿಯನ್ನು ಬಹುವಾಗಿ ಮೆಚ್ಚುವ ಲೋಹಿಯಾ, ಆಗಿನ ಪ್ರಧಾನಮಂತ್ರಿ ನೆಹರೂ, ದ್ರಾವಿಡ ಕಳಗಂ ಪಕ್ಷದ ಚಟುವಟಿಕೆಗಳನ್ನು ಖಂಡಿಸಲು ಬಳಸಿದ ಭಾಷಾವೈಖರಿಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಜಾತಿ ನಿರ್ಮೂಲನಾ ಆಂದೋಲನದಲ್ಲಿ ಪೆರಿಯಾರರ ಜೊತೆಗೆ ಹೆಗಲೆಣೆಯಾಗಿ ನಿಲ್ಲುವುದಾಗಿ ತಿಳಿಸುವ ಲೋಹಿಯಾ, ಪೆರಿಯಾರರ ಪ್ರತ್ಯೇಕ ರಾಷ್ಟ್ರದ ಬೇಡಿಕೆಯ ಬಗ್ಗೆ, ಪೆರಿಯಾರರು ಗಾಂಧಿ ಭಾವಚಿತ್ರಗಳನ್ನು ಸುಡುತ್ತಿದ್ದುದರ ಬಗ್ಗೆ ತಮ್ಮ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಅದೊಂದು ಚರಿತ್ರಾರ್ಹವಾದ ಭೇಟಿ.

ಪೆರಿಯಾರ್ ಗಾಂಧೀಜಿಗಿಂತ ಹತ್ತು ವರ್ಷ ಕಿರಿಯರು, ನೆಹರೂಗಿಂತ ಹತ್ತುವರ್ಷ ಹಿರಿಯರು, ತೊಂಬತ್ತು ವರ್ಷಗಳ ದೀರ್ಘಾವಧಿಯವರೆಗೆ ಅವರು ಬದುಕಿದರು. ಅವರು ತೀರಿಕೊಂಡದ್ದು 1973ರಲ್ಲಿ. ಅದೇ ವರ್ಷ ಅವರು ಬೆಂಗಳೂರಿನ ಸಭೆಯೊಂದಕ್ಕೆ ಆಹ್ವಾನಿತರಾಗಿದ್ದರು. 'ಕರ್ನಾಟಕ ವಿಚಾರವಾದಿಗಳ ಸಂಘ' ಅವರನ್ನು ಕರೆಸಿತ್ತು. ಪ್ರೊ ಧರ್ಮಲಿಂಗಂ, ಪ್ರೊ.ಎಂ.ಡಿ.ನಂಜುಂಡಸ್ವಾಮಿ , ವೇಮಣ್ಣ – ಮುಂತಾದವರು ಪುರಭವನದಲ್ಲಿ ಸಭೆ ಏರ್ಪಡಿಸಿದ್ದರು. ಆ ವೇಳೆಗಾಗಲೆ 'ವಿಚಾರವಾದಿ ಗೆಳೆಯರ ಬಳಗ'ವೆಂಬ ಒಂದು ಮರಿ ಸಂಘವನ್ನು ನಾವೆಲ್ಲ ಸೇರಿ ಹುಟ್ಟು ಹಾಕಿದ್ದೆವು. ಸಿದ್ದಲಿಂಗಯ್ಯ ದಲಿತ ಕವಿಯಾಗಿ ರೂಪುಗೊಳ್ಳುತ್ತಿದ್ದರು. ನಮ್ಮ ಜೊತೆಗೆ ಗೆಳೆಯ ಡಿ.ಆರ್. ನಾಗರಾಜ್ ಇದ್ದ. ನಾವೆಲ್ಲ ಈ ಸಭೆಗೆ ಮರಿ ಸ್ವಯಂಸೇವಕರು. ಆ ವೇಳೆಗೆ ಪೆರಿಯಾರ್ ಮೂತ್ರಪಿಂಡದ ತೊಂದರೆಯಿಂದ ಜೀರ್ಣರಾಗಿದ್ದರು. ಮೂತ್ರಪಿಂಡಕ್ಕೆ ಜೋಡಿಸಲಾಗಿದ್ದ ನಳಿಕೆಗಳನ್ನು ಹಿಡಿದಿದ್ದ ಸಹಾಯಕರೊಬ್ಬರ ಜೊತೆಯಲ್ಲಿ ವೇದಿಕೆಗೆ ಆಗಮಿಸಿದರು. ಅಲ್ಲಿ ಯಥಾಪ್ರಕಾರ ವಿರೋಧಿಗಳ ಗುಂಪು ಗದ್ದಲವೆಬ್ಬಿಸಿತು. ಕನ್ನಡಾಭಿಮಾನಿಗಳು ವಿಚಾರವಾದ ಹೇಳಲು ತಮಿಳಿನವರು ಯಾಕೆ ಬೇಕು ಎಂಬ ವಾದವನ್ನು ಮುಂದೊಡ್ಡಿ ಅಡ್ಡಿ ಪಡಿಸಲೆತ್ನಿಸಿದರು. ಅವರನ್ನು ಹೊರದಬ್ಬಿದ ಮೇಲೆ ಕನ್ನಡದ ಪ್ರಖ್ಯಾತ ಲೇಖಕ ಪಿ. ಲಂಕೇಶ್ ಅಂದು ಒಂದು ಮಹತ್ತರ ಸ್ವಾಗತ ಭಾಷಣ ಮಾಡಿದ್ದರು. ಅಲ್ಲಿ ಪೆರಿಯಾರರ ಭಾಷಣದ ನಡುನಡುವೆ ನಡೆದ ಅಡೆತಡೆಗಳು, ನನಗೂ ದಲಿತ ಕವಿ ಸಿದ್ದಲಿಂಗಯ್ಯನವರಿಗೂ ಗೂಸಾಗಳು ಬಿದ್ದದ್ದು ಇವನ್ನೆಲ್ಲ ಕುರಿತು ಮತ್ತೊಮ್ಮೆ ಯಾವಾಗಲಾದರೂ ಬರೆಯಬೇಕು. ಸಿದ್ದಲಿಂಗಯ್ಯ ತಮ್ಮ ಆತ್ಮಕಥೆ 'ಊರುಕೇರಿ'ಯಲ್ಲಿ ಸೂಕ್ಷ್ಮವಾಗಿ ಇದನ್ನು ದಾಖಲಿಸಿದ್ದಾರೆ.

ಪೆರಿಯಾರ್, ಬ್ರಿಟಿಷರು ಕೆಲವೇ ಬ್ರಾಹ್ಮಣರ ಕೈಗೆ ಅಧಿಕಾರವನ್ನು ಹಸ್ತಾಂತರ ಮಾಡಿ ಸ್ವಾತಂತ್ರ್ಯ ಎಂಬುದಾಗಿ



ಘೋಷಿಸುತ್ತಾರೆಂದು ಅದನ್ನು ವಿರೋಧಿಸಿದರು. ವರ್ಣಾಶ್ರಮ ವ್ಯವಸ್ಥೆ, ಜಾತಿ ಪದ್ಧತಿ ನಿರಾಕರಿಸಿದರು. ಸಂವಿಧಾನವನ್ನು ನಿರಾಕರಿಸಿದರು. ಸಾಂಪ್ರದಾಯಕವಾದ ಎಲ್ಲ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿದರು. ನೋಬಲ್ ಪುರಸ್ಕೃತ ವಿ.ಎಸ್. ನೈಪಾಲ್ ಅವರ ಭಾಷೆಯಲ್ಲಿ ಅವರೊಬ್ಬ ಗಾಂಧಿ ವಿರೋಧಿ. ಹಿಂದೂ ವಿರೋಧಿ, ದೈವ ವಿರೋಧಿ. ವಿಮರ್ಶಕ ಡಿ.ಆರ್. ನಾಗರಾಜ್ ಪೆರಿಯಾರ್ ಅವರನ್ನು ಸರ್ವನಿರಾಕರಣ ವಾದವನ್ನು ಬೋಧಿಸಿದ ಋಷಿಯೆಂದು ಕರೆಯುತ್ತಾರೆ.

ಪೆರಿಯಾರರ ಪೂರ್ವಾಶ್ರಮ ಅಚ್ಚರಿಯನ್ನುಂಟು ಮಾಡುವ ವಿವರಗಳನ್ನು ನೀಡುತ್ತದೆ. ವಿದ್ಯಾಭ್ಯಾಸದಲ್ಲಿ ಅಷ್ಟೇನು ಚುರುಕಿನವರಾಗಿರಲಿಲ್ಲವಾದರೂ ವ್ಯವಹಾರ ಕುಶಲತೆಯಲ್ಲಿ ಯಶಸ್ಸು ಪಡೆದ ವ್ಯಕ್ತಿ. ಜೀವನೋಪಾಯಕ್ಕಾಗಿ ತಂದೆ ಕಲ್ಲು ನುಣುಪುಗೊಳಿಸುವ ಕೆಲಸ ಮಾಡುತ್ತಿದ್ದರು.

ಸಣ್ಣಪುಟ್ಟ ವ್ಯಾಪಾರ ಮಾಡುತ್ತ ಬೆಳೆಯುತ್ತಿದ್ದಂತೆ ಮಗ ರಾಮಸ್ವಾಮಿ ನಾಯ್ಕರ್ ತಮ್ಮ ವ್ಯಾಪಾರ ವೃತ್ತಿಗೆ ಒಳ್ಳೆಯ ಸಹಾಯಕನಾದ. ಅಪ್ಪ 1911ರಲ್ಲಿ ತೀರಿಕೊಳ್ಳುವ ವೇಳೆಗೆ ರಾಮಸ್ವಾಮಿ ಒಬ್ಬ ಸಮರ್ಥ ನಾಯಕನಾಗಿ ಈರೋಡಿನಲ್ಲಿ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಅನೇಕ ಜವಾಬ್ದಾರಿ ಸ್ಥಾನಗಳು ಇವರ ಹೆಗಲಿಗೆ ಬಿದ್ದವು. 1920ರ ವೇಳೆಗೆ ಸುಮಾರು 29 ಮುಖ್ಯ ಸಾರ್ವಜನಿಕ ಹುದ್ದೆಗಳನ್ನು ಇವರು ನಿರ್ವಹಿಸುತ್ತಿದ್ದರು. ಈರೋಡಿನ ದೇವಾಲಯದ ಕೆಲಸವೂ ಈ ವ್ಯಕ್ತಿಯ ಮೇಲೇ ಹೊರಿಸಿದರು. ಅವರು ಹನ್ನೆರಡು ವರ್ಷಗಳ ಕಾಲ ಗೌರವ ಮ್ಯಾಜಿಸ್ಟ್ರೇಟ್ ಆಗಿದ್ದರು. ಕೆಲವು ವರ್ಷಗಳ ಕಾಲ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರಾಗಿದ್ದು 1919ರಲ್ಲಿ ಈರೋಡಿನ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿದ್ದರು. ಸರ್ಕಾರಿ ಕೆಲಸಗಾರರ ಅಸಮರ್ಥತೆ, ಅಶ್ರದ್ಧೆ, ಲಂಚಗುಳಿತನದ ಬಗ್ಗೆ ಕೆಂಡ ಕಾರುತ್ತ ಕೆಲಸ ಮಾಡಿಸುತ್ತಿದ್ದರು. ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಈರೋಡಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಾಯಂ ಆಗಿ ರೂಪುಗೊಂಡಿತು. ಈರೋಡಿನ ರಸ್ತೆಬದಿಗಳನ್ನು ಅನಧಿಕೃತವಾಗಿ ಆಕ್ರಮಿಸಿ ಕೊಂಡಿದ್ದ ಅಂಗಡಿಗಳ ಮಾಲೀಕರನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿದರು. ಸ್ವತಃ ವ್ಯಾಪಾರಿಯಾಗಿದ್ದ

ರಾಮಸ್ವಾಮಿಯವರ ಇಂಥ ಕೆಲಸವನ್ನು ಇತರ ವ್ಯಾಪಾರಿಗಳು ವಿರೋಧಿಸಲಾಗದಷ್ಟು ನೈತಿಕ ಸ್ಥೈರ್ಯವನ್ನು ಗಳಿಸಿಕೊಂಡಿದ್ದರು. ದೇವಾಲಯಗಳ ಆಡಳಿತ ವ್ಯವಸ್ಥೆಯಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಇಡಬೇಕೆಂದು, ಪ್ರತಿಯೊಂದು ಖರ್ಚಿನ ಲೆಕ್ಕವನ್ನೂ ದಾಖಲೆ ಮಾಡಬೇಕೆಂದು ಒತ್ತಾಯಿಸಿದರು. ಮುನ್ಸಿಪಲ್ ಅಧ್ಯಕ್ಷರಾಗಿ ಕೆಲವೇ ತಿಂಗಳುಗಳಲ್ಲಿ ಈರೋಡಿನ ಚರಂಡಿ ವ್ಯವಸ್ಥೆ ಎಷ್ಟು ಅಚ್ಚುಕಟ್ಟಾಯಿತೆಂದರೆ, ಆಗ್ಗೆ ಸೇಲಂ ಪ್ರಾಂತ್ಯದಲ್ಲಿ ಮುನ್ಸಿಪಲ್ ಕೌನ್ಸಿಲ್ಲಿನ ಅಧ್ಯಕ್ಷರಾಗಿದ್ದ ಸಿ ರಾಜ ಗೋಪಾಲಾಚಾರಿಯವರು ಈ ಕೆಲಸದಲ್ಲಿ ಪರಿಣಿತರಾದ ಕೆಲವು ಸ್ಯಾನಿಟರಿ ಇನ್ಸ್ಪೆಕ್ಟರ್‌ಗಳನ್ನು ತಮ್ಮ ಪ್ರಾಂತ್ಯಕ್ಕೆ ಕಳಿಸಿಕೊಡಿ ಎಂದು ಕೇಳುವಂತಾಯಿತು.

ಸಾರ್ವಜನಿಕ ಬದುಕಿಗೆ ಅವರು ತಮ್ಮನ್ನು ತಾವು ತೀವ್ರವಾಗಿ ತೊಡಗಿಸಿಕೊಂಡರು. ಆ ವೇಳೆಗೆ ತಮ್ಮ ಕುಟುಂಬವು ಆರ್ಥಿಕವಾಗಿ ಉನ್ನತಿಗೇರಿದ್ದುದರಿಂದ ತಮ್ಮೆಲ್ಲ ಸಂಪತ್ತನ್ನು ಸಾರ್ವಜನಿಕ ಸೇವೆಗೆ ಮುಡುಪಿಡಲು ತಮ್ಮ ತಂದೆಯವರ ಹೆಸರಿನಲ್ಲಿ ಧಾರ್ಮಿಕ ದತ್ತಿಗಳನ್ನು ಸ್ಥಾಪಿಸಿದರು. ಸೋದರ ಸೋದರಿಯರನ್ನು ಈ ಕಾರ್ಯಕ್ಕಾಗಿ ಮನವೊಲಿಸಿದರು. ಯಾವುದೇ ಭೋಜನಕೂಟವೆಂದರೆ ಮದ್ಯ ಅನಿವಾರ್ಯವೆಂದು ನಂಬಿದ್ದ ಹಲವಾರು ಗೆಳೆಯರ ನಡುವೆಯಿದ್ದರೂ ಪೆರಿಯಾರ್ ತಮ್ಮ ಜೀವನ ಪರ್ಯಂತ ಮದ್ಯಸೇವನೆಯಿಂದ ದೂರವಿದ್ದರು.

ಪೆರಿಯಾರ್ 1919ರಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು. ಜಲಿಯನ್ ವಾಲಾಬಾಗ್‌ನಲ್ಲಿ 'ಜನರಲ್ ಡೈರ್ ನಡೆಸಿದ ಹತ್ಯಾಕಾಂಡದ ನಂತರ ತಮ್ಮನ್ನು ತಾವು ಸಕ್ರಿಯವಾಗಿ ಕಾಂಗ್ರೆಸ್ ಪಕ್ಷದ ಕೆಲಸದಲ್ಲಿ ತೊಡಗಿಸಿಕೊಂಡರು. ಸಾಮಾಜಿಕ ಅನಿಷ್ಟಗಳಾದ ಅಸ್ಪೃಶ್ಯತೆ ಮತ್ತು ಶೇಂದಿ ಕುಡಿತದ ಬಗ್ಗೆ ತೀವ್ರವಾಗಿ ತಮ್ಮ ವಿರೋಧ ವ್ಯಕ್ತಪಡಿಸುತ್ತ ಆಂದೋಲನ ಪ್ರಾರಂಭಿಸಿದರು. ಪೆರಿಯಾರ್ ಅವರ ಶಕ್ತಿ ಸಾಮರ್ಥ್ಯಗಳ ಅರಿವು ಎಲ್ಲರಿಗಿಂತ ಮೊದಲು ಬ್ರಿಟಿಷರಿಗೆ ಗೊತ್ತಾಯಿತು. ಅವರಿಗೊಂದು 'ರಾವ್ ಬಹದ್ದೂರ್' ಪದವಿ ಕೊಟ್ಟು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಯತ್ನವನ್ನು ಪೆರಿಯಾರ್ ನಯವಾಗಿ ತಳ್ಳಿ ಹಾಕಿ ತಮ್ಮ ಗುರಿಯತ್ತ ದೃಢವಾದ ಹೆಜ್ಜೆಯಿಡತೊಡಗಿದರು.

ಗಾಂಧೀಜಿಯವರ ತತ್ತ್ವಗಳನ್ನು ಚಾಚೂ ತಪ್ಪದೆ ಪಾಲಿಸತೊಡಗಿದರು. ಮಿಲ್ಲಿನ ಬಟ್ಟೆ ಬಿಟ್ಟು ಕೈಯಿಂದ ನೂತ ಖಾದಿ ಬಟ್ಟೆ ಧರಿಸತೊಡಗಿದರು. ತಮ್ಮ ಮನೆಮಂದಿಯೂ ಧರಿಸುವಂತೆ ಮನವೊಲಿಸಿದರು. ತಮಿಳುನಾಡಿನಾದ್ಯಂತ ಖಾದಿ ಪ್ರಚಾರದಲ್ಲಿ ತೊಡಗಿದರು. ತಮ್ಮ ಜೊತೆಗೇ ಚರಕವನ್ನು ಹೊತ್ತುಕೊಂಡು ಹೋಗಿ ಪ್ರಚಾರ ಭಾಷಣಗಳಲ್ಲಿ ತೊಡಗಿದರು.

ಗಾಂಧೀಜಿ 1920ರಲ್ಲಿ ಅಸಹಕಾರ ಚಳವಳಿ ಆರಂಭಿಸಿದರು. ಕಾಂಗ್ರೆಸ್ ಕಾರ್ಯಕರ್ತರಿಗೆ ಕಾನೂನು ಕಟ್ಟಳೆಗಳಿಗಾಗಿ ಕೋರ್ಟು ಕಚೇರಿಗಳಿಗೆ ಹೋಗಬಾರದೆಂದು ಗಾಂಧೀಜಿ ತಾಕೀತು ಮಾಡಿದ್ದರು. ಪೆರಿಯಾರ್ ತಮ್ಮ ಕುಟುಂಬದಲ್ಲಿದ್ದ ಅನೇಕ ಪ್ರಾಮಿಸರಿ ನೋಟುಗಳನ್ನು, ಅಡಮಾನ ಪತ್ರಗಳನ್ನು ನಾಶ ಗೊಳಿಸಿ ಕುಟುಂಬಕ್ಕೆ ಬರಬೇಕಾಗಿದ್ದ ಸಹಸ್ರಾರು ರೂಪಾಯಿಗಳನ್ನು ಕಳೆದುಕೊಂಡರು. ಸೇಲಂನ ವಿಜಯನಾಗಚಾರಿಯೆಂಬುವವರು ಪೆರಿಯಾರ್ ಬಳಿ ಬಂದು ಈ ಎಲ್ಲ ಪತ್ರಗಳನ್ನು ಬೇರೆ ಯಾರ ಹೆಸರಿಗಾದರೂ ವರ್ಗಾವಣೆ ಮಾಡಿರಿ– ಅವರು ಹಣ ಪಡೆದು ನಿಮ್ಮ ಕುಟುಂಬಕ್ಕೆ ಕೊಡುತ್ತಾರೆ ಎಂದು ಸಲಹೆ ನೀಡಲು ಬಂದಾಗ ಪೆರಿಯಾರ್ ಕಾಂಗ್ರೆಸ್ ಸಂಸ್ಥೆಗೆ ನಾನು ದ್ರೋಹ ಮಾಡಲಾರೆ ಎಂದು ನಿರ್ದಾಕ್ಷಿಣ್ಯವಾಗಿ ತಿಳಿಸಿಬಿಡುತ್ತಾರೆ.

ಕುಡಿತದ ವಿರುದ್ಧ 1921ರಲ್ಲಿ ಗಾಂಧೀಜಿ ಕಾರ್ಯಕ್ರಮ ಹಾಕಿಕೊಂಡಾಗ, ತಮ್ಮದೇ ಸ್ವಂತ 500 ತೆಂಗಿನ ಮರಗಳನ್ನು ಕಡಿದು ಉರುಳಿಸಿಬಿಡುತ್ತಾರೆ. ಪೆರಿಯಾರ್, ತಮ್ಮ ಹೆಂಡತಿ ಮತ್ತು ತಂಗಿ, ನಾಗಮ್ಮೈ ಮತ್ತು ಕಣ್ಣಮ್ಮ –ಈ ಕೆಲಸದಲ್ಲಿ ಪೆರಿಯಾರ್ ಅವರಿಗೆ ಹೆಗಲೆಣೆಯಾಗಿ ಕೆಲಸ ಮಾಡುತ್ತಾರೆ. ಕಾಂಗ್ರೆಸ್ ಕೆಲಸವನ್ನು ಪೆರಿಯಾರ್ ಎಷ್ಟರಮಟ್ಟಿಗೆ ಹಚ್ಚಿಕೊಂಡರೆಂದರೆ– ಅವರ ನಾಯಕತ್ವದ ಅಪಾರ ಸಾಮರ್ಥ್ಯ ಕಂಡ ಪಕ್ಷ ಅವರನ್ನು ತಮಿಳುನಾಡು ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ನಿಯುಕ್ತಿ ಮಾಡಿತು. ಅದರ ಮರುವರ್ಷ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1923–24ರ ಈ ನಿರ್ಣಾಯಕ ಗಳಿಗೆಯಲ್ಲಿ ನಿಸ್ವಾರ್ಥ ನಾಯಕ ಪೆರಿಯಾರ್ ಅವರಿಗೆ ಒಂದು ಕಟು ಸತ್ಯ ಗೋಚರವಾಯಿತು– ಅದು ಕಾಂಗ್ರೆಸ್ಸಿನ ಮನೆಯಲ್ಲಿ ಎಲ್ಲವೂ ನೆಟ್ಟಗಿಲ್ಲ ಎಂಬ ಸತ್ಯ. ಮೇಲು ಜಾತಿಯ ಜನರು– ಅದರಲ್ಲೂ ಮುಖ್ಯವಾಗಿ ತಮಿಳುನಾಡು ಕಾಂಗ್ರೆಸ್‌ನಲ್ಲಿ ಜಾತಿ ತಾರತಮ್ಯವನ್ನು ಕಾಯ್ದುಕೊಂಡು ಹೋಗುವುದರಲ್ಲೇ ನಿರತರಾಗಿದ್ದ ಅಂಶ ಗೋಚರಿಸತೊಡಗಿತು. 1919ರಲ್ಲಿ ಪೆರಿಯಾರ್ ಕಾಂಗ್ರೆಸ್ ಸೇರುವಾಗ, ಕಾಂಗ್ರೆಸ್ಸಿನ ಪ್ರತಿಷ್ಠಿತ ವ್ಯಕ್ತಿಗಳ ಸಹಕಾರದೊಡನೆ ಅಸ್ಪೃಶ್ಯತೆಯನ್ನು ತೊಡೆದು ಹಾಕಬಹುದೆಂಬ ಆಸೆಯಿಟ್ಟುಕೊಂಡಿದ್ದರು. ಹಿಂದುಳಿದ ಮತ್ತು ನಿರ್ಗತಿಕ ಜನರ ಶಿಕ್ಷಣ ಮತ್ತು ಉದ್ಯೋಗ ಸ್ಥಿತಿಗತಿಗಳನ್ನು ಉನ್ನತೀಕರಿಸಿ ಸರ್ಕಾರಿ ಕೆಲಸಗಳಲ್ಲಿ ಅವರಿಗೆ ಸಿಗಬೇಕಾದ ಪಾಲನ್ನು ದೊರಕಿಸಿಕೊಡಬಹುದೆಂಬ ಆಸೆಯಿಟ್ಟುಕೊಂಡಿದ್ದರು. ಈ ಎಲ್ಲ ಭರವಸೆಗಳೊಂದಿಗೆ ತಿರುನಲ್ವೇಲಿಯಲ್ಲಿ ನಡೆದ 1920ರ ತಮಿಳುನಾಡು ಕಾಂಗ್ರೆಸ್ ಅಧಿವೇಶನದಲ್ಲಿ ಸರ್ಕಾರವು ಶಿಕ್ಷಣ ಕ್ಷೇತ್ರ ಮತ್ತು ಉದ್ಯೋಗ ವಲಯದಲ್ಲಿ ಜಾತಿ ಆಧಾರಿತ ಪ್ರತಿನಿಧಿತ್ವ ಒಪ್ಪಿಕೊಳ್ಳಬೇಕೆಂಬ ಗೊತ್ತುವಳಿಯನ್ನು ಮಂಡಿಸಬಯಸಿದರು. ಆದರೆ, ವಿಷಯ ಸಮಿತಿ ಒಪ್ಪಿಗೆ ನೀಡಿದರೂ ಅಧಿವೇಶನದ ಅಧ್ಯಕ್ಷರಾಗಿದ್ದ ಎಸ್. ಶ್ರೀನಿವಾಸ ಅಯ್ಯಂಗಾರ್ ಅವರು ಇಂಥ ಗೊತ್ತುವಳಿ ಜಾತಿ ಸಂಘರ್ಷವನ್ನುಂಟುಮಾಡುತ್ತದೆಂಬ ಕಾರಣ ನೀಡಿ ತಳ್ಳಿಹಾಕಿದರು.

ಪೆರಿಯಾರ್ ನಿರಾಶರಾದರೂ ಭರವಸೆ ಕಳೆದುಕೊಳ್ಳದೆ 1921ರಲ್ಲಿ ತಂಜಾವೂರಿನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಈ ಪ್ರಸ್ತಾವವನ್ನು ಮಂಡಿಸಬಯಸಿದರು. ಆಗ ಸಿ ರಾಜಗೋಪಾಲಾಚಾರಿ ಅವರು ಇದನ್ನು ಒಂದು ತತ್ವವನ್ನಾಗಿ ಎಲ್ಲ ಕಾಂಗ್ರೆಸ್ಸಿಗರೂ ಒಪ್ಪುತ್ತಾರಾದರೂ, ಇಂಥ ಗೊತ್ತುವಳಿಯನ್ನು ಮಂಡಿಸಲು ಇನ್ನೂ ಕಾಲ ಪರಿಪಕ್ವವಾಗಿಲ್ಲ ಎಂದು ವಿಫಲಗೊಳಿಸಿಬಿಟ್ಟರು. ಛಲದಿಂದ ಪೆರಿಯಾರ್ ಮತ್ತೆ 1922 ರಲ್ಲಿ ತಿರುಪುರದ ಅಧಿವೇಶನದಲ್ಲಿ ಮಂಡಿಸಿದಾಗ ಅದು ಗಂಭೀರ ಚರ್ಚೆಗೆ ಗ್ರಾಸವಾಯಿತು. ಶಾಸ್ತ್ರ ಪುರಾಣಗಳನ್ನು ಉದ್ಧರಿಸುತ್ತಾ ಚರ್ಚೆಯಲ್ಲೇ ನಿರತರಾದ ಹೃದಯಹೀನ ಉನ್ನತ ಜಾತಿಯ ಜನರನ್ನು ಉದ್ದೇಶಿಸಿ– ಹಿಂದುಳಿದ ಮತ್ತು ನಿಮ್ಮ ಜಾತಿಯ ಜನರಿಗೆ ನ್ಯಾಯವೊದಗಿಸುವ ಮನಸ್ಸುಳ್ಳ ಜನರು ಮುಂದೆ ಬಂದು ಮನುಧರ್ಮಶಾಸ್ತ್ರ ಮತ್ತು ರಾಮಾಯಣವನ್ನು ಸುಡಬೇಕು ಎಂದು ಘರ್ಜಿಸಿದರು. ಆ ಗೊತ್ತುವಳಿ

ಅಂಗೀಕಾರವಾಗಲು ಸೋತಿತು. ಮತ್ತೆ 1923ರಲ್ಲಿ ಸೇಲಂ ಅಧಿವೇಶನದಲ್ಲಿ ಅದೇ ಗೊತ್ತುವಳಿಯನ್ನು ಮಂಡಿಸಿದಾಗ ಎರಡು ಗುಂಪಿನ ಜನರ ನಡುವೆ ತೀವ್ರ ವಿರಸವುಂಟಾಗಿ ಅದನ್ನು ಮತಕ್ಕೆ ಒಡ್ಡಲೇಯಿಲ್ಲ. ಮುಂದೆ ತಿರುವಣ್ಣಾಮಲೈಯಲ್ಲಿ 1924ರಲ್ಲಿ ಅಧಿವೇಶನ ನಡೆದಾಗ ತಮಿಳುನಾಡಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಪೆರಿಯಾರ್ ತಾವು ಪ್ರತಿಪಾದಿಸುತ್ತಿದ್ದ ಸಾಮಾಜಿಕ ನ್ಯಾಯದ ಪ್ರತಿಪಾದನೆಯನ್ನು ತುಂಬಾ ಸಮರ್ಥವಾಗಿ ಮಾಡಿದರು. ನಮ್ಮ ಸಮಾಜದಲ್ಲಿ ಬ್ರಾಹ್ಮಣರು ಮತ್ತು ಅಬ್ರಾಹ್ಮಣರ ನಡುವೆ ಸೌಹಾರ್ದವೇ ಇಲ್ಲದಂತಾಗಿದೆ. ದೇಶಾಭಿಮಾನಿಗಳು ಈ ವಿಷಯವನ್ನು ಗಂಭೀರವಾಗಿ ಅಧ್ಯಯನಮಾಡಿ ಈ ತಪ್ಪನ್ನು ಸರಿಪಡಿಸಬೇಕು ಎಂದು ವಾದಿಸಿದರು. ಇಷ್ಟಾದರೂ ಜಾತಿ ಆಧಾರಿತ ಪ್ರಾತಿನಿಧ್ಯತೆಯ ಗೊತ್ತುವಳಿ ಪಾಸಾಗಲಿಲ್ಲ.

1924ರಲ್ಲಿ ಕೇರಳದಲ್ಲಿ ನಡೆದ ವೈಕ್ಕಂ ಸತ್ಯಾಗ್ರಹಕ್ಕೆ ಪೆರಿಯಾರರ ನಾಯಕತ್ವ ಅನಿವಾರ್ಯವಾಯಿತು. ಅವರು ಅಲ್ಲಿ ದೇವಾಲಯದ ರಸ್ತೆಯನ್ನು ಕೇವಲ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದುದನ್ನು ತೆರವು ಮಾಡಿಸಿ ಮುಕ್ತ ಮಾರ್ಗವನ್ನಾಗಿಸಿದರು. ಅಲ್ಲಿನ ಎಲ್ಲ ನಾಯಕರನ್ನೂ ಬಂಧಿಸಿದ್ದರಿಂದ ಪೆರಿಯಾರ್ ಅಲ್ಲಿ ನಾಯಕತ್ವ ವಹಿಸಿಕೊಳ್ಳಬೇಕಾಯಿತು. ಅಲ್ಲಿನ ಯಶಸ್ಸು ಅವರಿಗೆ 'ಹೀರೋ ಆಫ್ ದಿ ವೈಕ್ಕಂ' ಎಂಬ ಬಿರುದನ್ನು ತಂದುಕೊಟ್ಟಿತು. ಆದರೆ ಅವರ ವೈಕ್ಕಂ ಹೋರಾಟದ ಯಶಸ್ಸನ್ನು ಕುರಿತು ಯಾವ ಪತ್ರಿಕೆಗಳೂ ಬರೆಯಲಿಲ್ಲ. ಮತ್ತೊಬ್ಬ ಸಾಂಸ್ಕೃತಿಕ ನಾಯಕ ತಿರು ವಿ. ಕಾ. ಅವರು ಮಾತ್ರ ನವಶಕ್ತಿ ಪತ್ರಿಕೆಯಲ್ಲಿ ಬರೆದರು. ಇದರಿಂದ ಬೇಸರಗೊಂಡ ಪೆರಿಯಾರ್ 1925ರಲ್ಲಿ ಈರೋಡಿನಿಂದ 'ಕುಡಿಯರಸು' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು.

ವೈಕಂನಿಂದ ಹಿಂತಿರುಗಿದ ಕೂಡಲೆ ಸತತ ಆರನೆ ಬಾರಿಗೆ ತಮಿಳುನಾಡು ಕಾಂಗ್ರೆಸ್ಸಿನ ಅಧಿವೇಶನದಲ್ಲಿ ತಮ್ಮ ಪ್ರಿಯವಾದ ಜಾತ್ಯಾಧಾರಿತ ಪ್ರತಿನಿಧಿತ್ವದ ಗೊತ್ತುವಳಿ ಮಂಡಿಸುವ ಪ್ರಯತ್ನ ಮಾಡಿದರು. ಕಾಂಚೀಪುರದಲ್ಲಿ ನಡೆದ 1925ರ ಅಧಿವೇಶನದಲ್ಲಿ ತಿರು ವಿ.ಕಾ. ಅವರು ಅಧ್ಯಕ್ಷರು. ಬಹಿರಂಗ ಅಧಿವೇಶನದಲ್ಲಿ ವಿರೋಧ ಉಂಟಾಗುವುದರ ಸುಳಿವು ಸಿಕ್ಕ ತಿರು ವಿ.ಕಾ. ಗೊತ್ತುವಳಿ ಮಂಡಿಸಲು ಅವಕಾಶ ಮಾಡಿಕೊಡಲೇ ಇಲ್ಲ. ತೀವ್ರ ಜುಗುಪ್ಸೆಯಿಂದ ಪೆರಿಯಾರ್ ಕಾಂಗ್ರೆಸ್ ಪಕ್ಷದಿಂದ ಹೊರನಡೆದರು. ಕಾಂಗ್ರೆಸ್ ಪಕ್ಷದ ಮುಂದುವರೆದ ಜಾತಿಯ ಸದಸ್ಯರು ಹಿಂದುಳಿದವರ ಉದ್ಧಾರದ ಬಗ್ಗೆ ಕೇವಲ ಬಾಯುಪಚಾರದ ಮಾತುಗಳನ್ನಾಡುವವರು. ಇವರಲ್ಲಿ ಜಾತಿಯತೆಯ ಬೇರು ತುಂಬಾ ಆಳವಾಗಿ ಬೇರುಬಿಟ್ಟಿವೆ ಎಂದು ಪೆರಿಯಾರ್‌ಗೆ ಮನವರಿಕೆಯಾಗಿತ್ತು.

ಈ ಹಿಂದೆ 1920ರಲ್ಲಿ ಗಾಂಧೀಜಿ ಅಸಹಕಾರ ಚಳವಳಿ ಆರಂಭಿಸಿದಾಗ ಕಾಂಗ್ರೆಸ್ಸಿಗರು ತಮ್ಮ ಮಕ್ಕಳನ್ನು ಬ್ರಿಟಿಷ್ ಆಡಳಿತಗಾರರ ಸುಪರ್ದಿನಲ್ಲಿರುವ ಯಾವ ಶಾಲೆಗಳಿಗೂ ಕಳಿಸಬಾರದೆಂದು ಸಲಹೆ ನೀಡಿದ್ದರು. ಆಗ ಕೆಲವು ದತ್ತಿ ಸಂಸ್ಥೆಗಳು, ಸಾರ್ವಜನಿಕರು ಹೊಸ ಶಾಲೆಗಳನ್ನು ಪ್ರಾರಂಭಿಸಿದ್ದರು. ತಿರುನಲ್‌ವೇಲಿ ಜಿಲ್ಲೆಯ ಚೇರನ್ ಮಾದೇವಿ ಎಂಬಲ್ಲಿ ತಮಿಳುನಾಡು ಕಾಂಗ್ರೆಸ್ ಪಕ್ಷದ ಅನುದಾನದ ನೆರವಿನಿಂದ ಒಂದು ಶಾಲೆ ಪ್ರಾರಂಭವಾಯಿತು. ಕಟ್ಟಾ ಕಾಂಗ್ರೆಸ್ಸಿಗರಾಗಿದ್ದ ವಿ. ವಿ. ಎಸ್. ಅಯ್ಯರ್ ಇದರ ಉಸ್ತುವಾರಿ ವಹಿಸಿಕೊಂಡಿದ್ದರು. ತಮಿಳುನಾಡು ಕಾಂಗ್ರೆಸ್ಸು ವಾರ್ಷಿಕ ಹತ್ತುಸಾವಿರ ರೂ.ಗಳನ್ನು ಈ ಶಾಲೆಗೆ ಅನುದಾನವಾಗಿ ನೀಡುತ್ತಿತ್ತು. 1925ನೇ ಸಾಲಿನ ಅರ್ಧ ಅನುದಾನವನ್ನು ಪೆರಿಯಾರ್ ಕಾಂಗ್ರೆಸ್ ಕಾರ್ಯದರ್ಶಿಯಾಗುವ ವೇಳೆಗಾಗಲೆ ನೀಡಲಾಗಿತ್ತು. ಉಳಿದರ್ಧ ಅನುದಾನ ನೀಡಬೇಕಾಗಿತ್ತು. ಅಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಸ್ಥಳಗಳಲ್ಲಿ, ಬೇರೆ ಬೇರೆಯ ಬಗೆಯ ಊಟ ನೀಡಲಾಗುತ್ತಿದ್ದ ಸಂಗತಿ ಪೆರಿಯಾರರಿಗೆ ಗೊತ್ತಾಗಿ ಅವರು ಈ ತಪ್ಪನ್ನು ಸರಿಪಡಿಸಬೇಕೆಂದು ಅಯ್ಯರ್ ಅವರ ಬಳಿ ಪ್ರಸ್ತಾಪಿಸಿದರು. ಅಯ್ಯರ್ ಅದನ್ನು ನಿರ್ಲಕ್ಷಿಸಿಬಿಟ್ಟರು. ಉಳಿದರ್ಧ ಅನುದಾನ ಹಣ ನೀಡಲು ಪೆರಿಯಾರ್ ನಿರಾಕರಿಸಿದರು. ಆದರೆ ಕಾರ್ಯದರ್ಶಿ ಪೆರಿಯಾರರ ಗಮನಕ್ಕೆ ಬಾರದ ಹಾಗೆ ಜಂಟಿ ಕಾರ್ಯದರ್ಶಿಗಳ ಮೂಲಕ ಅಯ್ಯರ್ ಅನುದಾನವನ್ನು ಮಂಜೂರು ಮಾಡಿಸಿಕೊಂಡುಬಿಟ್ಟರು. ಈ ಸಂಗತಿ ಗೊತ್ತಾದ ಪೆರಿಯಾರ್ ಅದನ್ನು ಬಹಿರಂಗಗೊಳಿಸಿದರು. ಸಾರ್ವಜನಿಕ ಶಾಲೆಯನ್ನು ಹೀಗೆ ನಡೆಸುವುದರ ವಿರುದ್ಧ ಪ್ರಮುಖ ಕಾಂಗ್ರೆಸ್ಸಿಗರಾಗಿದ್ದ ಡಾ. ವರದರಾಜುಲು ನಾಯ್ಡು, ತಿರು ವಿ.ಕಾ,. ಎಸ್. ರಾಮನಾಥನ್ ಮುಂತಾದವರು ಖಂಡಿಸಿದರು. ಅದನ್ನು ಗಾಂಧೀಜಿ ಗಮನಕ್ಕೆ ತಂದಾಗ ವಿ.ವಿ.ಎಸ್. ಅಯ್ಯರ್ ಅವರ ಕಠಿಣ ನಿಲುವಿನಿಂದಾಗಿ ಅವರ ಸಂಧಾನವೂ ಮುರಿದುಬಿತ್ತು. ಆದ್ದರಿಂದ ಆ ಶಾಲೆಯೂ ಮುಚ್ಚಿ ಹೋಯಿತು.

ಈ ಘಟನೆ ನಡೆದದ್ದು ಪೆರಿಯಾರ್ ಕೊನೆಯಬಾರಿಗೆ 1925 ರಲ್ಲಿ ಕಾಂಚೀಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಪ್ರಿಯವಾದ ಪ್ರಸ್ತಾವವನ್ನು ಮಂಡಿಸುವುದಕ್ಕೆ ಕೆಲ ದಿನಗಳ ಮೊದಲು, ನಂತರ ಅವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟರು. ನೇರವಾಗಿ ಶೂದ್ರರನ್ನು ಜಾಗೃತಗೊಳಿಸುವ ಕೆಲಸಕ್ಕೆ ತೊಡಗಿದರು. ಆನಂತರ ಅವರ ನಿರಂತರ ಹೋರಾಟದ ಫಲವಾಗಿ ಈ ಮಸೂದೆ ಜಾರಿಯಾದದ್ದು ಬೇರೊಂದು ಕಥೆ, ಅದರಲ್ಲಿ ಪೆರಿಯಾರ್ ಯಶಸ್ಸನ್ನು ಕಂಡರು. ಸರ್ಕಾರಿ ಆಜ್ಞೆ ನಂ. 1129 ದಿನಾಂಕ 15.12.1928 ರಂದು ಜಾರಿಗೆ ಬಂದು ಬ್ರಾಹ್ಮಣರು, ಬ್ರಾಹ್ಮಣೇತರರು, ಕ್ರಿಶ್ಚಿಯನ್ನರು, ಮುಸ್ಲಿಮರು, ಹಿಂದುಳಿದ ಮತ್ತು ನಿಮ್ನ ವರ್ಗದ ಜನಜಾತಿಗಳು ತಮ್ಮ ಸಂಖ್ಯೆಗನುಗುಣವಾದ ಪ್ರಾತಿನಿಧಿತ್ವವನ್ನು ಸರ್ಕಾರಿ ಉದ್ಯೋಗಗಳಲ್ಲಿ ಮತ್ತು ಶಿಕ್ಷಣಕ್ಷೇತ್ರದಲ್ಲಿ ಪಡೆಯುವಂತಾಯಿತು.

ಪೆರಿಯಾರ್ ರಚ್ಚೆ ಹಿಡಿದ ಮಗುವಿನಂತೆ ಹಠ ಹಿಡಿದು ತನಗೆ ಸಿಗಲಾರದ್ದನ್ನು ದಕ್ಕಿಸಿಕೊಂಡರು. ಅಂಥ ಹಠಮಾರಿತನವನ್ನು ತಮಿಳು ಕುಲಕ್ಕೆ ಕಲಿಸಿಕೊಟ್ಟರು. ಅವರು ಈಗಲೂ ಇಂಥ ಹಠಮಾರಿತನದಿಂದಲೇ ಅಸಾಧ್ಯವಾದುದನ್ನು ಸಾಧ್ಯವಾಗಿಸಿಕೊಳ್ಳುತ್ತಿದ್ದಾರೆ. ರಚ್ಚೆ ಹಿಡಿದ ಮಕ್ಕಳು ಒಮ್ಮೊಮ್ಮೆ ಕೈಗೆ ಸಿಕ್ಕಿದ್ದನ್ನು ಎಸೆದು ನಾಶಮಾಡುತ್ತವೆ. ಅದರ ಹಿಂದೆ ಪಡೆಯಬೇಕೆಂಬ ಆರ್ತತೆಯಿರುತ್ತದೆ. ಪೆರಿಯಾರ್ ನೈರಾಶ್ಯದ ಅಂಚಿನಲ್ಲಿ ಕಮರಿಹೋಗಲಿಲ್ಲ. ಇಡೀ ಜನಸಮುದಾಯವನ್ನು ಸಮುದ್ರದಂತೆ ಎಬ್ಬಿಸಿ ನಿಲ್ಲಿಸಿದರು.

(ಮಯೂರ, ಸೆಪ್ಟೆಂಬರ್, 2004)
ಕೃಪೆ : ಜೀರುಂಡೆ ಪುಸ್ತಕ ಪ್ರಕಾಶನ



ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ
ಗೊ. ರು. ಚನ್ನಬಸಪ್ಪ

ಗೊ. ರು. ಚನ್ನಬಸಪ್ಪನವರು ಕನ್ನಡ ಸಾಹಿತ್ಯಲೋಕಕ್ಕೆ ಅದರಲ್ಲೂ ಜಾನಪದ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿರುವವರು .

ಗೊ. ರು. ಚನ್ನಬಸಪ್ಪನವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ 1930ರ ಮೇ 18 ರಂದು ಜನಿಸಿದರು. 1948 ನೇ ವರ್ಷದಲ್ಲಿ ಶಾಲಾ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಚನ್ನಬಸಪ್ಪನವರು ಗಾಂಧೀಗ್ರಾಮದಲ್ಲಿ ಸಮಾಜಶಿಕ್ಷಣ ತರಬೇತಿಯನ್ನು ಪಡೆದರು. ಭೂದಾನ ಚಳುವಳಿ, ವಯಸ್ಕರ ಶಿಕ್ಷಣ ಮತ್ತು ಸೇವಾದಳಗಳಲ್ಲಿ ಚನ್ನಬಸಪ್ಪನವರು ನಿಷ್ಠಾವಂತರಾಗಿ ಸೇವೆ ಸಲ್ಲಿಸಿದ್ದಾರೆ. ಚನ್ನಬಸಪ್ಪನವರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಕಮಿಷನರ್ ಆಗಿ ಸಹಾ ಮಹತ್ವದ ಸೇವೆ ಸಲ್ಲಿಸಿದವರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಅನೇಕ ಮಹತ್ವಪೂರ್ಣ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ನೂರೈವತ್ತಕ್ಕೂ ಹೆಚ್ಚು ಮಹತ್ವ ಪೂರ್ಣ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿತು. ಚನ್ನಬಸಪ್ಪನವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಹಾ ಕಾರ್ಯನಿರ್ವಹಿಸಿದ್ದಾರೆ.

ಗೊ.ರು ಚನ್ನಬಸಪ್ಪನವರ ಇನಿದಾದ ದನಿಯಲ್ಲಿ ಜಾನಪದ ಸಾಹಿತ್ಯ ಸುಧೆಯನ್ನು ಸವಿಯುವುದೇ ಸೊಗಸು. ಚನ್ನಬಸಪ್ಪ ಅವರು ಹಿರಿಯ ಜಾನಪದ ತಜ್ಞರು. ಕರ್ನಾಟಕ ಜಾನಪದ ಅಕಾಡೆಮಿಯ ಕ್ರಿಯಾಶೀಲ ಅಧ್ಯಕ್ಷರಾಗಿ ಅವರ ಸೇವೆ ಸಂದಿದೆ. ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ಗುರುತರವಾದ ಸೇವೆ ಸಲ್ಲಿಸಿದ್ದಾರೆ. ಭಾರತದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಅವರ ಪಾತ್ರ ದೊಡ್ಡದು. ಮೈದುನ ರಾಮಣ್ಣ, ಗ್ರಾಮಗೀತೆಗಳು, ಬಾಗೂರು ನಾಗಮ್ಮ ಮತ್ತು ಇತರ ಹಾಡುಗಳು, ಮುಂತಾದ ಕೃತಿಗಳು ಅವರ ವಿದ್ವತ್ತಿಗೆ ಸಾಕ್ಷಿಯಾಗಿವೆ. 1977ರಲ್ಲಿ ಅವರು ಸಂಪಾದಿಸಿದ 'ಕರ್ನಾಟಕ ಜನಪದ ಕಲೆಗಳು' ಇಂದಿಗೂ ಮಾದರಿ ಕೃತಿಯಾಗಿದೆ. ಕೆಲವು ವರ್ಷಗಳ ಹಿಂದೆ ಮೂಡಿಬಂದ 'ಆಲೋಚನೆ' ಎನ್ನುವ ಕೃತಿಯ ತನಕ ಅವರ ಜಾನಪದ ಅಧ್ಯಯನದ ಬೇರೆ ಬೇರೆ ನೆಲೆಯ ಆಲೋಚನ ವಿನ್ಯಾಸಗಳು ಜಾನಪದ ಅಧ್ಯಯನಕಾರರಿಗೆ ಉಪಯುಕ್ತವಾಗಿವೆ.

ಮಹಾದೇವಿ, ಸದಾಶಿವ ಶಿವಾಚಾರ್ಯ, ಕರ್ನಾಟಕ ಪ್ರಗತಿಪಥ, ಚೆಲುವಾಂಬಿಕೆ, ಕುನಾಲ, ಸಾಕ್ಷಿ ಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್ಯಾವೊ, ಬಾಗೂರು ನಾಗಮ್ಮ, ಗ್ರಾಮ ಗೀತೆಗಳು, ವಿಭೂತಿ, ಕರ್ನಾಟಕ ಜನಪದ ಕಲೆಗಳು ಗೊ.ರು. ಚನ್ನಬಸಪ್ಪನವರ ಪ್ರಮುಖ ಬರಹಗಳು.

ಗೊ. ರು. ಚನ್ನಬಸಪ್ಪನವರ ಮಾತುಗಳನ್ನು ಕೇಳುವುದೆಂದರೆ ನಮ್ಮ ಕಾಲದ ಒಂದು ಸಂಪೂರ್ಣ ಚಿತ್ರಣವನ್ನೇ ಕಂಡುಕೊಂಡಂತೆ. ಅವರ ಸಂದರ್ಶನದ ಈ ಮಾತುಗಳು ನಮ್ಮ ಕಾಲದ ಅಂದು ಮತ್ತು ಇಂದಿನ ಬದುಕನ್ನು ಸಮಗ್ರವಾಗಿ ಕಟ್ಟಿಕೊಡುವಂತಿದೆ:

"ನನ್ನ ತಂದೆ–ತಾಯಿಗಳಿಗೆ ನನ್ನನ್ನು ಹೆಚ್ಚಿನ ಶಿಕ್ಷಣಕ್ಕೆ ಕಳುಹಿಸಬೇಕೆಂದಿದ್ದರೂ ಬಡತನದ ಬವಣೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಅವರ ಸಂಕಟದ ನೆನಪು ಈಗಲೂ ನನಗೆ ದುಃಖವುಂಟು ಮಾಡುತ್ತದೆ. ನನ್ನ ತಂದೆ ತಿಂಗಳಿಗೆ ಏಳು ರೂ. ಸಂಬಳದಲ್ಲಿ ಅನುದಾನಿತ ಶಾಲೆಯೊಂದರಲ್ಲಿ ಉಪಾಧ್ಯಾಯರಾಗಿದ್ದರು. ನನ್ನನ್ನೂ ಅಂತಹ ಶಾಲಾ ಉಪಾಧ್ಯಾಯನನ್ನಾಗಿ ಮಾಡಲು ಮಾತ್ರ ಅವರಿಗೆ ಸಾಧ್ಯವಾಯಿತು ಅಷ್ಟೇ.



ನನ್ನ ಜೀವನದ ಆರಂಭದ ಆ ಕಾಲ ದುರ್ಭರ ದಾರಿದ್ರ್ಯ ಅನುಭವದ ಕಾಲವಾದರೂ ಒಂದು ರೀತಿಯ ಸಂತೃಪ್ತಿ–ಸಮಾಧಾನಗಳೇ ಇದ್ದವು. ನನ್ನ ತಾಯಿ ಕಂಡವರ ಹೊಲಕ್ಕೆ ದಿನಕ್ಕೆ ಮೂರು ಆಣೆ ಕೂಲಿಗೆ ಹೋಗುತ್ತಿದ್ದರು. ರಜದ ದಿನಗಳಲ್ಲಿ ನಾನೂ ಕೂಲಿಗೆ ಹೋಗುತ್ತಿದ್ದೆ. ನನಗೆ ದಿನಕ್ಕೆ ಒಂದೂವರೆ ಆಣೆ ಕೂಲಿ. ನಮಗೆ ಆ ಹಣಕ್ಕಿಂತ ಮುಖ್ಯವಾಗುತ್ತಿದ್ದುದು ನಾವು ಕೂಲಿ ಹೋಗುತ್ತಿದ್ದ ಹೊಲದವರು ಕೊಡುತ್ತಿದ್ದ ಒಂದು ಹೊತ್ತಿನ ಊಟ!

ನಮ್ಮೂರು ಚಿಕ್ಕಮಗಳೂರು ಜಿಲ್ಲಾ ತರೀಕೆರೆ ತಾಲೂಕಿನ ಒಂದು ಚಿಕ್ಕ ಹಳ್ಳಿ– ಗೊಂಡೇದಹಳ್ಳಿ. ಗ್ರಾಮೀಣ ಪರಿಸರದಲ್ಲೇ ಬೆಳೆದ ನನಗೆ ಸಾಹಿತ್ಯ, ಸಂಸ್ಕೃತಿ ಸಾಮಾಜಿಕ ಚಟುವಟಿಕೆಗಳಲ್ಲಿ ಹೇಗೆ ಆಸಕ್ತಿ ಉಂಟಾಯಿತೆಂದು ಸ್ಪಷ್ಟವಾಗಿ ಹೇಳಲಾರೆ. ನಾನು ಮಾಧ್ಯಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗ ಸ್ವಾತಂತ್ರ್ಯ ಚಳವಳಿಯ ಕಾಲ. ನಾನು ಚಳವಳಿಯಲ್ಲಿ ಪಾಲುಗೊಂಡೆ. ಆ ಸಂದರ್ಭದಲ್ಲಿ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಗುದ್ಲೆಪ್ಪ ಹಳ್ಳಿಕೇರಿ, ಮೊದಲಾದ ನಾಡ ಅಭಿಮಾನಿಗಳನ್ನು ನಿಕಟವಾಗಿ ನೋಡಲು ಅವಕಾಶವಾಯಿತು. ಅವರ ನಡೆ–ನುಡಿಗಳು ನನ್ನ ಮೇಲೆ ಪ್ರಭಾವ ಬೀರಿದವು.


ನಾನು ಪ್ರೌಢಶಾಲೆ ಕಲಿತದ್ದು ಬೀರೂರಿನಲ್ಲಿ. ಸ್ವಾತಂತ್ರ್ಯ ಚಳವಳಿ ಭಾಗವಾಗಿ ಪ್ರತಿದಿನ ಬೆಳಗ್ಗೆ ನಡೆಯುತ್ತಿದ್ದ ಪ್ರಭಾತ್‌ಭೇರಿಯಲ್ಲಿ ಸ್ವಾತಂತ್ರ್ಯ ಗೀತೆಗಳನ್ನು ನಾನೇ ಹಾಡುತ್ತಿದ್ದೆ. ಅವುಗಳಲ್ಲಿ ಒಂದು ಗೀತೆಯ ಒಂದೆರಡು ಸಾಲುಗಳು ಇನ್ನೂ ನೆನಪಿನಲ್ಲಿವೆ: "ಓ ತಮ್ಮ, ಓ ತಂಗಿ, ಓ ಏನಂತಿ? ಹಾಕಬೇಕು ಇನ್ನು ಖಾದಿ, ಹಿಡಿಬೇಕು ಹಳ್ಳಿ ಹಾದಿ, ಓ ಏನಂತಿ?" ಆ ಸಾಲುಗಳೇ ನನ್ನ ಬದುಕಿನ ಸೂತ್ರಗಳಾದವು. ಅಂದಿನಿಂದ ಹುಟ್ಟಿದ ಹಳ್ಳಿಯ ಸೇವೆ ನನ್ನ ಕರ್ತವ್ಯಗಳಲ್ಲಿ ಒಂದಾಯಿತು. ಖಾದಿ ಧರಿಸುವುದು ನನ್ನ ರೂಢಿಯಾಯಿತು. ಈ ಎರಡನ್ನು ಇಂದಿಗೂ ಪರಿಪಾಲಿಸಿಕೊಂಡು ಬಂದಿದ್ದೇನೆ.

ಅಂದು ಗಾಂಧೀಜಿ ಕೊಟ್ಟ ಗ್ರಾಮೋದ್ಧಾರದ ಕರೆಯಲ್ಲಿ ಗ್ರಾಮ ಭಾರತದಲ್ಲಿ ನೈತಿಕ ಬಲ ಮತ್ತು ಆತ್ಮವಿಶ್ವಾಸವನ್ನು ಹುಟ್ಟಿಸುವ ಒಂದು ಆಶಯವಿತ್ತು. ಸ್ವಾತಂತ್ರ್ಯಾನಂತರ ಗ್ರಾಮೀಣಾಭಿವೃದ್ಧಿಯ ಕೆಲಸಗಳೇನೋ ಆಗುತ್ತಿವೆ. ಆದರೆ ಗ್ರಾಮೀಣರ ನೈತಿಕ ಬಲ ಮತ್ತು ಆತ್ಮವಿಶ್ವಾಸಗಳು ನೆಲಕಚ್ಚಿ ಹೋಗಿವೆ. ಇದು ನಿಜಕ್ಕೂ ಒಂದು ನಿರಾಸೆಯ ಬೆಳವಣಿಗೆ. ನಮ್ಮ ಪ್ರಜಾಪ್ರಭುತ್ವದ ನೆಲಗಟ್ಟೇ ಹಳ್ಳಿಗಳು. ಆದರೆ ಆ ನೆಲಗಟ್ಟನ್ನು ಭದ್ರಪಡಿಸುವ ಪ್ರಾಮಾಣಿಕ ಪ್ರಯತ್ನ ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ರಾಜಕೀಯ ವ್ಯವಸ್ಥೆಗಳಿಂದ ನಡೆಯಲಿಲ್ಲವೆಂದೇ ನನಗನಿಸುತ್ತದೆ. ನಮ್ಮ ಹಳ್ಳಿಗಳ ಕ್ರಿಯಾಶೀಲ ಬದುಕನ್ನು ಹಾಳುಮಾಡಿರುವ, ಅಲ್ಲಿನ ಜನರ ಪರಂಪರೆಯ ಜೀವನ ಸಂಸ್ಕೃತಿಯನ್ನು ವಿಕೃತಗೊಳಿಸಿರುವ ಒಂದು ದೊಡ್ಡ ಅನಿಷ್ಟವೆಂದರೆ ಅಲ್ಲಿ ಪ್ರವೇಶಿಸುವ ಅಪಕ್ವ ರಾಜಕೀಯ. ಈ ಕಳವಳಕಾರಿ ಬೆಳವಣಿಗೆಯ ಬಗೆಗೆ ಪ್ರಜ್ಞಾವಂತರೆಲ್ಲ ಗಂಭೀರವಾಗಿ ಆಲೋಚಿಸಬೇಕು."

ಕನ್ನಡ ನಾಡಿಗೆ ವಿವಿಧ ನೆಲೆಗಳಲ್ಲಿ ಮಹತ್ವದ ಸೇವೆ ಸಲ್ಲಿಸಿರುವ ಗೊ.ರು. ಚನ್ನಬಸಪ್ಪನವರು ಮಂಡ್ಯದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಶುಭ ಹಾರೈಕೆಗಳು.

ಲೇಖನ ಕೃಪೆ : ಕನ್ನಡ ಸಂಪದ

(ಕನ್ನಡ ಸಂಪದದಲ್ಲಿ ಮೂಡಿ ಬರುತ್ತಿರುವ ಬರಹಗಳನ್ನು 'ಸಂಸ್ಕೃತಿ ಸಲ್ಲಾಪ' ತಾಣವಾದ www.sallapa.com ನಲ್ಲಿ ಆಸ್ವಾದಿಸಲು ತಮಗೆ ಸ್ವಾಗತವಿದೆ.)



ಸಾಹಿತಿ ಆರ್ ಜಿ ಹಳ್ಳಿ ನಾಗರಾಜ್ ಅವರ ಸಂಪಾದಕತ್ವದಲ್ಲಿ ಕಳೆದ ನಲವತ್ತು ವರ್ಷಗಳಿಂದ ಪ್ರಕಟವಾಗುತ್ತಿರುವ " ಅನ್ವೇಷಣೆ " ಕನ್ನಡದ ಬೆರಳೆಣಿಕೆಯ ಸಾಹಿತ್ಯ ಪತ್ರಿಕೆಗಳಲ್ಲಿ ಈಗ ಪ್ರಮುಖವಾಗಿದೆ. ಎರಡು ತಿಂಗಳಿಗೊಮ್ಮೆ ಪ್ರಕಟವಾಗುವ ಈ ಪತ್ರಿಕೆ ಗಾಂಧೀಜಿಯವರ 155 ನೇ ವರ್ಷಾಚರಣೆಯ ಅಂಗವಾಗಿ ಸೆಪ್ಟೆಂಬರ್ – ಅಕ್ಟೋಬರ್ ಸಂಚಿಕೆಯನ್ನು 'ಗಾಂಧೀಜಿ ವಿಶೇಷ ಸಂಚಿಕೆ' ಎಂದು ಪ್ರಕಟಿಸಿದೆ. ಈ ಸಂಚಿಕೆಯಲ್ಲಿ 24 ಬರಹಗಳಿವೆ. ರಾಜ್ಯದ, ಹೊರ ರಾಜ್ಯದ ಹಲವು ಚಿಂತಕರ ಬರಹಗಳು, ಅಪರೂಪದ ಗಾಂಧಿ ಚಿತ್ರಗಳು, ಕಾರ್ಟೂನ್... ಒಳಗೊಂಡಿದೆ. ಇಂಗ್ಲಿಷ್, ಮಲೆಯಾಳಂ ಹಾಗೂ ತೆಲುಗು ಬರಹಗಳ ಕನ್ನಡ ಅನುವಾದಗಳಿವೆ.

*ಸುಧೀಂದ್ರ ಕುಲಕರ್ಣಿ *ಪ್ರೊ. ಬರಗೂರು ರಾಮಚಂದ್ರಪ್ಪ *ಚಂದ್ರಶೇಖರ ತಾಳ್ಯ *ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ *ಜಾಣಗೆರೆ ವೆಂಕಟರಾಮಯ್ಯ *ಡಾ. ಜ್ಯೋತಿ ಎಸ್ *ಸಾವಿತ್ರಿ ಮುಜುಮದಾರ *ಡಾ. ಕೇಶವಶರ್ಮ ಕೆ. *ಡಾ. ರಾಮಲಿಂಗಪ್ಪ ಟಿ. ಬೇಗೂರು *ಡಾ. ಸರಜೂ ಕಾಟ್ಕರ *ಜಿ.ಎನ್. ಮೋಹನ್ *ನೇತಾಜಿ ಗಾಂಧಿ * ರಾಮಮನೋಹರ ಲೋಹಿಯಾ, ಮಲೆಯಾಳಂ ಲೇಖಕ ತಾಯಾಟ್ಟ್ ಶಂಕರನ್ (ಅನು: ಶ್ರೀಧರ್ ಎನ್), ತೆಲುಗಿನ ಶ್ರೀ ಲವಣಮ್ (ಅನು: ಬಿ.ಎ. ಕೆಂಚರೆಡ್ಡಿ), ಸಂಪಾದಕನ ಟಿಪ್ಪಣಿ ಒಳಗೊಂಡ ಗದ್ಯ ಬರಹಗಳು ಹಾಗೂ ಡಾ. ಬಸವರಾಜ ಸಾದರ, ಡಾ. ಬಂಜಗೆರೆ ಜಯಪ್ರಕಾಶ್, ನೂರುಲ್ಲಾ ತ್ಯಾಮಗೊಂಡ್ಲು, ಗುಂಡಿಗೇರೆ ವಿಶ್ವನಾಥ, ಉಮಾದೇವಿ ಬಾಗಲಕೋಟ, ಪ್ರೊ. ಎಚ್.ಎ. ಭಿಕ್ಷಾವರ್ತಿಮಠ, ಡಿ.ಆರ್. ಚಂದ್ರ ಮಾಗಡಿ ಅವರ ಗಾಂಧಿ ಕುರಿತ ಕವಿತೆಗಳನ್ನು ಒಳಗೊಂಡಿದೆ .

ಅನ್ವೇಷಣೆ ಪತ್ರಿಕೆಯ ಈ ಗಾಂಧೀಜಿ ಮೇಲಿನ ಪ್ರೀತಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.



ಕರ್ನಾಟಕದ ಮಾಜಿ ಮುಖ್ಯ ಮಂತ್ರಿ , ಮಾಜಿ ವಿದೇಶಾಂಗ ಸಚಿವ , ಮಾಜಿ ರಾಜ್ಯಪಾಲ , ಮಾಜಿ ಸಭಾಪತಿ ಹೀಗೆ ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಅವುಗಳಿಗೆ ಘನತೆ ತಂದು ಕೊಟ್ಟ ರಾಜಕೀಯ ಮುತ್ಸದ್ದಿ ಎಸ್ ಎಂ ಕೃಷ್ಣ ಅವರ ನಿಧನಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂತಾಪವನ್ನು ಸಲ್ಲಿಸುತ್ತದೆ. ಕಲೆ , ಸಾಹಿತ್ಯ , ಸಂಗೀತ , ಕ್ರೀಡೆ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಅವರ ನಿಧನದಿಂದ ಕರ್ನಾಟಕ ಬಹುಮುಖಿ ನಾಯಕನನ್ನು ಕಳೆದು ಕೊಂಡಿದೆ. ಉತ್ತಮ ಸಾರ್ವಜನಿಕ ನಡವಳಿಕೆಗೆ ಮಾದರಿಯಾಗಿದ್ದ ಅವರ ಗುಣ ವಿಶೇಷಗಳು ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಲಿ ಎಂದು ಗಾಂಧಿ ಬಳಗ ಆಶಿಸುತ್ತದೆ.

ಬಾಪು ಪ್ರಪಂಚ 'ಡಿಜಿಟಲ್ ಆವೃತ್ತಿ'

' ಬಾಪು ಪ್ರಪಂಚ ' ಮಾಸಿಕ ಪತ್ರಿಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆ. ಇದು ಗಾಂಧಿ ವಿಚಾರ ಧಾರೆಗಳನ್ನು ಮತ್ತು ಗಾಂಧೀಜಿ ಜೀವನ ಚಿತ್ರಣಗಳನ್ನು ಜನಸಮುದಾಯಕ್ಕೆ ತಿಳಿಸುವ ಪ್ರಯತ್ನ ಮಾಡುತ್ತಿದೆ. ಕಳೆದ ಆರೇಳು ವರ್ಷಗಳಿಂದ ಇದು ಮುದ್ರಣ ರೂಪದಲ್ಲಿ ಪ್ರಕಟಗೊಳ್ಳುತ್ತಿತ್ತು. ಕಳೆದೆರಡು ವರ್ಷಗಳಿಂದ ಇದನ್ನು ಡಿಜಿಟಲ್ ರೂಪಕ್ಕೂ ಪರಿವರ್ತಿಸಿದ್ದೇವೆ . ಈಗ ಮುದ್ರಣ ಮತ್ತು ಡಿಜಿಟಲ್ ಎರಡೂ ಆವೃತ್ತಿಗಳಲ್ಲಿ ಬಾಪು ಪ್ರಪಂಚ ಪತ್ರಿಕೆ ಓದುಗರಿಗೆ ಲಭ್ಯವಿದೆ.

ಪ್ರಸ್ತುತ ಬಾಪು ಪ್ರಪಂಚ ಪತ್ರಿಕೆಯ ಚಂದಾದಾರರ ಸಂಖ್ಯೆ ಬಹಳ ಕಡಿಮೆ ಇದೆ. ಇದರ ಜೊತೆಗೆ ಪತ್ರಿಕೆಯ ಮುದ್ರಣವೆಚ್ಚ ದುಬಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಅಂಚೆ ಮೂಲಕ ಪತ್ರಿಕೆಯ ವಿತರಣೆ ತ್ರಾಸದಾಯಕವಾಗಿರುವ ಹಿನ್ನೆಲೆಯಲ್ಲಿ ನಾವು ಪತ್ರಿಕೆಯನ್ನು ಪೂರ್ಣವಾಗಿ ಡಿಜಿಟಲ್ ಮಾಧ್ಯಮಕ್ಕೇ ಸೀಮಿತಗೊಳಿಸಲು ಯೋಚಿಸುತ್ತಿದ್ದೇವೆ .ಇದಕ್ಕೆ ಡಿಜಿಟಲ್ ಮಾಧ್ಯಮದ ಅನೇಕ ಅನುಕೂಲಗಳು ಕಾರಣವಾಗಿವೆ . ಡಿಜಿಟಲ್ ಪತ್ರಿಕೆಯ ಎಲ್ಲ ಪುಟಗಳನ್ನೂ ಬಣ್ಣದಲ್ಲಿ ವಿನ್ಯಾಸಗೊಳಿಸಿ ಓದುಗರಿಗೆ ಅಲ್ಪ ವೆಚ್ಚದಲ್ಲಿ ವಿತರಿಸಬಹುದು . ಬಾಪು ವಿಚಾರಗಳನ್ನು ಯುವಸಮೂಹಕ್ಕೆ ತಲುಪಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿರುವುದರಿಂದ ಯುವ ಸಮುದಾಯ ಇಷ್ಟಪಡುತ್ತಿರುವ ಡಿಜಿಟಲ್ ಮಾಧ್ಯಮವನ್ನೇ ನಾವು ಅನಿವಾರ್ಯವಾಗಿ ಆಶ್ರಯಿಸ ಬೇಕಾಗಿದೆ.

ಈಗಾಗಲೇ ನಾವು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್ , ವಾಟ್ಸ್ ಆಪ್ , ವೆಬ್ ಪೋರ್ಟಲ್ ಗಳಲ್ಲಿ ನಮ್ಮ ಕಾರ್ಯಕ್ರಮಗಳ ಪ್ರಕಟಣೆ ಮತ್ತು ಪ್ರಚಾರವನ್ನು ಮಾಡುತ್ತಿದ್ದೇವೆ . ಹೀಗಾಗಿ ಬಾಪು ಪ್ರಪಂಚ ಮಾಸಿಕ ಪ್ರಕಟಣೆಯನ್ನು ನಮ್ಮ ಕಾರ್ಯಚಟುವಟಿಕೆಗಳಿಗೆ ಹೇಗೆ ಪರ್ಯಾಯ ರೀತಿಯಲ್ಲಿ ಬಳಸಿಕೊಳ್ಳ ಬಹುದು ಎನ್ನುವ ವಿಚಾರವನ್ನೂ ನಾವು ಚರ್ಚಿಸುತ್ತಿದ್ದೇವೆ . ಈ ಬಗ್ಗೆ ನಿಮ್ಮ ಅಭಿಪ್ರಾಯ ಹಾಗೂ ಅನಿಸಿಕೆಗಳನ್ನು ತಿಳಿಸಿದರೆ ಅದು ನಮಗೆ ನೆರವಾಗುತ್ತದೆ . ದಯವಿಟ್ಟು ನಿಮ್ಮ ಅನಿಸಿಕೆ , ಅಭಿಪ್ರಾಯಗಳನ್ನು ಸಂಪಾದಕರಿಗೆ ತಿಳಿಸಿ .

ಸಂಪಾದಕರು


ಬಾಪು ಪ್ರಪಂಚ

ಗಾಂಧಿ ಭವನ , ಕುಮಾರ ಕೃಪ ರಸ್ತೆ

ಬೆಂಗಳೂರು – 560001

e mail : gandhibhavanbangalore@gmail.com

ಮೊಬೈಲ್ : +91 90356 54646



"ಪ್ರಿಯ ಮೀರಾ"

ಎಲ್ಲ ಮಹಾತ್ಮರುಗಳು ಹಾಗೂ ಮಹಾ ವ್ಯಕ್ತಿಗಳ ತರಹ, ಗಾಂಧೀಜಿಯವರನ್ನೂ ನಾವು ಮೂರ್ತಿಯೊಂದನ್ನಾಗಿ ಮಾಡಿ ಪೂಜಿಸಿರುವುದೇ ಹೆಚ್ಚು. ಮೂರ್ತಿಗಳು ಸಿದ್ಧ ವ್ಯಕ್ತಿತ್ವದ ಸಂಕೇತಗಳು ಹಾಗೂ ಮೂರ್ತಿ ಪೂಜೆಯೆಂಬುದು ಸಿದ್ಧಿಯನ್ನು ಸೂಚಿಸೀತೇ ವಿನಃ ಸಮಗ್ರ ವ್ಯಕ್ತಿತ್ವವನ್ನಲ್ಲ.

ಮಹಾತ್ಮರುಗಳು ತಮ್ಮದೇ ವ್ಯಕ್ತಿತ್ವದೊಟ್ಟಿಗೆ ಬಡಿದಾಡಿರುತ್ತಾರೆ. ಅದನ್ನು ಬಗ್ಗಿಸಿ ಹಿಗ್ಗಿಸಿ ಕಾಯಿಸಿ ಕ್ರಮೇಣ ಮಹತ್ವದ ವ್ಯಕ್ತಿತ್ವವೊಂದನ್ನು ತನ್ನೊಳಗೆ ರೂಪಿಸಿಕೊಂಡಿರುತ್ತಾರೆ. ಮಹಾತ್ಮರುಗಳ ಮತ್ತೊಂದು ಶಕ್ತಿಯೆಂದರೆ ಅವರಿಗೆ ಒಳಗು ಹೊರಗು ಎಂಬ ಭೇದವಿರುವುದಿಲ್ಲ. ಒಳಗಿರುವುದು ಹೊರಗೂ ಇರುತ್ತದೆ. ಹಾಗಾಗಿ ತನ್ನ ವ್ಯಕ್ತಿತ್ವವನ್ನು ಮಹತ್ತಾಗಿ ರೂಪಿಸಿಕೊಳ್ಳುವುದರೊಟ್ಟಿಗೆ, ತನ್ನ ಹತ್ತಿರ ಸುಳಿದ ಸಾವಿರಾರು ವ್ಯಕ್ತಿತ್ವಗಳನ್ನೂ ಮಹತ್ತರವಾಗಿ ರೂಪಿಸಿರುತ್ತಾರೆ. ಹಾಗಾಗಿ ಮಹತ್ತಿನ ಪ್ರಕ್ರಿಯೆ ಮಹಾತ್ಮರ ಮೂರ್ತಿ ಪೂಜೆಗಿಂತ ಮುಖ್ಯವಾದ ಸಂಗತಿಯಾಗುತ್ತದೆ.

ಮಂಜುನಾಥ್ ಚಾಂದ್ ಅವರು ಅನುವಾದಿಸಿ ಪ್ರಕಟಿಸಿರುವ 'ಪ್ರಿಯ ಮೀರಾ' ಎಂಬೀ ಪುಸ್ತಕವು ಅಂತಹುದೊಂದು ಮಹತ್ತರವಾದ ಪುಸ್ತಕವಾಗಿದೆ. ಮೆಡಲೀನ್ ಸ್ಲೇಡ್ ಎಂಬ ಬ್ರಿಟಿಷ್ ಯುವತಿಯೊಬ್ಬಳು ರೊಮೇನ್ ರೊಲ್ಯಾಂಡ್ ಎಂಬ ಫ್ರೆಂಚ್ ಲೇಖಕರೊಬ್ಬರಿಂದಾಗಿ ಗಾಂಧೀಜಿಯವರ ಹೆಸರು ಕೇಳುತ್ತಾಳೆ. ಅವಳಿಗೆ ಗಾಂಧೀಜಿಯವರ ವ್ಯಕ್ತಿತ್ವದ ಬಗ್ಗೆ ಆಸಕ್ತಿ ಮೂಡುತ್ತದೆ. ನಾನು ಭಾರತಕ್ಕೆ ಬರಲೇ ಎಂದು ಪತ್ರವನ್ನು ಬರೆಯುತ್ತಾಳೆ. ಹೀಗೆ ಶುರುವಾಗುತ್ತದೆ ಮೆಡಲೀನ್ ಸ್ಲೇಡ್ ಮೀರಾ ಬೆಹನ್ ಎಂಬ ಮಹಾನ್ ವ್ಯಕ್ತಿತ್ವವಾಗಿ ರೂಪಿತವಾದ ರೋಚಕ ಕತೆ. ಮೀರಾ ಬೆಹನ್ ತಾನೇ ತದನಂತರದಲ್ಲಿ ಸಂಪಾದಿಸಿ ಮುದ್ರಿಸಿದ ಗಾಂಧೀಜಿಯವರ ಪತ್ರಗಳ ಸಂಕಲನ ಈ ಪುಸ್ತಕ.



ನಾವೆಲ್ಲರೂ ಓದಲೇಬೇಕಾದ ಪುಸ್ತಕವೊಂದನ್ನು ಮಂಜುನಾಥ್ ತುಂಬ ಪ್ರೀತಿ ಹಾಗೂ ಶ್ರದ್ಧೆಯಿಂದ ಕನ್ನಡಕ್ಕೆ ಅನುವಾದಿಸಿ ತಂದಿದ್ದಾರೆ. ಹಾಗಾಗಿ ಇದು ಕನ್ನಡದ ಮೂಲ ಪುಸ್ತಕವೇ ಏನೋ, ಗಾಂಧೀಜಿಯವರು ಮೀರಾಳಿಗೆ ಕನ್ನಡದಲ್ಲಿಯೇ ಪತ್ರ ಬರೆಯುತ್ತಿದ್ದಾರೇನೋ ಎಂಬಷ್ಟು ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ವ್ಯಕ್ತಿತ್ವಗಳನ್ನು ರೂಪಿಸುವುದು ಸುಲಭವಲ್ಲ. ಸ್ಥೂಲವಾಗಿ ಮಾಡಲು ಬರುವುದಿಲ್ಲ ಈ ಕೆಲಸವನ್ನು. ಸಣ್ಣ ಪುಟ್ಟ ವಿವರಗಳಲ್ಲಿ, ನಡವಳಿಕೆಗಳ ಮೂಲಕ, ಪ್ರೀತಿ ಹಾಗೂ ನಂಬಿಕೆಗಳ ಮೂಲಕ ಮಾತ್ರವೇ ಆಗಬಲ್ಲ ಕೆಲಸವದು.

– ಪ್ರಸನ್ನ

1924ರಲ್ಲಿ ನಡೆದ ಬೆಳಗಾವಿ ಅಧಿವೇಶನದ ಚಿತ್ರಾವಳಿ



ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿ ಮೋಟಾರ್ ಕಾರಿನಲ್ಲಿ ಹಿಂದಿನ ಕಾಕಿನಾಡ ಅಧಿವೇಶನದ ಅಧ್ಯಕ್ಷರಾಗಿದ್ದ ಮಹಮದ್ ಆಲಿ ಅವರ ಜೊತೆ ಆಗಮಿಸುತ್ತಿರುವುದು .




ಗಾಂಧೀಜಿ , ಸರೋಜಿನಿ ನಾಯ್ಡು ಹಾಗೂ ಇನ್ನಿತರ ನಾಯಕರ ಜೊತೆ ಗಾಂಧೀಜಿ



ಅಧಿವೇಶನದ ಪ್ರತಿನಿಧಿಗಳು ಹಾಗೂ ಸ್ವಯಂ ಸೇವಕರ ಜೊತೆ ಗಾಂಧೀಜಿ



ಕಾಂಗ್ರೆಸ್ ಅಧಿವೇಶನದ ಧ್ವಜ ವೇದಿಕೆ ಬಳಿ ಗಾಂಧೀಜಿ



ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಪೀಠದಲ್ಲಿ ಗಾಂಧೀಜಿ



ಕಾಂಗ್ರೆಸ್ ನಾಯಕರುಗಳು ಮತ್ತು ಪ್ರತಿನಿಧಿಗಳ ಸಮ್ಮುಖದಲ್ಲಿ ಗಾಂಧೀಜಿ



ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

ಪುಸ್ತಕದ ಪ್ರಕಾಶಕರು: ಪಲ್ಲವ ಪ್ರಕಾಶನ (ಪ್ರತಿಗಳಿಗಾಗಿ ಸಂಪರ್ಕಿಸಿ: 94805 83913, 94803 53507)

ಮಹಿಳೆ: ಗಾಂಧೀಜಿಯವರ ಟಿಪ್ಪಣಿಗಳು

ಪುರುಷ ನಿರ್ಮಿಸಿದ ಕಟ್ಟಳೆಗಳು ಮತ್ತು ಮಹಿಳೆ : ಪುರುಷ ನಿರ್ಮಿಸಿದ ಕಟ್ಟಳೆಗಳು ಹಾಗೂ ಕಾನೂನುಗಳ ಅಡಿಯಲ್ಲಿ, ಈ ಕಾನೂನುಗಳನ್ನು ರೂಪಿಸುವಲ್ಲಿ ಯಾವ ಪಾತ್ರವೂ ಇಲ್ಲದ ಮಹಿಳೆ ದಮನಕ್ಕೆ ಒಳಗಾಗಿದ್ದಾಳೆ. ಆದರೆ ಅಹಿಂಸೆಯನ್ನು ಆಧರಿಸಿದ ಜೀವನ ಕ್ರಮದಲ್ಲಿ ಮಹಿಳೆ ತನ್ನ ಬದುಕಿನ ದಿಕ್ಕನ್ನು ತಾನೇ ನಿರ್ಧರಿಸಿಕೊಳ್ಳಲು ಪುರುಷನಷ್ಟೇ ಹಕ್ಕು ಪಡೆದಿರುತ್ತಾಳೆ. ಅಹಿಂಸಾ ಮಾರ್ಗದ ಸಮಾಜದಲ್ಲಿ ಪ್ರತಿಯೊಂದು ಕರ್ತವ್ಯ ಪಾಲನೆಯ ನಂತರವೇ ಒಂದು ಹಕ್ಕು ಹುಟ್ಟುತ್ತದೆ. ಅಂಥ ಸಮಾಜದಲ್ಲಿ ಸಾಮಾಜಿಕ ನಡವಳಿಕೆಯ ನಿಯಮಗಳು ಪರಸ್ಪರ ಸಹಕಾರ, ಮಾತುಕತೆಯ ಮೂಲಕ ಹುಟ್ಟುತ್ತವೆ. ಅವನ್ನು ಹೊರಗಿನಿಂದ ಹೇರಲಾಗದು. ಮಹಿಳೆಯನ್ನು ಕುರಿತ ತಮ್ಮ ನಡವಳಿಕೆಯ ವಿಚಾರದಲ್ಲಿ ಪುರುಷರು ಈ ಅಂಶವನ್ನು ಪೂರ್ಣವಾಗಿ ಅರಿತಿಲ್ಲ. ಪುರುಷರು ಮಹಿಳೆಯರನ್ನು ತಮ್ಮ ಗೆಳತಿಯರಂತೆಯೋ ಸಹೋದ್ಯೋಗಿಗಳಂತೆಯೋ ಕಾಣದೆ, ತಮ್ಮನ್ನು ತಾವು ಮಹಿಳೆಯರ ಒಡೆಯರೆಂದು, ದೊರೆಗಳೆಂದು ತಿಳಿದಿದ್ದಾರೆ.

ತಾವೂ ಸ್ವತಂತ್ರರಾಗಬಲ್ಲೆವು ಅಥವಾ ತಾವು ಒಂದಲ್ಲ ಒಂದು ದಿನ ಸ್ವತಂತ್ರರಾಗುತ್ತೇವೆ ಎಂಬುದೇ ಗೊತ್ತಿರದ ಪ್ರಾಚೀನ ಕಾಲದ ಗುಲಾಮರ ಸ್ಥಿತಿಯಂತೆಯೇ ಹೆಚ್ಚು ಕಡಿಮೆ ಮಹಿಳೆಯರ ಸ್ಥಿತಿಯೂ ಇದೆ. ಮಹಿಳೆಯರು ತಮ್ಮನ್ನು ತಾವು ಪುರುಷರ ಗುಲಾಮರೆಂದು ತಿಳಿಯಬೇಕೆಂದು ಅವರಿಗೆ ಬೋಧಿಸಲಾಗಿದೆ. ಮಹಿಳೆಯರು ತಮ್ಮ ಸ್ಥಾನಮಾನವನ್ನು ಪೂರ್ಣವಾಗಿ ಗಳಿಸಿಕೊಳ್ಳುವಂತೆ ಮಾಡುವುದು ಹಾಗೂ ಪುರುಷರಿಗೆ ಸಮಾನವಾಗಿ ತಮ್ಮ ಪಾತ್ರಗಳನ್ನು ನಿರ್ವಹಣೆ ಮಾಡುವಂತೆ ನೋಡಿಕೊಳ್ಳುವುದು ಕಾಂಗ್ರೆಸ್ಸಿಗರ ಕರ್ತವ್ಯ.

ಕಾಂಗ್ರೆಸ್ಸಿಗರು ಮನಸ್ಸು ಮಾಡಿದರೆ ಈ ಕ್ರಾಂತಿ ಸುಲಭ. ಈ ಕೆಲಸವನ್ನು ಕಾಂಗ್ರೆಸ್ಸಿಗರು ತಮ್ಮ ಮನೆಯಿಂದಲೇ ಶುರು ಮಾಡಲಿ. ಪತ್ನಿ ಎಂದರೆ ಗೊಂಬೆಯೆಂದೋ, ತಮ್ಮನ್ನು ತಣಿಸುವ ವಸ್ತುವೆಂದೋ ತಿಳಿಯದೆ, ಆಕೆ ತಮ್ಮ ಸಾರ್ವಜನಿಕ ಸೇವೆಯ ಸಂಗಾತಿಯೆಂದು ಕಾಂಗ್ರೆಸ್ಸಿಗರು ಭಾವಿಸಲಿ.

ಹಳ್ಳಿಯ ಮಹಿಳೆಯರು : ನಮ್ಮ ಹಳ್ಳಿಗಳಲ್ಲಿರುವ ಹೆಂಗಸರು ಗಂಡಸರಿಗೆ ಸಮಾನರೆಂಬುದನ್ನು ತೋರಿಸಿದ್ದಾರೆ, ಹಾಗೂ ಕೆಲವು ದೃಷ್ಟಿಯಿಂದ ಗಂಡಸರ ಮೇಲೆ ಮೇಲುಗೈ ಸಾಧಿಸಿದ್ದಾರೆ ಎಂಬುದನ್ನೂ ನಾನು ಬಲ್ಲೆ. ಆದರೆ ವಸ್ತುನಿಷ್ಠವಾಗಿ ನೋಡಿದವರಿಗೆ, ತಲೆತಲಾಂತರದಿಂದ ಬಂದ ಕಾನೂನು ಹಾಗೂ ರೂಢಿಗತ ಪದ್ಧತಿಗಳೆರಡೂ ಮಹಿಳೆಯ ಸ್ಥಾನವನ್ನು ಕನಿಷ್ಠವಾಗಿಸಿವೆ ಎಂಬುದು ತಿಳಿಯುತ್ತದೆ. ಈ ಕುರಿತು ತೀವ್ರ ಬದಲಾವಣೆಯ ಅಗತ್ಯವಿದೆ ಎಂಬುದನ್ನೂ ಈ ಸನ್ನಿವೇಶ ಒತ್ತಾಯಿಸುತ್ತದೆ. ಅಷ್ಟೇ ಮುಖ್ಯವಾಗಿ, ಈವರೆಗೆ ಮಹಿಳೆಯರನ್ನು ಆಳಿರುವ ಪುರುಷಲೋಕವನ್ನು ಮುನ್ನಡೆಸುವಂಥ ಭಾರತೀಯ ಮಹಿಳೆಯರು ರೂಪುಗೊಳ್ಳಲೆಂಬುದು ನನ್ನ ಕನಸು.

ಧರ್ಮ, ಶಾಸ್ತ್ರಗಳ ನಡುವೆ ಮಹಿಳೆ : ಶಾಸನಗಳನ್ನು ಬಹುತೇಕವಾಗಿ ಗಂಡಸರೇ ಮಾಡುತ್ತಾರೆ. ತಂತಾವೇ ಕೈಗೆತ್ತಿಕೊಂಡ ಈ ಕೆಲಸದಲ್ಲಿ ಗಂಡಸರು ನ್ಯಾಯವಾಗಿ ನಡೆದುಕೊಂಡಿಲ್ಲ ಹಾಗೂ ಸದಾ ಭೇದಭಾವ ಮಾಡುತ್ತಲೇ ಬಂದಿದ್ದಾರೆ. ಮಹಿಳೆಯರ ಮರುಹುಟ್ಟನ್ನು ಕುರಿತ ನಮ್ಮ ಪ್ರಯತ್ನಗಳಲ್ಲಿ ಅತಿ ಹೆಚ್ಚಿನ ಕೆಲಸ ಆಗಬೇಕಾಗಿರುವುದು– ಮಹಿಳೆಯರ ಅತ್ಯಗತ್ಯ ಗುಣಗಳು ಇಂಥಿತವು ಎಂದು ಶಾಸ್ತ್ರಗಳಲ್ಲಿ ಹೇಳಿರುವ ಕೆಟ್ಟ ಕಲೆಗಳನ್ನು ತೆಗೆಯುವ ನಿಟ್ಟಿನಲ್ಲಿ...

ಧರ್ಮ ಹಾಗೂ ರೂಢಿಗತ ನಿಯಮಗಳ ಮೂಲಕ ಮಹಿಳೆಯರ ಮೇಲೆ ಹೇರಲಾದ ವೈಧವ್ಯ ಸಹಿಸಲಾರದ ನೊಗದಂತಿರುತ್ತದೆ. ಅದು ತನ್ನ ಗುಪ್ತ ದುರ್ಗುಣಗಳಿಂದ ಮನೆಯನ್ನು ಕಲುಷಿತಗೊಳಿಸುತ್ತದೆ ಹಾಗೂ ಧರ್ಮದ ಮಟ್ಟವನ್ನು ಕೆಳಗಿಳಿಸುತ್ತದೆ. ನಾವು ಪರಿಶುದ್ಧರಾಗಲು ಬಯಸುವುದಾದರೆ, ಹಿಂದೂ ಧರ್ಮವನ್ನು ಉಳಿಸಬಯಸುವುದಾದರೆ, ಈ ಹೇರಿಕೆಯ ವೈಧವ್ಯದ ವಿಷದಿಂದ ಮೊದಲು ಮುಕ್ತರಾಗಬೇಕು. ಬಾಲವಿಧವೆಯರನ್ನು ಮನೆಯಲ್ಲಿರಿಸಿಕೊಂಡಿರುವ ತಂದೆ ತಾಯಿಗಳು ಧೈರ್ಯ ಮಾಡಿ ಆ ಹೆಣ್ಣು ಮಕ್ಕಳನ್ನು ಸರಿಯಾದ ರೀತಿಯಲ್ಲಿ ಮದುವೆ ಮಾಡಿಕೊಡಬೇಕು.

ಮಹಿಳೆಯ ಹಕ್ಕು : ಹೆಣ್ಣು ಗಂಡಿನಷ್ಟೇ ಬೌದ್ಧಿಕ ಸಾಮರ್ಥ್ಯವುಳ್ಳ ಸಂಗಾತಿ. ಗಂಡಿನ ಪ್ರತಿ ಚಟುವಟಿಕೆಯಲ್ಲೂ ಭಾಗವಹಿಸುವ ಹಕ್ಕು ಅವಳಿಗಿದೆ. ಅವನಷ್ಟೇ ಸ್ವಾತಂತ್ರ□□ದ ಹಕ್ಕು ಅವಳಿಗಿದೆ. ಗಂಡಿಗೆ ತನ್ನ ವಲಯದಲ್ಲಿ ಎಷ್ಟು ಸಂಪೂರ್ಣ ಅಧಿಕಾರವಿದೆಯೋ ಅಷ್ಟೇ ಸಾರ್ವಭೌಮ ಅಧಿಕಾರ ಅವಳಿಗೂ ತನ್ನ ವಲಯದಲ್ಲಿ ಇದೆ...ಕೆಟ್ಟ ಸಾಂಪ್ರದಾಯಿಕ ರೂಢಿಗಳ ಬಲದಿಂದಾಗಿ ಯಾವ ಕೆಲಸಕ್ಕೂ ಬಾರದ ದಡ್ಡ ಗಂಡಸರು ಕೂಡ ಹೆಂಗಸರಿಗಿಂತ ತಾವು ಮೇಲೆಂದು ಆಡುತ್ತಿದ್ದಾರೆ. ಮಹಿಳೆಯರ ಈ ಸ್ಥಿತಿಯಿಂದಾಗಿ ನಮ್ಮ ಅನೇಕ ಚಳುವಳಿಗಳು ನಿಂತು ಹೋಗುತ್ತಾ ಬಂದಿವೆ. ನಮ್ಮ ಬಹುತೇಕ ಪ್ರಯತ್ನಗಳು ಸರಿಯಾದ ಫಲ ಕೊಡದೇ ಹೋಗಿವೆ...

ಮಹಿಳೆಯರ ಹಕ್ಕಿನ ವಿಚಾರದಲ್ಲಂತೂ ನಾನು ರಾಜಿಯಾಗುವವನೇ ಅಲ್ಲ. ನಾನು ಹೆಣ್ಣು ಮಕ್ಕಳನ್ನೂ, ಗಂಡು ಮಕ್ಕಳನ್ನೂ ಪೂರ್ಣ ಸಮಾನವಾಗಿ ನೋಡುವವನು. ಗಂಡು, ಹೆಣ್ಣುಗಳ ನಡುವಣ ಸಂಬಂಧವನ್ನು ಆರೋಗ್ಯಕರವಾದ ಪರಿಶುದ್ಧ ಬೆಳಕಿನಲ್ಲಿ ನೋಡುವುದನ್ನು ಆರಂಭಿಸಿದರೆ, ನಮ್ಮನ್ನು ನಾವು ಮುಂದಿನ ಪೀಳಿಗೆಗಳ ನೈತಿಕ ಕ್ಷೇಮಾಭಿವೃದ್ಧಿಯ ಟ್ರಸ್ಟಿಗಳೆಂದು ಪರಿಗಣಿಸಿದರೆ, ಇಂದು ಕಾಣಬರುತ್ತಿರುವ ಬಹಳಷ್ಟು ದುಃಖ, ಯಾತನೆಗಳನ್ನು ಕೊನೆಗಾಣಿಸಬಹುದು...


ಮಹಿಳೆಯ ಪರಿಶುದ್ಧತೆಯ ಬಗ್ಗೆ ಗಂಡಸರಲ್ಲಿ ಅದೇಕೆ ಅಷ್ಟೊಂದು ವಿಕಾರವಾದ ಆತಂಕವಿದೆ? ಗಂಡಸರ ಪರಿಶುದ್ಧತೆಯ ಬಗ್ಗೆ ಮಾತಾಡುವ ಹಕ್ಕು ಮಹಿಳೆಗೆ ಇದೆಯೇ? ಗಂಡಸರ ಶೀಲಪಾವಿತ್ರ್ಯದ ಬಗ್ಗೆ ಮಹಿಳೆಯರು ಆತಂಕ ವ್ಯಕ್ತಪಡಿಸಿದ್ದನ್ನು ನಾನು ಕೇಳಿಯೇ ಇಲ್ಲ. ಹೀಗಿರುವಾಗ, ಗಂಡಸರು ಮಹಿಳೆಯರ ಪರಿಶುದ್ಧತೆಯನ್ನು ನಿಯಂತ್ರಿಸುವ ಹಕ್ಕು ತಮ್ಮದೆಂದು ತಾವೇ ಯಾಕೆ ಸೊಕ್ಕಿನಿಂದ ಭಾವಿಸಿಕೊಳ್ಳಬೇಕು?

ವರದಕ್ಷಿಣೆಯ ಕ್ರೌರ್ಯ : ವರದಕ್ಷಿಣೆ ಪದ್ಧತಿ ತೊಲಗಲೇಬೇಕು. ಮದುವೆಯೆನ್ನುವುದು ಪೋಷಕರು ಹಣದ ವಿಚಾರಕ್ಕಾಗಿ ಮಾಡಿಕೊಂಡಿರುವ ಏರ್ಪಾಡು ಎಂಬ ಸ್ಥಿತಿ ಬದಲಾಗಲೇಬೇಕು. ವರದಕ್ಷಿಣೆ ಪದ್ಧತಿಗೂ, ಜಾತಿಪದ್ಧತಿಗೂ ಆಳವಾದ ಸಂಬಂಧವಿದೆ. ಒಂದು ಜಾತಿಯ ಕೆಲವು ನೂರು ತರುಣ, ತರುಣಿಯರ ನಡುವೆ ಮಾತ್ರ ಮದುವೆಯಾಗಬೇಕು ಎಂಬ ರೂಢಿಯಿಂದಾಗಿ ಆಯ್ಕೆಯೇ ಸೀಮಿತವಾಗಿಬಿಟ್ಟಿದೆ; ಹೀಗಾಗಿ, ವರದಕ್ಷಿಣೆಯ ಪದ್ಧತಿಯ ವಿರುದ್ಧ ನೀವು ಎಷ್ಟು ಮಾತಾಡಿದರೂ ಅದು ಮುಂದುವರಿಯುತ್ತಲೇ ಇರುತ್ತದೆ. ವರದಕ್ಷಿಣೆಯ ಕೇಡನ್ನು ನಿರ್ಮೂಲನ ಮಾಡಬೇಕೆಂದರೆ ಹುಡುಗ, ಹುಡುಗಿಯರು ಹಾಗೂ ಅವರ ತಂದೆ ತಾಯಿಯರು ಜಾತಿಯ ಕಟ್ಟುಗಳನ್ನು ಹರಿದೊಗೆಯಬೇಕು. ಇದು ಸಾಧ್ಯವಾಗಬೇಕೆಂದರೆ, ದೇಶದ ತರುಣ ತರುಣಿಯರ ಮನಸ್ಸನ್ನು ಕ್ರಾಂತಿಕಾರಕವಾಗಿಸಬಲ್ಲ ಸಚ್ಚಾರಿತ್ರದ ಶಿಕ್ಷಣ ಆರಂಭವಾಗಬೇಕು.

...ಮದುವೆಯಾಗಲು ವರದಕ್ಷಿಣೆಯನ್ನು ಒಂದು ಶರತ್ತಾಗಿಸುವ ಯಾವುದೇ ತರುಣ ತನ್ನ ಶಿಕ್ಷಣಕ್ಕೂ, ದೇಶಕ್ಕೂ ಕೆಟ್ಟ ಹೆಸರು ತರುತ್ತಾನೆ. ಸ್ತ್ರೀಕುಲವನ್ನು ಅವಮಾನಗೊಳಿಸುತ್ತಾನೆ. ದೇಶದಲ್ಲಿ ಹಲವು ಯುವ ಚಳುವಳಿಗಳಿವೆ. ಈ ಚಳುವಳಿಗಳು ವರದಕ್ಷಿಣೆಯ ವಿರುದ್ಧ ಚಳುವಳಿ ಹೂಡಬೇಕು. ಮಹಿಳೆಯನ್ನು ಕೀಳಾಗಿಸುವ ವರದಕ್ಷಿಣೆ ಪದ್ಧತಿಯನ್ನು ಖಂಡಿಸಿ ಗಟ್ಟಿಯಾದ ಸಾರ್ವಜನಿಕ ಅಭಿಪ್ರಾಯ ಸೃಷ್ಟಿಯಾಗಬೇಕು; ಅನೈತಿಕ ಮಾರ್ಗದಿಂದ ಪಡೆದ ಚಿನ್ನದಿಂದ ತಮ್ಮ ಕೈ ಹೊಲಸು ಮಾಡಿಕೊಂಡ ತರುಣರನ್ನು ಸಮಾಜದಿಂದ ಬಹಿಷ್ಕರಿಸಬೇಕು. ತಂದೆ ತಾಯಿಗಳು ಇಂಗ್ಲಿಷ್ ಡಿಗ್ರಿಗಳ ಮೋಹಕ್ಕೆ ಬೀಳದೆ, ಪ್ರಾಮಾಣಿಕರಾದ ಧೀರ ತರುಣರನ್ನು ಹುಡುಕಿಕೊಳ್ಳಲು ತಮ್ಮ ಪುಟ್ಟ ಜಾತಿ, ಪ್ರಾಂತ್ಯಗಳ ಆಚೆಗೆ ಬರಬೇಕು.

(ಕನ್ನಡಕ್ಕೆ: ನಟರಾಜ್ ಹುಳಿಯಾರ್)

ವಿಶ್ವವ್ಯಾಪಿ ಬಾಪು



ಕೆನಡ ದೇಶದ ಮ್ಯಾನಿಟೋಬಾ ರಾಜ್ಯದ ವಿನ್ನಿಪೆಂಗ್ ನಗರದ ' ಕೆನಡಾ ಮಾನವ ಹಕ್ಕುಗಳ ಮ್ಯೂಸಿಯಮ್ ' ಮುಂದೆ ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 500 ಕೆ.ಜಿ ತೂಕದ ಕಂಚಿನ ಪುತ್ಥಳಿಯನ್ನು 2010 ರಲ್ಲಿ ಅನಾವರಣಗೊಳಿಸಲಾಗಿದೆ.

ಶಿಲ್ಪಿ : ರಾಮ್ ವಾಂಜಿ ಸುತಾರ್.

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58